


"ನಾಲ್ಕು ದಶಕಗಳಿಗಿಂತಲೂ ಹೆಚ್ಚುಕಾಲ ನಾನು ಜನತೆಯ ಹೋರಾಟಗಳಲ್ಲಿ ಭಾಗವಹಿಸಿದ್ದೇನೆ. ಅವುಗಳ ಮೂಲಕ ನನ್ನ ವ್ಯಕ್ತಿತ್ವ ರೂಪಗೊಂಡಿದೆ. ಸಾಮಾನ್ಯ ಜನರ ಜೊತೆ ಸೇರಿ ಹೋರಾಟ ನಡೆಸಿ ಅವರಿಂದ ಕಲಿತ ಅನುಭವಗಳು ನನಗೆ ಮುಂದೆ ಸಾಗಲು ಸ್ಫೂರ್ತಿ ನೀಡಿವೆ. ನನ್ನ ಜೀವನದ ಕಥೆಯು ನನ್ನ ದೇಶದ ಕೋಟಿಗಟ್ಟಲೆ ಜನರ ಚರಿತ್ರೆಯ ಒಂದು ಭಾಗವಾಗಿದೆ. ನನ್ನ ದೇಶದ ಜನರು ಒಂದು ದಿನ ಖಂಡಿತವಾಗಿಯೂ ಕ್ರಾಂತಿ ಮತ್ತು ಸಮಾಜವಾದದ ಹಾದಿಯಲ್ಲಿ ಮುಂದುವರಿದು ಯಶಸ್ಸನ್ನು ಗಳಿಸುವರೆಂಬ ಭರವಸೆ ನನಗಿದೆ"

ಎ.ಕೆ.ಜಿ. ನಮ್ಮನ್ನಗಲಿ ಮಾರ್ಚ್ 22ಕ್ಕೆ 12 ವರ್ಷಗಳಾಗುತ್ತವೆ

ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೧೨ ಮಾರ್ಚ್ ೧೯, ೧೯೮೯ ರೂ. ೧-೦೦

ಕರ್ನಾಟಕ ಪ್ರಾಂತ ರೈತ ಸಂಘ-9ನೇ ಸಮ್ಮೇಳನ;

..... ಜನ ಸಿಡಿದೇಳಬೇಕು

ಕಾ|| ಸೂರ್ಯನಾರಾಯಣರಾವ್

ಕಾನೂನಿರುವುದು ನಮಗಾಗಿ, ಜನರಿಗಾಗಿ, ಕಾನೂನಿಗಾಗಿ ಜನರಲ್ಲ. ಜನರಿಗೆ, ದೇಶದ ರಕ್ಷಣೆಗೆ . ಕಾನೂನು ಅಡ್ಡ ಬಂದರೆ ಜನ ಕಾನೂನು ಮುರಿದು ಮುನ್ನುಗ್ಗಬೇಕು ಎಂದು ಘೋಷಿಸಿದವರು ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾ|| ಸೂರ್ಯನಾರಾಯಣರಾವ್ ರವರು. ಕರ್ನಾಟಕ ಪ್ರಾಂತ ರೈತ ಸಂಘದ 9ನೇ ರಾಜ್ಯ ಸಮ್ಮೇಳನದ ಮುಕ್ತಾಯ ಸಮಾರಂಭ ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

'ನಿನ್ನೆ ಲೋಕಸಭೆಯಲ್ಲಿ ನಡೆದ ಘಟನೆಯನ್ನುಲ್ಲೇಖಿಸುತ್ತಾ, ದೇಶದ ರಕ್ಷಣೆಗೆ ಗಂಡಾಂತಕಾರಿಯಾದ ಮನುಷ್ಯನನ್ನು-ಹಿಂದಿನ ಪ್ರಧಾನಿ ಇಂದಿರಾಗಾಂಧಿಯವರ ಕೊಲೆಯ ಸಂದರ್ಭದಲ್ಲಿ ಸಂದೇಹಾಸ್ಪದವಾಗಿ ವರ್ತಿಸಿದನೆಂದು ಠಕ್ಕರ್ ಆಯೋಗ ಗುರುತಿಸಿರುವ ಆರ್.ಕೆ.ಧಾವನ್‌ನನ್ನು ಮತ್ತೆ ದೇಶದ ಎಲ್ಲ ಆಗು ಹೋಗುಗಳ ಕೇಂದ್ರ ಸ್ಥಾನವಾದ ಪ್ರಧಾನಿಯ ಕಾರ್ಯಾಲಯಕ್ಕೆ ವಾಪಸ್ ಕರೆಸಿಕೊಂಡಿರುವುದನ್ನು ಪ್ರತಿಭಟಿಸಿ ಸಂಸತ್ತಿನ ಕಾರ್ಯ ಕಲಾಪಗಳ ನಿಯಮಾವಳಿಗಳನ್ನು ಮುರಿದು ವಿರೋಧ ಪಕ್ಷದ ಎಲ್ಲಾ 63 ಸದಸ್ಯರೂ ಒಟ್ಟಿಗೆ ಸಸ್ಪೆಂಡಾದ ಪ್ರಸಂಗ ಇಂತಹ ಸಂದರ್ಭಗಳಲ್ಲಿ ಜನ ಎದ್ದೇಳಬೇಕು ಎನ್ನುವುದರ ಸೂಚಿ ಎಂದವರು ಕರೆ ನೀಡಿದರು.

ದೇಶದ ಎಲ್ಲಾ ಜನವಿಭಾಗದಲ್ಲಿ ಅತೃಪ್ತಿ ಬೆಳೆದಿದೆ. ಹಿಂದೆ ಚುನಾವಣೆಗಳಲ್ಲಿ ಆರಿಸಿ ಬಂದ ಸರ್ಕಾರಕ್ಕೆ ಜನ ಬೆಂಬಲ ಇರುತ್ತಿತ್ತು ಆದರೆ ಇಂದು ಪರಿಸ್ಥಿತಿ ವ್ಯತ್ಯಾಸವಾಗಿದೆ. ಈಗಿನ ಸರ್ಕಾರ ಜನ ಸಾಮಾನ್ಯರ ಬೆಂಬಲದಿಂದ ವಂಚಿತವಾಗಿದೆ. ಶ್ರೀಮಂತ ರೈತರೂ ಭೂಮಾಲಕರಲ್ಲಿ ಒಂದು ದೊಡ್ಡ ವಿಭಾಗವೂ ಕೂಡ ಸರ್ಕಾರಕ್ಕೆ ವಿರೋಧವಾಗಿದ್ದಾರೆ ಎಂದವರು ವಿವರಿಸಿದರು.

ರಾಜ್ಯದ ಕಾರ್ಮಿಕ ವರ್ಗ ರೈತರ ಹೋರಾಟಕ್ಕೆ ಪ್ರಾಂತ ರೈತ ಸಂಘದ ಹೋರಾಟಗಳಿಗೆ ಅನೇಕ ಬಾರಿ ಬೆಂಬಲ ನೀಡಿದೆ. ಅಗತ್ಯ ಬಿದ್ದರೆ ಮುಷ್ಕರ ಮಾಡಿ ರೈತರಿಗೆ ಬೆಂಬಲ ಕೊಡಲು ನಾವು ತಯಾರು ಎಂದು ಕಾರ್ಮಿಕ ನಾಯಕರಾಗಿ ಘೋಷಿಸಿದರು.

ಕೈಗಾರಿಕೆಗಳಲ್ಲಿನ ಬಿಕ್ಕಟ್ಟು, ಮುಚ್ಚಿರುವ ಫ್ಯಾಕ್ಟರಿಗಳು ದೇಶವನ್ನಾಳುತ್ತಿರುವ ಬಂಡವಾಳಶಾಹಿ ಭೂಮಾಲಕ ಸರ್ಕಾರದ ಕೈಗಾರಿಕಾ ನೀತಿ, ಕೃಷಿ ನೀತಿಗಳನ್ನವರು ಖಂಡಿಸಿದರು.

ಬಳ್ಳಾರಿಯ ನೆರೆಯ ಜಿಲ್ಲೆ ಆಂಧ್ರದ ಕರ್ನೂಲು ಜಿಲ್ಲೆಯ ಕಾರ್ಮಿಕ ನಾಯಕ ಅಬ್ದುಲ್ ಗಫೂರ್‌ರವರು ತೆಲುಗಿನಲ್ಲಿ ಮಾತನಾಡಿ ತುಂಗಭದ್ರ

ಪುಟ 8

ಒಳಪುಟಗಳಲ್ಲಿ

ರಾಜೀವ್ ಕಾಂಗ್ರೆಸ್ಸಿಗೆ ನೆರವಾಗುತ್ತಿರುವವರು ಯಾರು?

ಕಲ್ಕತ್ತೆಯಲ್ಲಿ ಎಸ್.ಎಫ್.ಐ. ಸಂಘಟಿಸಿದ ರಾಷ್ಟ್ರೀಯ ಪರ್ಯಾಯ ಕುರಿತ ವಿಚಾರ ಸಂಕಿರಣದಲ್ಲಿ ಮಾತಾಡುತ್ತಾ ಜನತಾ ದಳದ ಅತ್ಯುಚ್ಚ ಪದಾಧಿಕಾರಿಗಳಿಬ್ಬರು ಅಧ್ಯಕ್ಷರಾದ ವಿ.ಪಿ. ಸಿಂಗ್ ಮತ್ತು ಉಪಾಧ್ಯಕ್ಷರಾದ ರಾಮಕೃಷ್ಣಹೆಗ್ಡೆ- ಲೋಕಸಭಾ ಚುನಾವಣೆಗಳಲ್ಲಿ ಎಲ್ಲಾ ವಿರೋಧ ಪಕ್ಷಗಳೂ ಸೇರಿದ ಕಾಂಗ್ರೆಸ್-ವಿರೋಧಿ ಸಂಯುಕ್ತ ರಂಗದ ಪ್ರತಿಪಾದನೆ ಮಾಡಿದರು. ಇದು ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿ ಏಕ ಮಾತ್ರ ವಿರೋಧೀ ಅಭ್ಯರ್ಥಿಯಿರುವ "ಒಬ್ಬರಿಗೆ ಒಬ್ಬರು" ತಂತ್ರವಂತೆ.

ಹೆಗಡೆಯವರಂತೂ ತಂತ್ರಕ್ಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ತಂತ್ರಕ್ಕೆ ಸಿ.ಪಿ.ಐ.(ಎಂ)ನ ವಿರೋಧವಿಲ್ಲ ಎಂದು ಸಭಿಕರಿಗೆ ಆಶ್ವಾಸನೆ ನೀಡಿದರು!

ವಿಚಾರ ಸಂಕಿರಣದ ಕೊನೆಯ ದಿನ ಮಾತನಾಡಿದ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ಇದು ತಪ್ಪು ಅಭಿಪ್ರಾಯ ಎಂದರು. ಅಲ್ಪಸಂಖ್ಯಾತರ ಆಯೋಗವನ್ನು ಮುಚ್ಚುವುದು ಮತ್ತು ಕಾಶ್ಮೀರ ಕುರಿತ ಸಂವಿಧಾನದ 370ನೇ ಕಲಮನ್ನು ರದ್ದುಗೊಳಿಸುವುದು- ಇವು ಬಿ.ಜೆ.ಪಿ.ಯ ಎರಡು ಮುಖ್ಯ ಬೇಡಿಕೆಗಳು. ತದ್ವಿರುದ್ಧವಾಗಿ ರಾಷ್ಟ್ರೀಯರಂಗ ಅಲ್ಪಸಂಖ್ಯಾತ ಆಯೋಗವನ್ನು ಮತ್ತಷ್ಟು ಬಲಗೊಳಿಸಿ ಅದಕ್ಕೆ ಶಾಸನಾತ್ಮಕ ಅಧಿಕಾರ ನೀಡಬೇಕೆನ್ನುತ್ತದೆ. ಬಿ.ಜೆ.ಪಿ.ಯಲ್ಲದೆ ಬೇರೆ ಯಾವ ಪಕ್ಷವೂ 370ನೇ ಕಲವನ್ನು ವಿರೋಧಿಸುವುದಿಲ್ಲ. ಇಂತಹ ಪಕ್ಷದೊಡನೆ ರಾಷ್ಟ್ರೀಯ ರಂಗ, ಜನತಾದಳ ಮಿತ್ರಕೂಟ ಹೊಂದಲು ಹೇಗೆ ತಾನೇ ಸಾಧ್ಯ ಎಂದು ಅವರು ಪ್ರಶ್ನಿಸಿದರು.

ಇಂತಹ ಒಂದು ಅಲ್ಪಸಂಖ್ಯಾತ ವಿರೋಧಿ ಪಕ್ಷದ ಮಿತ್ರರೆಂದು ಜನ ನಿಮ್ಮನ್ನು ಗುರುತಿಸಬಯಸುತ್ತೀರಾ? ಈ ಮೂಲಕ ಅಲ್ಪಸಂಖ್ಯಾತ ಕೋಮುಗಳ ಲಕ್ಷಾಂತರ ಮತದಾರರನ್ನು ರಾಜೀವ್ ಗಾಂಧಿಗೆ ಸಮರ್ಪಿಸಬಯಸುತ್ತೀರಾ? - ಇ.ಎಂ.ಎಸ್. ರಾಷ್ಟ್ರೀಯರಂಗದ, ಜನತಾ ದಳದ ಮುಖಂಡರನ್ನು ತೀಕ್ಷ್ಣವಾಗಿ ಪ್ರಶ್ನಿಸಿದರು. ಇಷ್ಟೇ ಅಲ್ಲ-ತಮ್ಮ ಮುಖಂಡರ ಕೋಮುವಾದಿ, ಪ್ರತ್ಯೇಕತಾವಾದಿಗಳೊಂದಿಗೆ ಹೊಂದಾಣಿಕೆಯ ನೀತಿಗಳಿಂದ ಬಹಳಷ್ಟು ಕಾಂಗ್ರೆಸ್ಸಿಗರು ಬೇಸತ್ತಿದ್ದಾರೆ. ವಿರೋಧ ಪಕ್ಷಗಳತ್ತ ಬರಬಹುದಾದ ಇವರು ಬಿ.ಜೆ.ಪಿ.ಯ ಗೆಳೆತನ ಬೆಳೆಸುವ ಸಣ್ಣ ಪ್ರಯತ್ನ ಕಂಡರೂ ಮತ್ತೆ ರಾಜೀವ್‌ಗಾಂಧಿ ಹಿಂದೆ ಕ್ರೋಢೀಕರಣಗೊಳ್ಳುತ್ತಾರೆ ಎಂದು ಇ.ಎಂ.ಎಸ್. ನೆನಪಿಸಿದರು.

ಸರ್ವರನ್ನೂ ಒಳಗೊಂಡ ವಿರೋಧೀ ಐಕ್ಯತೆಯ ಭಕ್ತ 'ಸ್ಟೇಟ್ಸ್‌ಮನ್' ಪತ್ರಿಕೆಯ ಸಂಪಾದಕ ಕೂಡಾ ಇ.ಎಂ.ಎಸ್.ರವರ ಈ ವಾದವನ್ನು ಒಪ್ಪಿಕೊಳ್ಳಬೇಕಾಯಿತು. ಆದರೂ ಆತ ಸಂಪಾದಕೀಯದಲ್ಲಿ ಇ.ಎಂ.ಎಸ್. ಕಾಂಗ್ರೆಸ್ಸಿಗೆ ನೆರವಾಗುತ್ತಿದ್ದಾರೆ ಎಂದು ಖಂಡಿಸದೇ ಇರಲಿಲ್ಲ- ಆದರೆ ಅದಕ್ಕೆ ಪೂರಕವಾದ ಸಮರ್ಥಕವಾದ ಆತನಲ್ಲಿರಲಿಲ್ಲ.

ಇಲ್ಲಿರುವ ಪ್ರಶ್ನೆ-ಯಾವ ತಂತ್ರ ನಿಜವಾಗಿಯೂ ರಾಜೀವ್‌ಗಾಂಧಿಗೆ ನೆರವಾಗುತ್ತದೆ? ಅಲ್ಪಸಂಖ್ಯಾತ ಮತದಾರರಲ್ಲಿ ಬಹಳಷ್ಟು ಮಂದಿಯನ್ನು ಕಾಂಗ್ರೆಸ್‌ಗೆ ಒಪ್ಪಿಸಿಬಿಡುವ ತಂತ್ರವೋ ಅಥವಾ ಲಕ್ಷಾಂತರ ಅಲ್ಪ ಸಂಖ್ಯಾತರನ್ನು ಮತ್ತು ಹೆಚ್ಚೆಚ್ಚು ಭ್ರಮನಿರಸನ ಹೊಂದುತ್ತಿರುವ ಕಾಂಗ್ರೆಸ್ ಅನುಯಾಯಿಗಳನ್ನು ಗೆದ್ದುಕೊಳ್ಳುವ ತಂತ್ರವೋ?

ಎರಡು ದಿನಗಳ ನಂತರ ಉದಯಪುರದಲ್ಲಿ ನಡೆದ ಬಿ.ಜೆ.ಪಿ.ಯ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆಯ ಕಲಾಪಗಳು, ನಿರ್ಣಯಗಳು ವಿ.ಪಿ. ಸಿಂಗ್, ಹೆಗಡೆಯವರಂತಹವರಲ್ಲಿ ಭ್ರಮನಿರಸನ ಉಂಟು ಮಾಡಿರಬೇಕು. ಬಿ.ಜೆ.ಪಿ. ಈ ಸಭೆಯ ನಂತರ ಒಂದು ಪೂರ್ಣ ಪ್ರಮಾಣದ ಅಲ್ಪಸಂಖ್ಯಾತ-ವಿರೋಧಿ ಹಿಂದೂ ಸಂಕುಚಿತವಾದೀ ಸಂಘಟನೆಯಾಗಿ ಮೂಡಿ ಬಂದಿದೆ. ಕಂಠಮಟ್ಟ ಹಿಂದೂ ಸಂಕುಚಿತವಾದಿ ಕಾರ್ಯಕ್ರಮವಿಲ್ಲದ ಯಾವುದೇ ಸಂಯುಕ್ತ ವಿರೋಧೀರಂಗ ಅದಕ್ಕೆ ಬೇಕಿಲ್ಲವೆಂದು ಅದರ ಮುಖಂಡರು ಸ್ಪಷ್ಟಪಡಿಸಿದ್ದಾರೆ. ಕನಿಷ್ಠ ಮಹಾರಾಷ್ಟ್ರದಲ್ಲಿ ಅದಕ್ಕೆ ಜನತಾದಳವೂ ಬೇಕಿಲ್ಲ, ರಾಷ್ಟ್ರೀಯ ರಂಗವೂ ಬೇಕಿಲ್ಲ. ಮಹಾರಾಷ್ಟ್ರದ ಕುಪ್ರಸಿದ್ಧ ಹಿಂದೂ ಸಂಕುಚಿತವಾದಿ ಶಿವಸೇನೆಯ ಮಿತ್ರತ್ವ ಸಾಕು! ಮಿತ್ರತ್ವದ ಪ್ರಸ್ತಾಪ ಮೊದಲ ಬಾರಿಗೆ ಬಂದಾಗ, ಹಾಗಿದ್ದರೆ ಮಹಾರಾಷ್ಟ್ರದಲ್ಲಿ ಜನತಾದಳ ಬಿ.ಜೆ.ಪಿ.ಯೊಂದಿಗೆ ಮಿತ್ರತ್ವಕ್ಕೆ ಬರುವುದಿಲ್ಲ

ಪುಟ 8


ವೃದ್ಧಿಸಿದ ಐಕ್ಯತೆ; ಗಮನಾರ್ಹ ಮುನ್ನಡೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ಅಖಿಲ ಭಾರತ ಸಮ್ಮೇಳನ ಕಲ್ಕತ್ತಾದಲ್ಲಿ ಸೇರಿದ ಸಂದರ್ಭ ಅಂತರ್ರಾಷ್ಟ್ರೀಯ ರಾಷ್ಟ್ರೀಯವಾಗಿಯೂ ಮಹತ್ವವಾದದ್ದು. ಕಳೆದ 18ವರ್ಷಗಳ ಇತಿಹಾಸದಲ್ಲಿ ಎಸ್.ಎಫ್.ಐ. ಭಾರತ ದೇಶದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಹಾಗೂ ದೇಶಪ್ರೇಮಿ ವಿದ್ಯಾರ್ಥಿಗಳ ಅತ್ಯಂತ ಬಲಿಷ್ಠವಾದ . ಸಂಘಟನೆಯೆಂದು ಸಾಬೀತಾಗಿದೆ. 1 ಲಕ್ಷದ 23 ಸಾವಿರ ಸದಸ್ಯತ್ವದೊಂದಿಗೆ ಆರಂಭಗೊಂಡ ಸಂಘಟನೆ ಕಳೆದ 6ನೆಯ ಸಮ್ಮೇಳನ ವಿಜಯವಾಡದಲ್ಲಿ ಸೇರಿದಾಗ 15 ಲಕ್ಷ ತಲುಪಿತು. ಈ ಸಮ್ಮೇಳನ ಸೇರುತ್ತಿರುವ ಹೊತ್ತಿಗೆ 19 ಲಕ್ಷವನ್ನು ದಾಟಲಾಯಿತು. ದಿನವೊಂದಕ್ಕೆ 5 00 ಜನ ಹೊಸ ಸದಸ್ಯರು ಸಂಘಟನೆಗೆ ಸೇರಿದ್ದಾರೆ.

ಕೇಂದ್ರದ ನೂತನ ಶಿಕ್ಷಣ ನೀತಿಯ ವಾಪಸಾತಿ, ರಾಜೀವ್‌ಗಾಂಧಿ ರಾಜೀನಾಮೆ ಸಂದರ್ಭದಲ್ಲಿ ಎಡ ಮತ್ತು ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯ ಚಳುವಳಿ ಮುಂತಾದ 18 ಪರ್ಯಾಯ ಬೇಡಿಕೆಗಳ ಆಧಾರದಲ್ಲಿ 1988ರ ಸೆಪ್ಟೆಂಬರ್ 26ರಂದು ನಡೆದ ಅಖಿಲ ಭಾರತ ವಿದ್ಯಾರ್ಥಿಗಳ ಮುಷ್ಕರದಲ್ಲಿ 2ಕೋಟಿ ವಿದ್ಯಾರ್ಥಿಗಳನ್ನು ಪಾಲ್ಗೊಳ್ಳಿಸಲಾಯ್ತು. ಈ ಚಾರಿತ್ರಿಕ ಮುಷ್ಕರ ಐಕ್ಯ ಚಳುವಳಿಯ ಸಾಧ್ಯತೆ ಮತ್ತು ಸಾಧನೆಗಳ ಉಬ್ಬರವನ್ನು ಎತ್ತಿ ತೋರಿಸಿತು. ಎಲ್ಲಾ ರಂಗಗಳಲ್ಲಿಯೂ ವಿಫಲವಾಗಿ ಇಡೀ ದೇಶದ ಜನತೆಗೆ ಕಂಟಕ ಪ್ರಾಯವಾಗಿ ಪರಿಣಮಿಸಿರುವ ರಾಜೀವ್‌ಗಾಂಧಿ ಸರ್ಕಾರವನ್ನು ಕಿತ್ತೊಗೆಯದೇ ಗತ್ಯಂತರವಿಲ್ಲದಿರುವ ಈ ಐಕ್ಯತೆಯನ್ನು ಇನ್ನೂ ಮುಂದಕ್ಕೆ ಕೊಂಡೊಯ್ಯುವುದು ಈ ಸಮ್ಮೇಳನದ ಮುಖ್ಯವಾದ ಕಾರ್ಯಭಾರ ವಾಗಿತ್ತು.

ಈ ಹಿನ್ನೆಲೆಯಲ್ಲಿ 7ನೇ ಸಮ್ಮೇಳನದ ನಡುವೆ ಫೆಬ್ರವರಿ 27ರಂದು ಐಕ್ಯ ವಿದ್ಯಾರ್ಥಿ ಚಳುವಳಿಯ ವಿಶೇಷ ಕಲಾಪವನ್ನು ನಡೆಸಲಾಯಿತು. ಇದರಲ್ಲಿ ಎಸ್.ಎಫ್.ಐ. ಮುಖಂಡರಲ್ಲದೆ ಡಿ.ವೈ.ಎಫ್.ಐ.ನ ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲಾ, ಎ.ಐ.ಎಸ್.ಎಫ್.ನ ಅಧ್ಯಕ್ಷ ರವೀಂದ್ರ ನಾಥ್‌ರಾಮ್, ಎನ್.ಎಸ್.ಯು.(ಎಸ್)ನ ವರುಣಘೋಷ್, ಸ್ಟುಡೆಂಟ್ಸ್ ಫಾರ್ವರ್ಡ್ ಬ್ಲಾಕ್‌ನ ಅರುಣ್ ಚಟ್ಟೋಪಾಧ್ಯಾಯ ಪಾಲ್ಗೊಂಡಿದ್ದರು. ತೆಲುಗುದೇಶಂ ಸಂಘಟನೆಯಿಂದ ಸಂದೇಶ ಬಂದಿತು. ಈ ಎಲ್ಲಾ ಸಂಘಟನೆಗಳ ನಾಯಕರು ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾ|| ನೀಲೋತ್ಪಲಬಸುರವರ ಐಕ್ಯ ಚಳುವಳಿಯ ವಿಶ್ಲೇಷಣೆಯನ್ನು ಒಪ್ಪಿದರು. ದೃಢಪಡಿಸಿದರು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿ- ಯುವಜನರ ಪ್ರಬಲ ಚಳುವಳಿಯನ್ನು ರೂಪಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಪುಟ 4



ಮಹಿಳಾ ಅಸಮಾನತೆಯನ್ನು ಉಲ್ಬಣಗೊಳಿಸುವ ವ್ಯವಸ್ಥೆಗೆ

ಪರ್ಯಾಯ ಕಾನೂನು ವ್ಯವಸ್ಥೆ ಬೇಕು

ಕಳೆದ ಸಂಚಿಕೆಯಲ್ಲಿ ವಿಶೇಷ ಲೇಖನದಲ್ಲಿ, ನೀವು ಕೇಂದ್ರ ಸರ್ಕಾರದ "ಮಹಿಳಾ ಅಭಿವೃದ್ಧಿಯ ಯೋಜನಾ ಕಣ್ನೋಟ" ಅಥವಾ ಎನ್.ಪಿ.ಪಿ.ಯ ಒಂದು ಸ್ಥೂಲ ಚಿತ್ರಣ ನೋಡಿದ್ದೀರಿ. ಕೇಂದ್ರ ಸರ್ಕಾರ ಇದರ ಕರಡು ಪ್ರತಿಗಳನ್ನು ರಾಜ್ಯ ಸರ್ಕಾರಗಳಿಗೆ, ಅಧ್ಯಯನ ಸಂಸ್ಥೆಗಳಿಗೆ, ರಾಜಕೀಯ ಪಕ್ಷಗಳಿಗೆ, ಅಷ್ಟೇ ಏಕೆ ಮಹಿಳಾ ಜನಸಮೂಹದ ಮಧ್ಯೆ ಚಟುವಟಿಕೆಗಳ ಮೂಲಕ ಅನುಭವ ಪಡೆದಿರುವ ರಾಷ್ಟ್ರಮಟ್ಟದ ಮಹಿಳಾ ಸಂಘಟನೆಗಳಿಗೂ ಕಳುಹಿಸಿದೆ ಔಪಚಾರಿಕವಾಗಿ ಅದನ್ನು ಅಂಗೀಕರಿಸುವ ಗಡಿಬಿಡಿಯಲ್ಲಿದ್ದ ಹಿನ್ನೆಲೆಯಲ್ಲಿ ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘದ ನೇತೃತ್ವದಲ್ಲಿ ದೇಶದ ಏಳು ಮಹಿಳಾ ಸಂಘಟನೆಗಳು ದೆಹಲಿಯಲ್ಲಿ ಕಳೆದ ವರ್ಷ ಆಗಸ್ಟ್ 22 ಮತ್ತು 23ರಂದು ಒಂದು ಸಮಾವೇಶ ನಡೆಯಿತು. ಸರ್ಕಾರದ ಕರಡಿನ ಮೇಲೆ ಚರ್ಚೆ ನಡೆಸಿ ಪರ್ಯಾಯ ಕಣ್ನೋಟವೊಂದನ್ನು ಅಂಗೀಕರಿಸಲಾಯಿತು.

ಚರ್ಚೆಗಾಗಿ ವರದಿಯನ್ನು ಉದ್ಯೋಗ, ಆರೋಗ್ಯ, ಶಿಕ್ಷಣ-ಸಂಸ್ಕೃತಿ, ಸಾಮಾಜಿಕ ದಬ್ಬಾಳಿಕೆ, ಕಾನೂನು, ಗ್ರಾಮೀಣ ಅಭಿವೃದ್ಧಿ, ಸಂಘಟನೆ ಮತ್ತು ರಾಜಕೀಯದಲ್ಲಿಯ ಪಾತ್ರ ಎಂದು ಏಳು ವಿಭಾಗಗಳಾಗಿ ಮಾಡಲಾಗಿತ್ತು. ಇವುಗಳಲ್ಲಿ ಕಾನೂನು ಬಗ್ಗೆ ಸಮಾವೇಶ ಚರ್ಚಿಸಿದ ಅಂಶಗಳನ್ನು ಎ.ಐ.ಡಿ.ಡಬ್ಲ್ಯೂ.ಎ. ಕೇಂದ್ರ ಸಮಿತಿ ಸದಸ್ಯೆ ಹಾಗೂ ಕರ್ನಾಟಕದ ರಾಜ್ಯ ಘಟಕದ ಸಂಚಾಲಕಿ ಕಾ॥ ಹರಿಣಿ ಕಕ್ಕೇರಿ ಇಲ್ಲಿ ವಿವರಿಸಿದ್ದಾರೆ.

ಸ್ವಾತಂತ್ರ್ಯಾನಂತರ, ನಮ್ಮ ದೇಶದಲಿ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ವೈಯುಕ್ತಿಕ ಕಾನೂನು, ಅಪರಾಧ ಕಾನೂನು ಮತ್ತು ಕಾರ್ಮಿಕ ಕಾನೂನುಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಲಾಗಿದೆ. ಈ ಕಾನೂನುಗಳು, ಅತ್ಯಾಚಾರ ಕಾಯ್ದೆ, ವರದಕ್ಷಿಣೆ ವಿರೋಧೀ ಕಾಯ್ದೆ, ಅಪರಾಧ ದಂಡ ಸಂಹಿತೆ, ಸಾಕ್ಷ್ಯಾಧಾರ ಕಾಯ್ದೆ, ಸಮಾನವೇತನ ಕಾಯ್ದೆಯನ್ನು ಒಳಗೊಳ್ಳುತ್ತದೆ. ಆದರೆ ಈ ಎಲ್ಲಾ ಬದಲಾವಣೆಗಳನ್ನು ತರಲು ಮಹಿಳಾ ಚಳುವಳಿಯ ನಿರಂತರ ಹೋರಾಟದ ಪಾತ್ರವನ್ನೂ, ಸರ್ಕಾರದ ಅಸಡ್ಡೆತನವನ್ನು ಮೀರಿಯೂ ಪಡೆದ ಕಾನೂನು ಸವಲತ್ತುಗಳನ್ನೂ ಗಮನಿಸುತ್ತಾ ಎನ್.ಪಿ.ಪಿ. ಸಂಪೂರ್ಣವಾಗಿ ವಿಫಲಗೊಂಡಿದೆ.

ಕಾನೂನಿನಲ್ಲಿ ಈ ಎಲ್ಲಾ ಬದಲಾವಣೆಗಳನ್ನು ತಂದರೂ ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ರಾಜಕೀಯವಾಗಿ ಸಮಾನತೆಯನ್ನು ಉಂಟುಮಾಡಲಾಗುತ್ತಿಲ್ಲವೆಂಬ ಅಂಶ ಮತ್ತು ಬೆಳೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ ದಬ್ಬಾಳಿಕೆಗಳನ್ನು ಹಿಡಿದಿಡಲು ಆಗುತ್ತಿಲ್ಲ ವೆಂಬುದನ್ನು ಎನ್.ಪಿ.ಪಿ. ಒಪ್ಪಿ ಕೊಂಡರೂ, ವಿಫಲತೆಯ ಕಾರಣಗಳನ್ನು ಹುಡುಕಲು ಯತ್ನಿಸುತ್ತಿಲ್ಲ.

ಇಂದು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಕೊಡಬೇಕೆಂದಾದಲ್ಲಿ, ಮುಖ್ಯವಾಗಿ ಕಾರ್ಮಿಕ ಕಾನೂನುಗಳು ಮತ್ತು ವೈಯುಕ್ತಿಕ ಕಾನೂನುಗಳಲ್ಲಿ ಸಾಮಾನ್ಯ ನಾಗರೀಕ ಸಂಹಿತೆ (common civil code) ತರುವ ಅವಶ್ಯಕತೆ ಬಹಳವಾಗಿದೆ. ಆದರೆ ಈ ಬಗ್ಗೆ ಕೇಂದ್ರ ಸರ್ಕಾರ ಮಾಡಿದ್ದು ಬಹಳ ಕಡಿಮೆ. ಅಷ್ಟೇ ಅಲ್ಲ ತನ್ನ ಮಹಿಳಾ-ವಿರೋಧಿ ನೀತಿಯಿಂದಾಗಿ, ಮುಸ್ಲಿಂ ಮೂಲಭೂತವಾದಿಗಳ ಜೊತೆಗಿನ ಸಂದರ್ಭ ಸಾದಕ, ರಾಜಿ ಮನೋಭಾವದ ನಿಲುಮೆಯಿಂದಾಗಿ, ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆ ಜೀವನಾಂಶ ಪಡೆಯುವುದರ ಹಕ್ಕನ್ನು, ಧರ್ಮದ ತಳಹದಿಯಲ್ಲಿ ರೂಪುಗೊಂಡ ವೈಯುಕ್ತಿಕ ಕಾನೂನಿನ ಆಧಾರದಲ್ಲಿ ಕಸಿದುಕೊಳ್ಳಲ್ಪಟ್ಟಳು. ಇದ್ದ ಕಾಯ್ದೆಗಳನ್ನು ಜಾರಿಗೊಳಿಸುವಲ್ಲಿಯೂ ಸರ್ಕಾರವು ವಿಫಲಗೊಂಡಿದೆ. 'ವರದಕ್ಷಿಣೆ ವಿರೋಧಿ ಕಾಯ್ದೆ' 1984ರಲ್ಲಿ ಒಮ್ಮೆ 1986ರಲ್ಲಿ ಮತ್ತೊಮ್ಮೆ ತಿದ್ದುಪಡಿಯಾಗಿದ್ದರೂ ಇದನ್ನು ಜಾರಿಗೊಳಿಸುವಲ್ಲಿ ಸರಿಯಾದ ವ್ಯವಸ್ಥೆಯನ್ನೂ ಮಾಡಲಾಗಿಲ್ಲ. ಹೀಗಾಗಿ ಸಂಸತ್ತಿನಲ್ಲಿ,ಡಲಾದ ಅಂಕಿ-ಸಂಖ್ಯೆಗಳೇ ತೋರಿಸುವಂತೆ, ವರದಕ್ಷಿಣೆ ಹತ್ಯೆಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ಸಾಮೂಹಿಕ ಅತ್ಯಾಚಾರಗಳು, ಪೊಲೀಸ್ ಠಾಣೆಯಲ್ಲಿಯ ಅತ್ಯಾಚಾರಗಳು ಮುಂದುವರಿಯುತ್ತಿರುವುದು ಅಷ್ಟೇ ಅಲ್ಲ, ದಾಖಲೆಯಾದವುಗಳಲ್ಲೂ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ ಮಾತ್ರವಲ್ಲ, ಕೆಲವು ಸಂದರ್ಭಗಳಲ್ಲಿ ಅವರನ್ನು ವಿಚಾರಣೆಗೂ ಒಳಪಡಿಸಿಲ್ಲ.

ಪರ್ಯಾಯ ಕಾನೂನು ವ್ಯವಸ್ಥೆ

ಕೇಂದ್ರ ಸರ್ಕಾರದ ಸಮೀಕ್ಷೆ ಮತ್ತು ಅಧ್ಯಯನದ ಪ್ರಕಾರವೇ ಸಮಾನವೇತನ, ಹೆರಿಗೆ ಸೌಲಭ್ಯ, ಕನಿಷ್ಠ ವೇತನಗಳಿಂದ ಮಹಿಳಾ ಕಾರ್ಮಿಕರು ವಂಚಿತರಾಗಿದ್ದಾರೆ. ಇತ್ತೀಚೆಗೆ ಸರ್ಕಾರದ ಕಾರ್ಮಿಕ-ವಿರೋಧಿ ನೀತಿಯಿಂದಾಗಿ ಇಡಲ್ಪಟ್ಟ ಸರ್ಕಾರೀ ಮಸೂದೆ, ಆಸ್ಪತ್ರೆ ಮತ್ತು ಇತರ ಇಲಾಖೆಗಳ ಮಸೂದೆ, ಟ್ರೇಡ್ ಯೂನಿಯನ್ ಆಕ್ಟ್, ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್‌ಗಳಿಗೆ ಸೂಚಿತವಾದ ತಿದ್ದುಪಡಿಗಳು, ಇವೆಲ್ಲವೂ ಒಟ್ಟಾರೆ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುವುದಾಗುತ್ತಿದೆ.

ಎನ್.ಪಿ.ಪಿ.ಯು., ಪ್ರಸ್ತುತ ಸಮಾಜದಲ್ಲಿಯ, ಜಾತಿ, ಮತ, ಧರ್ಮ ಮತ್ತು ಲಿಂಗಭೇದಗಳಿಂದ ಉಂಟಾದ ಅಸಮಾನತೆಯ ಬಗ್ಗೆ ಯೋಚಿಸುವುದೇ ಇಲ್ಲ. ಇವುಗಳ ಆಧಾರದಲ್ಲಿ ಮೂಡಿಬಂದ ಕಾನೂನು ವ್ಯವಸ್ಥೆಯು ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದ್ದು ಇದನ್ನೆಲ್ಲಾ ಹತ್ತಿಕ್ಕುವಂಥ ಒಂದು ಪರ್ಯಾಯ ಕಾನೂನು ವ್ಯವಸ್ಥೆಯನ್ನು ಸೂಚಿಸಲು ಎನ್.ಪಿ.ಪಿ. ಅಸಮರ್ಥವಾಗಿದೆ.

ನಮ್ಮ ದೇಶದಲ್ಲಿಯ ಪ್ರತಿಯೊಬ್ಬ ಪ್ರಜೆಯ ಹಕ್ಕುಗಳೂ ಸಂವಿಧಾನ ಬದ್ಧವಾದುದು. ನಮ್ಮ ಸಂವಿಧಾನವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಪ್ರಜೆಗಳಿಗೆ ಸಮಾನತೆಯನ್ನು ಒದಗಿಸುವ ಔಪಚಾರಿಕ ನಿಲುವನ್ನು ತಳೆದು 1976ರಲ್ಲಿ, 'ಸಮಾಜವಾದ' ಮತ್ತು 'ಜಾತ್ಯಾತೀತ' ಎಂಬ ಪದಗಳನ್ನು ಸೇರ್ಪಡೆ ಮಾಡಿಕೊಂಡು 'ಮೂಲಭೂತ ಹಕ್ಕುಗಳು' ಎಂಬ ವಿಭಾಗದಲ್ಲಿ ಸರಿಯಾದ ಬದಲಾವಣೆಗಳನ್ನು ಮಾಡದೆಯೇ ಸೇರಿಸಿದೆ. ಭಾರತದಲ್ಲಿ ಸೌಹಾರ್ದತೆಯನ್ನು ಉಂಟು ಮಾಡುವ ಮತ್ತು ಮಹಿಳೆಯರ ಸ್ಥಾನ-ಮಾನಗಳನ್ನು ಹೆಚ್ಚಿಸುವಂಥ ಕ್ರಿಯೆಯಲ್ಲಿ ತೊಡಗುವ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಗೆ ಇದೆಯೆಂದು ಹೇಳುತ್ತಿರುವಾಗಲೇ ಪ್ರಭುತ್ವವೇ ಇದನ್ನು ಮಾಡಲಾರದಂಥ ಪರಿಸ್ಥಿತಿ ಬಂದೊದಗಿದೆ. ಏಕೆಂದರೆ ಈವರೆಗೂ ನಮ್ಮ ಸಂವಿಧಾನವು 'ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಿ ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆಯು ಲಿಂಗಾಧಾರಿತ ದಬ್ಬಾಳಿಕೆ ಎಂದು ಪರಿಗಣಿಸದೆ ಹೋದದು. 1979ರಲ್ಲಿ ಸಂಯುಕ್ತ ರಾಷ್ಟ್ರದ ಸಮ್ಮೇಳನದಲ್ಲಿ 93 ರಾಷ್ಟ್ರಗಳ ನಿರ್ಣಯದ ಪ್ರಕಾರ (ಕಲಂ 5 1) "ಮಹಿಳೆಯರ ಬಗ್ಗೆಗಿನ ಸರ್ವ ರೀತಿಯ ಭೇಧ ಭಾವಗಳನ್ನು ತೊಡೆದು ಹಾಕಬೇಕು" ಎಂದಿದ್ದು ಅದನ್ನು ನಮ್ಮ ದೇಶದಲ್ಲಿನ್ನು ಜಾರಿ ಮಾಡುವುದಾಗಿಲ್ಲ.

ನಮ್ಮ ದೇಶದಲ್ಲಿ ಸಂವಿಧಾನವು ಸಮಾಜದಲ್ಲಿಯ ನಡವಳಿಕೆಗಳನ್ನು ಖಾಸಗಿ ಜೀವನ ಮತ್ತು ಸಾಮಾಜಿಕ ಜೀವನ ಎಂಬ ಎರಡು ಪ್ರತ್ಯೇಕ ವರ್ತುಲಗಳನ್ನಾಗಿ ವಿಭಾಗಿಸಿ ಕಾನೂನು ಬದ್ಧಗೊಳಿಸಲಾಗಿದೆ. ಕೌಟುಂಬಿಕ ವಿಷಯಗಳನ್ನು ಖಾಸಗಿ ಜೀವನವೆಂದು ಪರಿಗಣಿಸಿ ಇದಕ್ಕೆ ಸಂಬಂಧಿಸಿದಂತೆ ವೈಯುಕ್ತಿಕ ಕಾನೂನನ್ನು ಪ್ರತ್ಯೇಕವಾಗಿ ಮಾಡಿದೆ. ಮತ್ತು ಪ್ರತಿಯೊಂದು ಮತವೂ ತನ್ನದೇ ಆದ ವೈಯುಕ್ತಿಕ ಕಾನೂನನ್ನು ಹೊಂದಿದೆ. ಆದರೆ ಎಲ್ಲ ಮತಗಳಲ್ಲೂ ಇರುವಂಥ ಒಂದೇ ಒಂದು ಸಾಮಾನ್ಯ ವಿಷಯವೆಂದರೆ, ಕುಟುಂಬಗಳು ಗಂಡು-ಹೆಣ್ಣಿನ ನಡುವಿನ ಭೇದ-ಭಾವ ಆಧಾರದ ಮೇಲೆ ರಚಿತವಾದವುಗಳು. ಈ ಎಲ್ಲಾ ವೈಯುಕ್ತಿಕ ಕಾನೂನುಗಳಲ್ಲಿ (ಖಾಸೀ ಪಂಥ ಕಾನೂನು ಒಂದನ್ನು ಬಿಟ್ಟರೆ) ಪುರುಷನೇ ಕುಟುಂಬದ ಪ್ರಮುಖ ಮತ್ತು ಆತನೇ ಮಕ್ಕಳ ಸಹಜ ಪೋಷಕ, ಅವನೇ ಅನುವಂಶಿಕ ವಾರಸುದಾರನಾದ ಕಾರಣ, ಕಾನೂನಿನ ದೃಷ್ಟಿಯಲ್ಲಿ ಅವನಿಗೇ ಆಸ್ತಿಯ ಮೇಲೆ ಅಧಿಕಾರವಿದೆ. ಮನೆಯ ಚೌಕಟ್ಟಿನ ಹೊರಗೆ ದುಡಿಯುವ ಹಕ್ಕು ಮಹಿಳೆಗಿಲ್ಲದ ಕಾರಣ, ಇಬ್ಬರೂ ಬೇರೆ ಬೇರೆಡೆ ದುಡಿಯುತ್ತಿರುವ ಪಕ್ಷದಲ್ಲಿ ಮನೆಯನ್ನು ಎಲ್ಲಿ ಮಾಡಬೇಕೆಂಬ ನಿರ್ಣಯವನ್ನು ಆಕೆ ಕೈಗೊಳ್ಳುವಂತಿಲ್ಲ. ಮತ್ತು ಮಕ್ಕಳನ್ನು ದತ್ತು ತೆಗೆದುಕೊಂಡು ಪೋಷಕಿಯಾಗುವ ಹಕ್ಕನ್ನೂ ಪಡೆದಿರುವುದಿಲ್ಲ. ಇವೇ ಮುಂತಾದ ವಿಷಯಗಳು ಆಕೆ ಎಷ್ಟೇ ತೊಂದರೆ ಇದ್ದರೂ ವಿವಾಹ ವಿಚ್ಛೇದನೆಯನ್ನು ಪಡೆಯಲು ಕಷ್ಟ ಸಾಧ್ಯ ಮಾಡಿದೆ. ಹೀಗಾಗಿ ತಕ್ಷಣದ ಅವಶ್ಯಕತೆ ಎಂದರೆ ಎಲ್ಲಾ ಧರ್ಮಗಳಿಗೂ ಸಮಾನವಾದ ಮತ್ತು ಕುಟುಂಬದಲ್ಲಿ ಗಂಡು-ಹೆಣ್ಣಿನ ನಡುವೆ ಸಮಾನ ಹಕ್ಕನ್ನು ಸ್ಥಾಪಿಸುವ ಲಿಂಗಭೇದವಿಲ್ಲದ 'ಸಾಮಾನ್ಯ

6

ಮಾರ್ಚ್-28 ವಿಧಾನಸೌಧ ಚಲೋ



ಪ್ರತಿವರ್ಷದಂತೆ ಡಿ.ವೈ.ಎಫ್.ಐ. ಕೇಂದ್ರ ಸಮಿತಿಯ ಕರೆಯ ಮೇರೆಗೆ ಕರ್ನಾಟಕ ರಾಜ್ಯ ಸಮಿತಿಯು ಮಾರ್ಚ್ 28ರಂದು ವಿಧಾನಸೌಧದೆದರು ನಿರುದ್ಯೋಗ ವಿರೋಧಿ ಯುವ ಪ್ರವಾಹವನ್ನು ಅಣಿನೆರೆಸಲು ಕರೆ ನೀಡಿದೆ. ಅದರಂತೆ ಮಾರ್ಚ್ 23ರಂದು ಭಾರತ ಸ್ವಾತಂತ್ರ್ಯ ಯುವ ಹೋರಾಟಗಾರ ಮತ್ತು ಹುತಾತ್ಮ ಭಗತ್‌ಸಿಂಗ್ ನಾಮಸ್ಮರಣೆಯೊಂದಿಗೆ ಪ್ರಾರಂಭಿಸಿ ಒಂದು ವಾರ ಜಿಲ್ಲಾ, ತಾಲ್ಲೂಕ್ ಹಾಗೂ ಜಿಳಹಂತದಲ್ಲಿ ನಿರುದ್ಯೋಗ ವಿರೋಧಿ ಸಮಾವೇಶ, ಚರ್ಚಾಗೋಷ್ಠಿ, ಪ್ರಚಾರ ಪ್ರಕ್ಷೋಬೆ ಹಾಗೂ ಧರಣಿ ಸತ್ಯಾಗ್ರಹ ಘೇರಾವೋ ಮುತಾದ ಕಾರ್ಯಕ್ರಮ ನಡೆಸುವ ಪೂರ್ವಭಾವಿ ತಯಾರಿ ನಡೆದಿದೆ.

ರಾಷ್ಟ್ರದಲ್ಲಿ ನಿರುದ್ಯೋಗಿ ಸೈನ್ಯ ಆತಂಕಕಾರಿಯಾಗಿ ಹದಿನೈದು ಕೋಟಿ ಸಂಖ್ಯೆಯನ್ನು ಮೀರುತ್ತಿದೆ. ಅದನ್ನು ಕಡಿಮೆ ಮಾಡುವ, ಪರಿಹಾರವೊದಗಿಸುವ ಕಾರ್ಯಕ್ರಮದ ಯೋಜನೆ ಸರ್ಕಾರದ ಮುಂದಿರುವುದಿಲ್ಲ. ಮುಖ್ಯವಾಗಿ ಸಂವಿಧಾನಬದ್ಧ ಉದ್ಯೋಗದ ಭರವಸೆ, ಭದ್ರತೆ ನೀಡುವ ಜವಾಬ್ದಾರಿ ಸರ್ಕಾರ ಕೂಡ ನಮ್ಮ ಮುಂದಿರುವುದಿಲ್ಲ. ಪ್ರಧಾನಿ ಯುವಕರಾದರೂ ಅವರಲ್ಲಿ ಯುವ ಸಮಸ್ಯೆಗಳನ್ನು ಪರಿಹರಿಸುವ ಯೋಜನೆಗಳಿರುವುದಿಲ್ಲ. ಬದಲಾಗಿ ಅವರು ಅಧಿಕಾರಕ್ಕೆ ಬಂದ ನಂತರ ಕೇವಲ ನಾಲ್ಕೇ ವರ್ಷಗಳಲ್ಲಿ ಸುಮಾರು 20 ಲಕ್ಷಕ್ಕೂ ಮಿಗಿಲಾಗಿ ನಿರುದ್ಯೋಗಿಗಳು ಹೆಚ್ಚಾಗಿರುತ್ತಾರೆ.

ಆಧುನೀಕತೆಯ ಹೆಸರಿನಲ್ಲಿ ಸಾಮ್ರಾಜ್ಯಶಾಹಿಗಳ ಶರತ್ತುಗಳಿಗೆ ಶರಣಾಗಿ ದುಡಿಯುವ ಕೈಗಳ ಸ್ಥಳದಲ್ಲಿ ಕಂಪ್ಯೂಟರ್ಸ್‌ಗಳನ್ನು ಉತ್ಪಾದನೆಯಲ್ಲಿ ಅಳವಡಿಸುವ ಭರಾಟೆಯಲ್ಲಿ ತೊಡಗಿದ್ದಾರೆ. ಹೀಗಾಗಿ ಶ್ರೀಮಂತರು ಮತ್ತೂ ಶ್ರೀಯುತರಾಗುತ್ತಾರೆ. ಉದ್ಯೋಗ ಸೃಷ್ಟಿಸುವ ಮಾತಿರಲಿ ಉದ್ಯೋಗಿಗಳು ಪ್ರತಿದಿನವೂ ಸಹಸ್ರ ಸಂಖ್ಯೆಯಲ್ಲಿ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ.

21ನೆಯ ಶತಮಾನದಲ್ಲಿ ಕಾಲಿಡಲಿರುವ ನಾವು ಅಲ್ಲಿ ಪ್ರಾಜ್ವಲ್ಯಮಾನವಾದ ಬಾಳಿನ ಬೆಳಕನ್ನು ಕಾಣದೆ ಕಾರ್ಗತ್ತಲಿನಲ್ಲಿ ತಡಕಾಡುವಂತೆ ಪ್ರವೇಶ ಮಾಡುತ್ತೇವೆ. ಏಕೆಂದರೆ, ಈ ಬಂಡವಾಳಶ್ಯ ಭೂಮಾಲೀಕ ವರ್ಗಗಳು ತಮ್ಮಲ್ಲಿನ ಅಂಟು ಜಾಡ್ಯದಂತಿರುವ ನಿರುದ್ಯೋಗ, ಅನರಕ್ಷತೆ, ಹಾಗೂ ಗರೀಬತನಗಳನ್ನು ಈಗಿನ ಸಂಖ್ಯೆಗಳಿಗಿಂತಲೂ ಅತ್ಯಧಿಕವಾಗಿ ಕೊಂಡೊಯ್ಯುವುದಲ್ಲದೆ, ರಾಷ್ಟ್ರದಲ್ಲಿಂದು ಹಿಂದೆಂದಿಗಿಂತಲೂ ಈಗ ಬಹಿರಂಗವಾಗಿಯೇ ಕೋವಿ, ಕತ್ತಿ ಬಾಂಬ್‌ಗಳಂತಹ ಮಾರಕಾಸ್ತ್ರಗಳನ್ನು ಝಳಪಿಸುತ್ತಿರುವ ಜಾತೀಯ, ಮತೀಯ ಹಾಗೂ ಸಂಕುಚಿತ ಪ್ರಾಂತೀಯ ಛಿದ್ರಕಾರಕ, ರಾಷ್ಟ್ರದ ಸಮಗ್ರತೆ ಐಕ್ಯತೆಯ ವಿರೋಧಿ ಕಪ್ಪು ಶಕ್ತಿಗಳನ್ನೂ ಕೊಂಡೊಯ್ಯಲಿದ್ದಾರೆ.

ಪ್ರಗತಿಪರ ಭೂಸುಧಾರಣೆ ಮಾಡದೆ, ವೈಜ್ಞಾನಿಕ ಸೌಲಭ್ಯಗಳನ್ನುಪಯೋಗಿಸಿ ಲಭ್ಯವಿರುವ ನೈಸರ್ಗಿಕ ಸಂಪತ್ತನ್ನು ಉತ್ಪಾದನಾ ಘಟಕಗಳನ್ನು ನಿರ್ಮಿಸಿ ಅಸಂಖ್ಯಾತ ಉದ್ಯೋಗಗಳನ್ನು ಸ ಷ್ಟಿ ಮಾಡುವುದು ಹಾಗೂ ಸಂವಿಧಾನದಲ್ಲಿ ದುಡಿಯುವ ಹಕ್ಕು ಮೂಲಭೂತ ಹಕ್ಕನ್ನಾಗಿಸೇರಿಸದೆ,ಚುನಾವಣಾದ ಷ್ಟಿಯನ್ನಿಟ್ಟುಕೊಂಡು ಆಗಾಗ ಪೊಳ್ಳು ಘೋಷಣೆಗಳನ್ನು ನೀಡಿ ಜನರು ಅದರ ಬಗ್ಗೆ ತೀಕ್ಷ್ಣವಾಗಿ ಚಿಂತಿಸದಂತೆ ದಿಕ್ಕು ತಪ್ಪಿಸುತ್ತಿದ್ದಾರೆ.

1971 ಅಕ್ಟೋಬರ್ 14ರಂದು ಶ್ರೀಮತಿ ಇಂದಿರಾಗಾಂಧಿ ಅವರು ಬಳ್ಳಾರಿಯ ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಶಂಕುಸ್ಥಾಪನೆ ಮಾಡಿದರು. ಅದೇ ದಿನ ಶೇಲಂ ಮತ್ತು ವಿಶಾಖಪಟ್ಟಣಂ ಉಕ್ಕಿನ ಸ್ಥಾವರಗಳಿಗೂ ಶಂಕುಸ್ಥಾಪನೆ ಮಾಡಿದ್ದರು. ಈ ಎರಡು ಸ್ಥಾವರಗಳು ಉತ್ಪಾದನಾ ಹಂತದಲ್ಲಿವೆ. ಆದರೆ ಬಳ್ಳಾರಿಯ ತೋರಣಗಲ್‌ನ ವಿಜಯನಗರ ಕಾರ್ಖಾನೆಯ ಶಂಕುಸ್ಥಾಪನೆಯ ಸ್ತಂಭ ಈಗ ವಿಜಯನಗರ ಸಾಮ್ರಾಜ್ಯದ ಗತಕಾಲದಷ್ಟೇ ಹಳೆಯದಾಗುತ್ತಿದೆ. ಹಾಗೆಯೇ ಗರೀಬಿ ಹಟಾವೋ ಘೋಷಣೆ ನೀಡಿದ್ದನ್ನು ಈಗ ನಾವು ಮರೆತಿದ್ದೇವೆ.

ಇತ್ತೀಚೆಗಿನ ತಮಿಳುನಾಡು ಚುನಾವಣೆಯ ಸಂದರ್ಭದಲ್ಲಿ ರಾಜೀವ್ ಗಾಂಧಿ ಅವರು ಬೇಕಾರಿ ಹಟಾವೋ (ನಿರುದ್ಯೋಗ ಹಟಾವೋ) ಘೋಷಣೆ ನೀಡಿದ್ದು ಹೆಚ್ಚು ಪ್ರಚಾರ ಗಿಟ್ಟಿಸುವಲ್ಲಿ ವಿಫಲವಾಗಿದೆ. ಪ್ರಧಾನಿ ಮುರಾರ್ಜಿ ಅವರು ಮುಂದಿನ ಹತ್ತು ವರ್ಷಗಳಲ್ಲಿ ನಿರುದ್ಯೋಗ ನಿರ್ಮೂಲನ ಮಾಡುವುದಾಗಿ ಘೋಷಿಸಿದ್ದರು. ಜನತಾ ಅಧ್ಯಕ್ಷ ಚಂದ್ರಶೇಖರ್ ಅವರು ಕೇಂದ್ರದಲ್ಲಿ ಜನತಾ ಅಧಿಕಾರಕ್ಕೆ ಬಂದಾಗ ತಾನು ಇನ್ನು ಮುಂದೆ ಬಡವರಿಗಿರುವ ಭಾರದಲ್ಲಿ ಸೈಕಲ್‌ನಲ್ಲಿ ಪ್ರಯಾಣಿಸುವುದಾಗಿ ಹೇಳಿದ್ದರು.

ಸೈಕಲ್ ತುಳಿದುಕೊಂಡು ಹೋಗುವ ಚಿತ್ರ ಪೇಪರ್‌ಗಳಲ್ಲಿ ಪ್ರಕಟವಾಗಿತ್ತು. ಈಗ ಚಂದ್ರಶೇಖರ್ ಮತ್ತು ನಾವೂ ಮರೆತಿದ್ದೇವೆ. ರಾಮಕೃಷ್ಣಹೆಗ್ಡೆ ಅವರು 1985 ರ ಚುನಾವಣಾ ಘೋಷಣೆಯಲ್ಲಿ ಮನೆಗೊಂದು ಉದ್ಯೋಗ ಭರವಸೆ ನೀಡಿದ್ದರು. ಈ ಚುನಾವಣಾ ವರ್ಷದಲ್ಲಿ ರಾಜೀವ್‌ರವರು ನೆಹರೂ ಯೋಜನೆ ರೂಪಿಸಿದ್ದಾರೆ. ಅದರಂತೆ ಅವರೂ ಸಹ ಮನೆಗೊಂದು ಉದ್ಯೋಗ ನೀಡುವ ಯೋಜನೆ ಇದೆ ಎಂದು ಹೇಳಲಾಗಿದೆ.

ಮನೆಗೊಂದು ಉದ್ಯೋಗದ ಭರವಸೆ ನೀಡಿದ ಹೆಗಡೆ ಬೇಕಾರಿ ಹಟಾವೋ ಘೋಷಣೆ ನೀಡಿದ್ದ ರಾಜೀವ್ ಘೋಷಣೆ ನೀಡುವ ಮೊದಲು ಮತ್ತು ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬಾರದೆಂದು ಸುತ್ತೋಲೆ ಕಳುಹಿಸಿದ್ದರು.

ಈಗೇನಾಗಿದೆ ಎಂದರೆ, ಸಮಸ್ಯೆಗಳನ್ನು ಹಟಾವೋ ಮಾಡುವುದಕ್ಕೆ ಬದಲಾಗಿ ಸಮಸ್ಯೆಯ ಹಿಂದಿರುವ ಜನಕೋಟಿಯನ್ನೇ ಹಟಾವೋ ಮಾಡುವ ಯೋಜನೆಗಳನ್ನು ರಾಜೀವ್ ಸರ್ಕಾರ ಅಳವಡಿಸಿದೆ. ಹೀಗಾಗಿ ಒಂದೂವರೆ ಲಕ್ಷಕ್ಕೂ ಮಿಗಿಲಾಗಿ

7

ಜೇವರ್ಗಿ ತಾ॥ ಪ್ರಥಮ ಸಮ್ಮೇಳನ

ತಾಲ್ಲೂಕಿನ ಹರವಾಳ ಗ್ರಾಮದಲ್ಲಿ ಮಾರ್ಚ್ 1ರಂದು ಪ್ರಥಮ ಸಮ್ಮೇಳನ ನಡೆಯಿತು. 1983ರಿಂದಲೂ ರೈತ ಸಂಘ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತ ಹೋರಾಡುತ್ತಾ ಬಂದಿದೆ. ಅಂದು ಬೆಳಿಗ್ಗೆ ಧ್ವಜಾರೋಹಣದ ನಂತರ ಸಮ್ಮೇಳನದ ಕಾರ್ಯಕಲಾಪಗಳು ಆರಂಭಗೊಂಡವು.

ಯು.ಕೆ.ಪಿ.ಯ ಕ್ಯಾಂಪ್‌ನ್ನು ಔರಾಧಿಯಲ್ಲಿ ಸ್ಥಾಪಿಸುವ ಬದಲಾಗಿ ಸಾಳಾಳ ಶರಣ ಬಸವೇಶ್ವರ ಗುಡಿಯ ಹತ್ತಿರ ಸ್ಥಾಪಿಸಬೇಕು, ಬರಗಾಲ ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ಪರಿಹಾರ ಒದಗಿಸಬೇಕು, ಹಸಿರು ಕಾರ್ಡ್ ನೀಡಬೇಕು ಮುಂತಾದ ಬೇಡಿಕೆಗಳ ಕುರಿತು ನಿರ್ಣಯ ಕೈಗೊಳ್ಳಲಾಯಿತು.

ಸಂಜೆ ನಡೆದ ಬಹಿರಂಗ ಸಭೆಯಲ್ಲಿ ಗುಲ್ಬರ್ಗಾ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ॥ ಮಾರುತಿ ಮಾನ್ಪಡೆ ಹಾಗೂ ಅಧ್ಯಕ್ಷ ಕಲ್ಲಪ್ಪ ಕಿರಣಗಿಯವರು ಮಾತನಾಡಿ ಬೆಳೆಗೆ ನ್ಯಾಯ ದೊರಕಿಸುವಲ್ಲಿ, ಬರಗಾಲಕ್ಕೆ ಶಾಶ್ವತ ಪರಿಹಾರ ಒದಗಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರೈತರ ಸಮಸ್ಯೆ ಕುರಿತು ಕೇಂದ್ರ-ರಾಜ್ಯ ಸರ್ಕಾರಗಳೆರಡು ನಿರ್ಲಕ್ಷ್ಯ ತೋರುತ್ತಿವೆ ಎಂದು ಆರೋಪಿಸಿದರು. ಮೊದಲಿಗೆ ಕಾ॥ ಸಿದ್ದಣ್ಣ ಹರವಾಳ ಸ್ವಾಗತಿಸಿ ಕಾ॥ ಮಲ್ಲಣ್ಣಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿ ಮುಖಂಡ ಕಾ॥ ನಿಂಗಣ್ಣ ಮೊರಟಗಿ ಶುಭಾಶಯ ಕೋರಿದರು.

ನೂತನ ತಾಲ್ಲೂಕು ಸಮಿತಿಗೆ ಕಾ॥ ಮಲ್ಲಣ್ಣಗೌಡ ಪಾಟೀಲ (ಅಧ್ಯಕ್ಷರು), ರಾಯಪ್ಪ ಯಗೋಡ, ವೆಂಕೋಬರಾವ, ಮರೆಪ್ಪ ಅರವಾಳ (ಉಪಾಧ್ಯಕ್ಷರು), ಸೋಮಶೇಖರಯ್ಯ ಎಸ್. ಇನಾಮದಾರ (ಕಾರ್ಯದರ್ಶಿ) ಚಂದಪ್ಪ ವಿಶ್ವಕರ್ಮ, ಗುರುಪಾದ ನಾಗವತ್ತ (ಸಹಕಾರ್ಯದರ್ಶಿಗಳು) ಪರಮಾನಂದ ಮೊರಟಗಿ (ಕೋಶಾಧಿಕಾರಿ)ಯಾಗಿರುವ 13 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ಸಕ್ಕರೆ ಕಾರ್ಖಾನೆ ಆರಂಭ, ಕಬ್ಬು ಬೆಳೆಗಾರರಿಗೆ ನ್ಯಾಯ ಬೆಲೆ ನೀಡಬೇಕು, ಹರಿಜನರು ಹಾಗೂ ಹಿಂದುಳಿದ ಜನರ ಮೇಲಿನ ದಬ್ಬಾಳಿಕೆ ನಿಲ್ಲಬೇಕು ಮುಂತಾದ ನಿರ್ಣಯ ಸ್ವೀಕರಿಸಲಾಯಿತು.

ನೂತನ ಜಿಲ್ಲಾ ಸಮಿತಿಗೆ ಶಿವಶೆಟ್ಟಿ ಚೆಲುವಾ (ಅಧ್ಯಕ್ಷ) ವಿಠಲರಾವ ಖಾಶೆಂಪುರ, ದಿಲೀಪ್‌ಕುಮಾರ್ ಗುನಾಲಿ, ವಾಮನರಾವ (ಉಪಾಧ್ಯಕ್ಷರು) ಸಂಗ್ರಾಮ ಪ್ರಭುರಾವ್, ಈಶ್ವರ ಅಮಲಾಪುರ (ಕಾರ್ಯದರ್ಶಿಗಳು) ಗುಲಾಂರಾಹುಲ, ಕರಸಪ್ಪ, ಪ್ರೇಮ್‌ಸಿಂಗ್ (ಸಹಕಾರ್ಯದರ್ಶಿಗಳು) ಶಂಕರ ಬೇಲೂರ್ (ಖಜಾಂಚಿ) ರವರನ್ನೊಳಗೊಂಡ 27 ಯನ್ನು ಹಾಗೂ ರಾಜ್ಯ ಸಮ್ಮೇಳನಕ್ಕೆ 5 ಜನ ಪ್ರತಿನಿಧಿಗಳನ್ನು ಆರಿಸಲಾಯಿತು.

ಕುಪ್ಪೆಪದವು ಬೀಡಿ ಸಂಘದ ಮಹಾಸಭೆ

ಫೆಬ್ರವರಿ 26ರಂದು ಕುಪ್ಪೆ ಪದವು ಬೀಡಿ ಕೆಲಸಗಾರರ ಸಂಘದ 7ನೇ ವಾರ್ಷಿಕೋತ್ಸವ ಮಹಾಸಭೆಯು ಕಾ॥ ಸುಂದರ್ ನಾಯ್ಕರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾ॥ ವಾಸುದೇವ ಆಚಾರಿ ವರದಿ ಮಂಡಿಸಿದರು. ಸದಾಶಿವದಾಸ್ ಲೆಕ್ಕಪತ್ರ ಮಂಡಿಸಿದರು. ವಿವಿಧೆಡೆಗಳಿಂದ 400 ಪ್ರತಿನಿಧಿಗಳು ಭಾಗವಹಿಸಿದ್ದರು.

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಕಾರ್ಯದರ್ಶಿ ಕಾ॥ ಯು.ಬಿ. ಲೋಕಯ್ಯನವರು ಮಾತನಾಡಿ ಕಂಟ್ರಾಕ್ಟ್ ಪದ್ಧತಿಯು ಮಾಲೀಕರ ಶೋಷಣೆಗೆ ಎಡೆ ಮಾಡಿಕೊಟ್ಟಿದೆ ಇದರ ರದ್ಧತಿಗಾಗಿ ಸಿ.ಐ.ಟಿ.ಯು.ನಿರಂತರವಾಗಿ ಹೋರಾಟ ಮಾಡುತ್ತಾ ಬರಿದಿದೆ ಎಂದರು. ಮಾಲೀಕ ಮತ್ತು ಬೀಡಿ ಕಾರ್ಮಿಕರ ಮಧ್ಯೆ ನೇರ ಸಂಪರ್ಕವಿರಬೇಕೆಂದು ಅವರು ಒತ್ತಾಯಿಸಿದರು. ಬೀಡಿ ಕಾರ್ಮಿಕ ನಾಯಕರಾದ ಕಾ॥ ರಮಣಿ, ಜೆ.ವೀರಪ್ಪ, ಎಂ.ಹೊನ್ನಯ್ಯರವರು ಶುಭ ಕೋರಿ ಮಾತನಾಡಿದರು. ಕಂಟ್ರಾಕ್ಟ್ ಪದ್ಧತಿ ರದ್ದು, ಸಾವಿರ ಬೀಡಿಗೆ ಕನಿಷ್ಠ 20 ರೂ. ಕೂಲಿ, ಬೋನಸ್ಸು, ರಾಷ್ಟ್ರೀಯ ಕನಿಷ್ಠ ಕೂಲಿ ಜಾರಿ, ಸ್ಕಾಲರ್‌ಷಿಪ್ ನೀಡಬೇಕು ಮುಂತಾದ ಬೇಡಿಕೆಗಳೊಂದಿಗೆ ಕೈಗಾ ಅಣುಸ್ಥಾವರ ಸ್ಥಾಪನೆಯಾಗಬೇಕು. ತ್ರಿಪುರಾದಲ್ಲಿ ಕಾಂಗ್ರೆ ದಬ್ಬಾಳಿಕೆ ನಿಲ್ಲಬೇಕು. ಸ್ಥಳೀಯವಾಗಿ ಜನರ ಸಮಸ್ಯೆಗಳಾದ ರಸ್ತೆಗೆ ಡಾಮರ್ ಹಾಕಬೇಕು. ಮೂಡಬಿದ್ರೆ-ಮಂಗಳೂರು ಸೇರಿಸುವ ಸೇತುವೆ ನಿರ್ಮಾಣವಾಗಬೇಕು. ಸಫ್ದರ್ ಹಾಶ್ಮಿಯವರ ಕೊಲೆಯ ಖಂಡನೆ ಮುಂತಾದ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ಸಿಐಟಿಯು ರಾಜ್ಯ ಸಮಿತಿ

1.	ಬಿ. ಮಾಧವ	19.	ಎ.ಎಂ. ಜಾನ್ ವಿನ್ಸೆಂಟ್
2.	ಕೆ. ಶಂಕರ್	20.	ಇ.ಕೆ.ಎನ್.ರಾಜನ್
3.	ಸಿ. ನಾರಾಯಣ	21.	ನಾರಾಯಣರಾವ್ ಬಾನು
4.	ಪದ್ಮಾವತಿ	22.	ಕುರ್ಷಿದಾ ಬೇಗಂ
5 .	ಡೇವಿಡ್ ಕರ್ಕಡ	23.	ಮೋಹನ್‌ಕುಮಾರ್
6.	ಯು.ಬಿ. ಲೋಕಯ್ಯ	24.	ಜಯರಾಂ
7.	ಜೆ. ಬಾಲಕೃಷ್ಣ ಶೆಟ್ಟಿ	25 .	ಭಾಗ್ಯಮ್ಮ
8.	ಸುಕುಮಾರ್	26.	ಟಿ.ಎಸ್. ಮಣಿ
9.	ಟಿ. ಗುಲಾಬಿ	27.	ಸವರಿದಾಸ್
10.	ವಿಶ್ವನಾಥರೈ	28.	ನಿತ್ಯಾನಂದಸ್ವಾಮಿ
11.	ಹರೀಶ್ ನಾಯಕ್	29.	ಆರ್.ಬಿ. ಅಂಗಡಿ
12.	ಬಡೇಸಾಬ್	30.	ವಿ.ಎಂ. ಪೂಜಾರ್
13.	ಟಿ.ಎಸ್. ಅನಂತ್‌ರಾಮ್	31.	ಉಮೇಶ್ ಪಿ.ನಾಯಕ್
14.	ಅಬ್ರಹಾಂ	32.	ಟಿ.ಎಸ್. ನಾಯಕ್
15 .	ಎಂ. ಮುನಿರೆಡ್ಡಿ	33.	ಸಿ.ಎ. ಪಾಟೀಲ
16.	ಎಂ.ಎಂ. ರಾಜಮ್ಮ	34.	ಪುರುಷೋತ್ತಮ್
17.	ಕೆ.ಎಸ್. ಸುಬ್ರಮಣ್ಯ	35 .	ಕೆ.ಟಿ. ರಾಘವೇಂದ್ರ
18.	ಆರ್. ಶ್ರೀನಿವಾಸ್	36.	ವಿ. ಕೋದಂಡರಾಮ್

ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ನೂತನ ಸಮಿತಿ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿ.ಐ.ಟಿ.ಯು.) ಬೆಂಗಳೂರು ಜಿಲ್ಲಾ ಮೂರನೇ ಸಮ್ಮೇಳನ ಫೆಬ್ರವರಿ 18, 19ರಂದು ಬೆಂಗಳೂರಿನಲ್ಲಿ ಜರುಗಿತು. ಈ ಸಮ್ಮೇಳನದ ಉದ್ಘಾಟನಾ ಸಮಾರಂಭದ ಸುದ್ದಿಯನ್ನು ಈ ಹಿಂದೆ ವರದಿ ಮಾಡಲಾಗಿದೆ. ಈ ಸಮ್ಮೇಳನದಲ್ಲಿ ಚುನಾಯಿತವಾದ ಬೆಂಗಳೂರು ಜಿಲ್ಲಾ ಸಮಿತಿ ಪದಾಧಿಕಾರಿಗಳು ಈ ಕೆಳಕಂಡಂತಿದ್ದಾರೆ.

ಕಾ॥ ವಿ.ಜೆ.ಕೆ. ನಾಯರ್	(ಅಧ್ಯಕ್ಷರು)
ಕಾ॥ ಟಿ.ಎಸ್. ಅನಂತರಾಮ್	(ಉಪಾಧ್ಯಕ್ಷರುಗಳು)
ಕಾ॥ ಅಬ್ರಹಾಂ	,,
ಕಾ॥ ಮುನಿರೆಡ್ಡಿ	,,
ಕಾ॥ ಎಂ.ಎಂ.ರಾಜಮ್ಮ	,,
ಕಾ॥ ಕೆ. ಎಸ್. ಸುಬ್ರಮಣ್ಯ	(ಪ್ರಧಾನಕಾರ್ಯದರ್ಶಿ)
ಕಾ॥ ಆರ್.ಶ್ರೀನಿವಾಸ್	(ಕಾರ್ಯದರ್ಶಿಗಳು)
ಕಾ॥ ಕೆ.ವಿ. ಶ್ರೀನಿವಾಸ್	,,
ಕಾ॥ ಇ.ಕೆ.ಎನ್.ರಾಜನ್	,,
ಕಾ॥ ಎ.ಎಂ. ಜಾನ್ ವಿನ್ಸೆಂಟ್	,,
ಕಾ॥ ನಾರಾಯಣರಾವ್‌ಭಾನು	(ಖಜಾಂಚಿ)

ಹಾಗೂ 5 0 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಜಿಗಣಿಯಲ್ಲಿ ಸಿ.ಐ.ಟಿ.ಯು. ಸಂಘ ಉದ್ಘಾಟನೆ

ಇದೇ ಫೆಬ್ರವರಿ27ರಂದು 'ಜಿಗಣಿ ಕೈಗಾರಿಕಾ ಪ್ರದೇಶ ಕಾರ್ಮಿಕರ ಸಂಘ'ವನ್ನು ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಕಾ॥ ಎಸ್. ಸೂರ್ಯನಾರಾಯಣರಾವ್ ಉದ್ಘಾಟಿಸಿದರು. ಉದ್ಘಾಟನಾ ಕಾರ್ಯಕ್ರಮ ನಡೆದ ರೀತಿ ಈ ಸಂಘ ಅಲ್ಲಿಯ ಯುವ ಕಾರ್ಮಿಕರ ಆಸೆ, ಆಕಾಂಕ್ಷೆಗಳ ಪ್ರತೀಕವಾಗಿ ಆರಂಭವಾಗಿದೆ ಎಂಬ ಭರವಸೆ, ಉತ್ಸಾಹ ಮೂಡಿಸುವಂತಿತ್ತು.

ಜಿಗಣಿ ಆನೇಕಲ್ ತಾಲ್ಲೂಕಿನಲ್ಲಿದೆ. ಬೆಂಗಳೂರಿನಿಂದ 25 ಕಿ.ಮೀ. ದೂರದಲ್ಲಿ ಒಂದು ಕೈಗಾರಿಕಾ ಪ್ರದೇಶ ಇಲ್ಲಿದೆ. ಹಲವಾರು ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಇಲೆಕ್ಟ್ರಾನಿಕ್ ಉದ್ಯಮಗಳು, ಇನ್ನೂ ಕೆಲವು ಇಂಜಿನಿಯರಿಂಗ್ ಉದ್ದಿಮೆಗಳು. ಸುಮಾರು ಒಂದು ಸಾವಿರ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದಾರೆ. ಯುವಕರು, ಶಿಕ್ಷಣ, ಐ.ಟಿ.ಐ. ತರಬೇತಿ ಪಡೆದವರು. ಆದರೆ ಸಂಬಳ ಅತ್ಯಂತ ಕಡಿಮೆ, ಸೇವಾ ನಿಯಮಗಳು ಇನ್ನೂ ಶೋಚನೀಯ.

ಇಲ್ಲಿ ಒಂದು ಉದ್ದಿಮೆಯಿದೆ. ಟೆಲಿವಿಶನ್ ಮತ್ತು ಇತರ ಇಲೆಕ್ಟ್ರಾನಿಕ್ ಉಪಕರಣಗಳಿಗೆ ಬೇಕಾಗುವ ಪಿ.ಸಿ.ಬಿ.ಗಳನ್ನು ತಯಾರಿಸುವ ಉದ್ದಿಮೆ. ಒಬ್ಬನೇ ಮಾಲೀಕನಾದರೂ ಕಾರ್ಮಿಕರಿಗೆ ಸೌಲಭ್ಯಗಳನ್ನು ವಂಚಿಸಲು ಎರಡು ಹೆಸರಿನಲ್ಲಿ ನಡೆಯುತ್ತಿದೆ- ಮೈಕ್ರೋಪ್ಯಾಕ್ಸ್ ಮತ್ತು ಮಿನಿ ಸರ್ಕ್ಯೂಟ್ಸ್ ಮಾಲಿಕ ಸೂಪರ್‌ಲಾಭ ಗಿಟ್ಟಿಸುತ್ತಿದ್ದರೂ ಕಾರ್ಮಿಕರಿಗೆ ಯಾವ ಸೌಲಭ್ಯವೂ ಇಲ್ಲ, ಕೆಲಸದ ಭದ್ರತೆಯೂ ಇಲ್ಲ. 5 ರಿಂದ 12 ವರ್ಷದವರೆಗೆ ಅಪ್ರೆಂಡಿಸ್‌ಶಿಪ್. ಕೇವಲ 300 ರೂ. ಸ್ಟೈಪಂಡ್‌ಗೆ ದುಡಿಮೆ. ಮಾಲಿಕನಿಗೆ ಬೇಡವೆನಿಸಿದಾಗ ಕೆಲಸದಿಂದ ಬರ್ಖಾಸ್. ಈ ಹುಡುಗರು ತಮ್ಮ ಉದ್ಯೋಗ ಜೀವನ ಮಾನ ರಕ್ಷಣೆಗೆ ಹೋರಾಡಲು ಕಾರ್ಮಿಕ ಸಂಘ ಕಟ್ಟಿಕೊಳ್ಳಲು ನಿರ್ಧರಿಸಿದರು. ಇದರ ಫಲವೇ 'ಜಿಗಣಿ ಇಂಡಸ್ಟ್ರೀಯಲ್ ಏರಿಯಾ ವರ್ಕರ್ಸ್ ಯೂನಿಯನ್!'

ಸಂಘ ಕಟ್ಟಿಕೊಳ್ಳುತ್ತಾರೆಂಬ ಸುದ್ದಿ ತಿಳಿದು ಮಾಲಿಕನ ಕಿರುಕುಳ ಆರಂಭವಾದರೂ ಎದೆಗುಂದದೆ ಕಾರ್ಮಿಕರು ಮುನ್ನಡೆದರು. ಉದ್ಘಾಟನಾ ಸಮಾರಂಭವನ್ನು ವಿಫಲಗೊಳಿಸಲು ಕೂಡಾ ಮಾಲಿಕರು ಸರ್ವಪ್ರಯತ್ನ ನಡೆಸಿದರು. ಓವರ್ ಟೈಮ್‌ನ ಆಮಿಷ, ವೇತನ ಕಡಿತದ ಬೆದರಿಕೆ, ಹಿರಿಯ ಅಧಿಕಾರಿಗಳ ಹದ್ದು ಕಣ್ಣುಗಳು, ಸುತ್ತಲೂ ಪೋಲೀಸರು-ಯಾವುದನ್ನೂ ಕಾರ್ಮಿಕರು ಸ್ವಲ್ಪವೂ ಲೆಕ್ಕಿಸಲಿಲ್ಲ. ಅತ್ಯುತ್ಸಾಹದಿಂದ ಸಮಾರಂಭದಲ್ಲಿ ಭಾಗವಹಿಸಿದರು. ಅದನ್ನು ನಿರೀಕ್ಷೆಗೂ ಮೀರಿ ಯಶಸ್ವಿಗೊಳಿಸಿದರು. ಸುತ್ತಲ ಪ್ರದೇಶ ಕಾರ್ಮಿಕರ ಘೋಷಣೆಗಳಿಂದ ತುಂಬಿ ಹೋಯಿತು.

ಕಾ॥ ಸೂರಿ ತಮ್ಮ ಉದ್ಘಾಟನಾ ಭಾಷಣದಲ್ಲಿ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಗಾರರ ಐಕ್ಯತೆಯ ಅಗತ್ಯವನ್ನು ವಿವರಿಸಿದರು. ಕನಿಷ್ಠ ವೇತನ ರೂ. 1000/-ದ ಬೇಡಿಕೆಗಾಗಿ ಹೋರಾಟಕ್ಕೆ ಸಿದ್ಧವಾಗಿರೆಂದು ಕರೆ ನೀಡಿದರು. ರೈತ ಮುಖಂಡರಾದ ಕಾ॥ ಪಿ.ಜಗನ್ನಾಥ್, ಕಾ॥ ರಮೇಶ್, ಡಿ.ವೈ.ಎಫ್.ಐ. ಮುಖಂಡ ಕಾ॥ ಶಿವಶಂಕರ್, ವಿಕ್ರಾಂತ್ ಟಯರ್ಸ್ ಕಾರ್ಮಿಕರ ಪರವಾಗಿ ಕಾ॥ ಕೆಂಪಸಿಂಗೇಗೌಡ ಜಿಗಣಿ ಕಾರ್ಮಿಕರನ್ನು ಅಭಿನಂದಿಸಿದರು.

ಸಂಘದ ಅಧ್ಯಕ್ಷ ಕಾ॥ ಕೆ.ವಿ.ಶ್ರೀನಿವಾಸನ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾ॥ ರೆಡ್ಡಿ ಸ್ವಾಗತ ಭಾಷಣ ಮಾಡಿದರು. ಕಾ॥ ಆನಂದಮೂರ್ತಿ ವಂದನಾರ್ಪಣೆ ಮಾಡಿದರು.

"ಯುವ ರಾಜಕೀಯ ಕಾರ್ಯಕರ್ತರಿಗೆ"



ಮಾರ್ಚ್ 23, 1931 ಭಗತ್‌ಸಿಂಗ್ ತನ್ನ ಸಂಗಾತಿಗಳಾದ ಸುಖದೇವ್ ಮತ್ತು ರಾಜಗುರುರವರೊಂದಿಗೆ ಬ್ರಿಟಿಶ್ ಸಾಮ್ರಾಜ್ಯ ಶಾಹಿಗಳ ನೇಣುಗಂಬವೇರಿ ಹುತಾತ್ಮರಾದರು. ಇದಕ್ಕಿಂತ 8 ವಾರಗಳ ಮೊದಲು ಫೆಬ್ರವರಿ 2ರಂದು ಮಹಾತ್ಮಾಗಾಂಧಿ ಮತ್ತು ಲಾರ್ಡ್ ಇರ್ವಿನ್ ನಡುವೆ ಒಂದು ರಾಜಿ ಸೂತ್ರಕ್ಕೆ ಸಹಿ ಬಿತ್ತು. ಭಗತ್ ಸಿಂಗ್ "ಯುವ ರಾಜಕೀಯ ಕಾರ್ಯಕರ್ತ ರಿಗೆ" ಬರೆದ ಪತ್ರದಲ್ಲಿ ಹೀಗಂದಿದ್ದರು.

"ಪ್ರಸ್ತುತ ಆಂದೋಲನ ಒಂದು ತೆರನ ರಾಜಿಯೊಂದಿಗೆ ಅಥವಾ ಪೂರ್ಣ ವಿಫಲವಾಗಿ ಕೊನೆಗೊಳ್ಳಬಹುದು. ಏಕೆಂದರೆ ನಿಜವಾದ ಕ್ರಾಂತಿಕಾರಿ ಶಕ್ತಿಗಳನ್ನು ಇನ್ನೂ ರಣರಂಗಕ್ಕೆ ಆಹ್ವಾನಿಸಲಾಗಿಲ್ಲ. ಇದು ಮಧ್ಯಮ ವರ್ಗದ ಅಂಗಡಿದಾರರು ಮತ್ತು ಕೆಲವು ಬಂಡವಾಳ ಶಾಹಿಗಳನ್ನು ಅವಲಂಬಿಸಿರುವ ಹೋರಾಟ. ಇವರಿಬ್ಬರೂ, ಮುಖ್ಯವಾಗಿ ಬಂಡವಾಳಶಾಹಿಗಳು ತಮ್ಮ ಆಸ್ತಿಗಳಿಗೆ ಸಂಚಕಾರ ತರುವ ಯಾವುದೇ ಹೋರಾಟ ನಡೆಸುವ ಧೈರ್ಯ ಮಾಡರು. ನಿಜವಾದ ಕ್ರಾಂತಿಕಾರಿ ಸೇನೆಗಳು ಹಳ್ಳಿಗಳಲ್ಲಿವೆ, ಕಾರ್ಖಾನೆಗಳಲ್ಲಿವೆ- ರೈತರು ಮತ್ತು ಕಾರ್ಮಿಕರು. ಆದರೆ ನಮ್ಮ ಬೂರ್ಜ್ವಾ ಮುಖಂಡರು ಅವರನ್ನು ನಿಭಾಯಿಸಲು ಹೋಗುವುದಿಲ್ಲ, ಧೈರ್ಯ ತೋರುವುದಿಲ್ಲ. ಮಲಗಿದ ಸಿಂಹವನ್ನು ಒಮ್ಮೆ ಮಂಪರಿನಿಂದ ಜಾಗೃತಗೊಳಿಸಿದರೆಂದರೆ ಅದನ್ನು ಎದುರಿಸುವುದು ಕಷ್ಟ. ನಮ್ಮ ಮುಖಂಡರ ಗುರಿ ಸಾಧಿಸಿದ ನಂತರ ಕೂಡಾ.

1920ರಲ್ಲಿ ಅಹ್ಮದಾಬಾದ್ ಕಾರ್ಮಿಕ ರೊಂದಿಗೆ ತಮ್ಮ ಮೊದಲ ಅನುಭವದ ನಂತರ 'ನಾವು ಕೂಲಿಗಾರರ ಕೈಹಚ್ಚಲು ಎಂದೂ ಹೋಗಬಾರದು. ಕಾರ್ಖಾನೆ ಶ್ರಮಿಕರ ರಾಜಕೀಯ ಬಳಕೆ ಅಪಾಯಕಾರಿ" ಎಂದು ಘೋಷಿಸಿದರು ಮಹಾತ್ಮಾಗಾಂಧಿ. ಅನಂತರ ಬೂರ್ಜ್ವಾ ಮುಖಂಡರೆಂದೂ ಶ್ರಮಿಕರತ್ತ ಸಾಗಲಿಲ್ಲ. ರೈತರತ್ತ ಕೂಡಾ. 1922ರ ಬಾರ್ಡೋಲಿ ಕ್ರಾಂತಿ ಬೃಹತ್ ರೈತ ವರ್ಗ ಮೈಕೊಡವಿ ಒಂದು ವಿದೇಶೀ ಆಳ್ವಿಕೆಯನ್ನು ಮಾತ್ರವಲ್ಲ, ಭೂಮಾಲಿಕರ ನೊಗವನ್ನು ಕಳಚಲು ಎದ್ದು ನಿಂತಾಗ ಈ ಮುಖಂಡರು ಅನುಭವಿಸಿದ ಭಯಾನಕತೆಯನ್ನು ಸ್ಪಷ್ಟವಾಗಿ ಚಿತ್ರಿಸಿದೆ"

ಭಾರತದ ರಾಷ್ಟ್ರೀಯ ಮುಖಂಡತ್ವ ಮತ್ತು ಭಾರತೀಯ ಸಮಾಜದ ಕ್ರಾಂತಿಕಾರಿ ಶಕ್ತಿಗಳ ಬಗ್ಗೆ ಭಗತ್‌ಸಿಂಗ್‌ರವರ ವಿಶ್ಲೇಷಣೆಗೂ ಕಮ್ಯೂನಿಸ್ಟರ ವಿಶ್ಲೇಷಣೆಗೂ ಎಷ್ಟೊಂದು ಸಾಮ್ಯವಿದೆಯಲ್ಲವೇ?

ಬೆಲೆಯೇರಿಕೆ ವಿರುದ್ಧ ಡಿ.ವೈ.ಎಫ್.ಐ. ಧರಣಿ

ಕೆ.ಜಿ.ಎಫ್.

ಬೆಲೆಯೇರಿಕೆ ಕುಡಿಯುವ ನೀರು ವಿದ್ಯುತ್ ಕಡಿತವನ್ನು ವಿರೋಧಿಸಿ ಡಿ.ವೈ.ಎಫ್.ಐ. ಘಟಕದ ಆಶ್ರಯದಲ್ಲಿ ಫೆ. 13ರಂದು ಬೆಳಿಗ್ಗೆಯಿಂದ ಸಂಜೆಯವರೆಗೆ ಪುರಸಭೆ ಹಿಂಬಾಗದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಜಿಲ್ಲಾ ಅಧ್ಯಕ್ಷ ಕಾ॥ ಪಿ.ಶ್ರೀನಿವಾಸ್ ಧರಣಿ ಉದ್ಘಾಟಿಸಿದರು. ಕಾರ್ಮಿಕ ಮುಖಂಡರಾದ ಕಾ॥ ಜಯರಾಂ, ಕುರುವಯ್ಯ, ಕುಪ್ಪುಸ್ವಾಮಿ, ರಾಮಕೃಷ್ಣ ರೆಡ್ಡಿ, ರಾಮಸ್ವಾಮಿ ಮಾತನಾಡಿದ ನಂತರ ಕೆ.ಜಿ.ಎಫ್. ಸಿ.ಪಿ.ಐ.(ಎಂ) ಶಾಸಕರಾದ ಕಾ॥ ಟಿ.ಎಸ್. ಮಣಿಯವರು ಸಮಾರೋಪ ಭಾಷಣ ಮಾಡಿದರು.

ಪುರಸಭೆ ಕಮೀಷನರ್‌ರವರು ಆಗಮಿಸಿ ಮನವಿ ಸ್ವೀಕರಿಸಿ ನೀರಿನ ಹಾಗೂ ಇತರೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಬಗೆಹರಿಸುವ ಆಶ್ವಾಸನೆ ನೀಡಿದರು. ಕೊನೆಗೆ ಕಾ॥ ದಶರಥ್ ವಂದಿಸಿದರು.

ಬೆಂಗಳೂರು

ಕೇಂದ್ರ ಸರ್ಕಾರ ಮಂಡಿಸಿದ ಇತ್ತೀಚಿನ ಬಜೆಟ್‌ನಲ್ಲಿ ಜನಸಾಮಾನ್ಯರು ಬಳಸುವ ಅವಶ್ಯಕ ವಸ್ತುಗಳ ಏರಿಕೆಯಿಂದ ತತ್ತರಿಸಿದ ಜನತೆಯ ಮೇಲೆ ಮತ್ತೆ ಬಜೆಟ್‌ನಿಂದ ಹೊಟ್ಟೆಯ ಮೇಲೆ ಬರೆ ಎಳೆದಂತಾಗಿದೆ. ಇದರಿಂದಾಗಿ ಜನರ ಕೊಳ್ಳುವ ಶಕ್ತಿ ಮತ್ತಷ್ಟು ಕುಸಿಯುವಂತೆ ಮಾಡಿರುವ ರಾಜೀವ್ ಗಾಂಧಿ ಸರ್ಕಾರ ಜನವಿರೋಧಿ ನೀತಿಯನ್ನು ಅನುಸರಿಸುತ್ತಿದೆ ಎಂದು ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿ ಖಂಡಿಸಿದೆ.



ನಮ್ಮ ದೇಶದ 19 ಲಕ್ಷಕ್ಕೂ ಹೆಚ್... ಭಾರತ ವಿದ್ಯಾರ್ಥಿ ಫೆಡರೇಷನ್‌ನ ಏಳನೇ ... ನಿರ್ಧಾರದ ವಾತಾವರಣದಲ್ಲಿ ಕಲ್ಕತ್ತೆಯಲ್ಲಿ ... ಜರುಗಿತು. ಈಗಿನ ಅನುಕೂಲ ಪರಿಸ್ಥಿ... ಗಳನ್ನು ರಾಜೀವ ಸರ್ಕಾರ ಕಿತ್ತೊಗೆಯುವ ... ವಿಚ್ಛಿದ್ರಕಾರಿ, ಮತಾಂಧ ಶಕ್ತಿಗಳ ವಿರುದ್ಧ ... ಗೊಳಿಸುವ ಕಹಳೆಯನ್ನು ಸಮ್ಮೇಳನ ಮೊಳಗಿಸಿತು.

ಸಮ್ಮೇಳನದ ಸ್ಫೂರ್ತಿದಾಯಕ, ಪ... ನೋಟ ಇಲ್ಲಿ ನೀಡಿದ್ದಾರೆ ಎಸ್.ಎಫ್.ಐ. ... ಕಾ॥ ಎಸ್.ವೈ.ಗುರುಶಾಂತ್.

.....ಎಲ್ಲದರಲ್ಲೂ ಪಾ... ಲಕ್ಷಲಕ್ಷ ಹೆಜ್ಜೆಹಾ...

ಮೆತುಗಳ ಕಾಲಗತಿಗೆ ಪಕ್ಕವಾಗಿ ತಾಯಿ ಬೇರಿಗೆ ಗೊಬ್ಬರವಾದ ಎಲೆಗಳು: ನಾಟಿಸುವ ಚಿಗುರುಗಳ ಮರೆಯಿಂದ ಹಾಡುತ್ತಿರುವ ಕೋಗಿಲೆಯ ಕಂಠಕ್ಕೆ ಪ್ರೇರೇಪಿಸುವ ಕೊಂಬೆ- ಸಂಭ್ರಮಗಳ ನಡುವೆ ರೈಲು ಸಾಗಿತ್ತು. ಎಸ್.ಎಫ್.ಐ.ನ ಅಖಿಲ ಭಾರತ ಏಳನೆಯ ಸಮ್ಮೇಳನಕ್ಕೆ ಸಜ್ಜಾಗಿದ್ದ ಕಲ್ಕತ್ತೆಯತ್ತ ನಮ್ಮನ್ನು ಒಯ್ಯುತ್ತಿತ್ತು. ಪ್ರತಿನಿಧಿಗಳನ್ನು ಸ್ವಾಗತಿಸುವ ಘೋಷಣೆಗಳನ್ನು ಕೂಗುತ್ತಿದ್ದ ಸಂಗಾತಿಗಳು ನಾವು ಪಶ್ಚಿಮ ಬಂಗಾಳ ಪ್ರವೇಶಿಸುತ್ತಿರುವುದನ್ನು ನೆನಪಿಸಿಕೊಟ್ಟರು. ವರ್ಣಮಯ ಗೋಡೆ ಬರಹಗಳು, ವೈವಿಧ್ಯಮಯ ಪೋಸ್ಟರುಗಳು, ಸ್ವಾಗತ ಕಮಾನುಗಳು ಎಲ್ಲೆಲ್ಲೂ. ಕಲ್ಕತ್ತಾ ರೈಲು ನಿಲ್ದಾಣದಲ್ಲಿ ಇತರೆ ಪ್ರತಿನಿಧಿಗಳನ್ನು ನಾವು ಸೇರಿಕೊಳ್ಳುತ್ತಲೇ ಉತ್ಸಾಹದ ವಾತಾವರಣದಲ್ಲಿ ಒಂದಾಗಿಬಿಟ್ಟೆವು.

ಏಷಿಯಾದಲ್ಲೇ ಅತ್ಯಂತ ದೊಡ್ಡದಾದ ಸುಪ್ರಸಿದ್ಧ 'ಸಾಲ್ಟ್‌ಲೇಕ್' ಸ್ಟೇಡಿಯಂನಲ್ಲಿ ಪ್ರತಿನಿಧಿಗಳು ತಂಗಲು ವ್ಯವಸ್ಥೆಯನ್ನು ಮಾಡಲಾಗಿತ್ತು. ಆಕರ್ಷಕವಾಗಿ ಅಲಂಕಾರಗೊಂಡ ಸ್ಟೇಡಿಯಂನ ಮುಂಭಾಗದಲ್ಲಿ ಭಾರತದ ದುಡಿಯುವ ವರ್ಗದ ಕ್ರಾಂತಿಕಾರಿ ನಾಯಕರುಗಳಾದ ಕಾ॥ ಪಿ.ಸುಂದರಯ್ಯ, ಕಾ॥ ಪ್ರಮೋದ್ ದಾಸ್ ಗುಪ್ತಾರವರ ಭಾವಚಿತ್ರಗಳುಳ್ಳ ಕಮಾನು ಹಾಕಲಾಗಿತ್ತು. ಕ್ರೀಡಾಂಗಣದ ಪ್ರವೇಶ ದ್ವಾರದಲ್ಲಿ ಕೆಂಪು, ಬಿಳಿ ಬಾವುಟಗಳ ಸುಂದರ ಕಮಾನಗಳು ಸ್ವಾಗತಿಸುತ್ತಿದ್ದವು.

ಬೃಹತ್‌ರ್‍ಯಾಲಿ-ಬಹಿರಂಗ ಸಭೆ

ಫೆಬ್ರವರಿ 24ರಂದು ಬ್ರಿಗೇಡ್ ಪರೇಡ್ ಗ್ರೌಂಡ್‌ನಲ್ಲಿ ಬೃಹತ್ ರ್‍ಯಾಲಿ-ಬಹಿರಂಗಸಭೆಯೊಂದಿಗೆ ಸಮ್ಮೇಳನ ಆರಂಭಗೊಂಡಿತು. ಇದರಲ್ಲಿ ಎರಡುವರೆ ಲಕ್ಷ ವಿದ್ಯಾರ್ಥಿಗಳು, ಒಂದು ಲಕ್ಷಕ್ಕೂ ಅಧಿಕ ನಾಗರೀಕರು ಭಾಗಿಯಾಗಿದ್ದರು. ವೇದಿಕೆಯ ಬಳಿ ಪ್ರತಿನಿಧಿಗಳು ಮೊದಲು ನೆರೆದಾಗ ಬಹಳಷ್ಟು ಖಾಲಿಯಾಗಿ ಕಾಣುತ್ತಿದ್ದ ಮೈದಾನ ಅರ್ಧ ತಾಸು ಜಾರುವುದರೊಳಗೆ ಎಲ್ಲೆಲ್ಲೂ ಜನ ಸಮುದಾಯ ಘೋಷಣೆಗಳಿಂದ ಭೋರ್ಗರೆಯುತ್ತಿತ್ತು. ನಗರದ ವಿವಿಧ ಭಾಗಗಳಿಂದ ರ್‍ಯಾಲಿ ಹೊರಟು ಮೈದಾನದಲ್ಲಿ ಸೇರಿಕೊಂಡವು. ಸಂಘಟಿತ ವಿದ್ಯಾರ್ಥಿ ಚಳುವಳಿಯ ಇತಿಹಾಸದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ವಿದ್ಯಾರ್ಥಿ. ಸಮುದಾಯ ಒಟ್ಟುಸೇರಿದುದು ಇದೇ ಮೊದಲು. ಉ. ಕೊರಿಯಾದ ವಿದ್ಯಾರ್ಥಿ ಸಂಘಟನೆಯ ಪ್ರತಿನಿಧಿ ಮಿಸ್ ತೇಂಜಿಂಗ್‌ರವರು 'ಇದು ಅತ್ಯದ್ಭುತ'ವೆಂದು ಪತ್ರಕರ್ತರೆದುರು ಬೆರಗುಕಣ್ಣಿನಿಂದ ಉದ್ಗರಿಸಿದರು. 'ನೆಲ್ಸನ್ ಮಂಡೇಲಾ ಬಿಡುಗಡೆಯಾಗಲಿ' ಯಿಂದ ಕೆಳಗಿಳಿಯಲಿ 'ಸರ್ವರಿಗೂ ರಾಜೀವ್‌ಗಾಂಧಿ ಅಧಿಕಾರದ ಗುದ್ದುಗೆ ಶಿಕ್ಷಣ ಉದ್ಯೋಗ' ಮುಂತಾದ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಒರಿಸ್ಸಾ, ಆಂಧ್ರಪ್ರದೇಶ, ಉತ್ತರಪ್ರದೇಶ, ಅಸ್ಸಾಂ, ತ್ರಿಪುರಾಗಳಿಂದ ಸಹಸ್ರ ಸಂಖ್ಯೆಯಲ್ಲಿ ಸಂಗಾತಿಗಳು ಬಂದಿದ್ದರು. ಕರ್ನಾಟಕದ ಧಾರವಾಡ ಜಿಲ್ಲೆಯಿಂದ 28 ಸಂಗಾತಿಗಳು ಸೇರಿಕೊಂಡರು.

"ಎಸ್.ಎಫ್.ಐ. ಕನಸುಗಳೊಂದಿಗೆ ಆರಂಭಗೊಂಡಿತು. ಅವುಗಳನ್ನು ನನಸಾಗುತ್ತಿರುವ ಸಂದರ್ಭವಿಂದು ಬಂದಿದೆ" ಎಂದು ಮಾತು ಆರಂಭಿಸಿದ ಪ್ರಧಾನ ಕಾರ್ಯದರ್ಶಿ ಕಾ॥ ನಿಲೋತ್ಪಲಬಸುರವರು "ಶಿಕ್ಷಣ-ಉದ್ಯೋಗದ ಅವಕಾಶಗಳಿಂದ ವಿದ್ಯಾರ್ಥಿ ಯುವಕರನ್ನು ವಂಚಿಸಿ ಜನತೆಯನ್ನು ಅವೈಜ್ಞಾನಿಕತೆಯ ಅಂಧಕಾರ ದಾರಿದ್ರ್ಯತೆಯ ಕೂಪಕ್ಕೆ ತಳ್ಳುತ್ತಿರುವ ಭ್ರಷ್ಟಜನ ವಿರೋಧಿ ರಾಜೀವ್ ಸರ್ಕಾರವನ್ನು ಕಿತ್ತೊಗೆಯುವುದು ನಮ್ಮೆದುರಿನ ಐತಿಹಾಸಿಕ ರಾಜಕೀಯ ಕರ್ತವ್ಯ"ವೆಂದು ಎತ್ತರದ ವೇದಿಕೆ ಮೇಲಿನಿಂದ ಕರೆ ನೀಡಿದರು. ಎಸ್.ಎಫ್.ಐ.ನ ಸಮರಶೀಲ ಹೋರಾಟಗಳನ್ನು ವರ್ಣಿಸಿದ ಎಸ್.ಎಫ್.ಐ. ಅಧ್ಯಕ್ಷ ಕಾ॥ ಎ.ವಿಜಯರಾಘವನ್‌ರವರು ರಾಜೀವ್ ನೀತಿಗಳೆದುರು ಪರ್ಯಾಯ ನೀತಿಗಳಿಗಾಗಿ ಎಡ ಮತ್ತು ಜಾತ್ಯಾತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯ ಹೋರಾಟಕ್ಕೆ ಮುಂದಾಗಬೇಕೆಂದು [illegible]ದರು. ಲಕ್ಷ ಲಕ್ಷ ಸಂಖ್ಯೆಯಲ್ಲಿ ಆಚಿನೆರೆದು ಸಂಘಟಿತ ಶಕ್ತಿಯಾಗಿ ಸೇರಿರುವ ವಿದ್ಯಾರ್ಥಿ ಸಮುದಾಯವನ್ನು ಅಭಿನಂದಿಸಿದರು.

ನಂತರ ಮಾತನಾಡಿದ ಪ.ಬಂಗಾಳದ ಮುಖ್ಯಮಂತ್ರಿ ಕಾ॥ ಜ್ಯೋತಿಬಸುರವರು 'ರಾಜೀವ್ ಸರ್ಕಾರ ಜನತೆಯಿಂದ ದೂರವಾಗುತ್ತಿದ್ದು ಅಂತ್ಯದ ದಿನಗಳನ್ನು ಎಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ದೇಶದ ವಿದ್ಯಾರ್ಥಿ ಯುವಜನ ಸಮುದಾಯ ಹೊಸ ರಾಜಕೀಯ ವ್ಯವಸ್ಥೆಗಾಗಿ ಹೋರಾಟ ನಡೆಸಬೇಕು. ಈ ಕರ್ತವ್ಯದ ನಿರ್ವಹಣೆಯಲ್ಲಿ ಇತರೆ ಜನ ವಿಭಾಗಗಳೊಂದಿಗೆ ರಾಷ್ಟ್ರೀಯ ಐಕ್ಯತೆ, ಸಮಗ್ರತೆಯನ್ನು ಎತ್ತಿ ಹಿಡಿದು ಮುನ್ನಡೆಯಬೇಕೆಂದು ಕರೆ ನೀಡಿದರು. ರ್‍ಯಾಲಿಯನ್ನು ದ್ದೇಶಿಸಿ, ಎಸ್.ಎಫ್.ಐ. ಪ್ರಥಮ ಪ್ರಧಾನ ಕಾರ್ಯದರ್ಶಿ ಬಿಮನ್‌ಬಸು, ಪ.ಬಂಗಾಳ ಘಟಕದ ಅಧ್ಯಕ್ಷ ತಪನ್ ಬಸು, ಕಾರ್ಯದರ್ಶಿ ಸುಜನ್ ಚಕ್ರವರ್ತಿ, ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಾಮಲ್‌ಚಕ್ರವರ್ತಿ, ಮುಂತಾದವರು ಮಾತನಾಡಿದರು. ವಿವಿಧ ದೇಶಗಳಿಂದ ಆಗಮಿಸಿದ್ದ ಸೌಹಾರ್ದ ಪ್ರತಿನಿಧಿಗಳನ್ನು ಪರಿಚಯಿಸಲಾಯಿತು.

ಆರಂಭದಲ್ಲಿ ಗೀತೆಗಳು, ಮತ್ತು ಪಂಜಾಬ್ ಸಂಗಾತಿಗಳಿಂದ ಭಾಂಗ್ರಾ ನೃತ್ಯಗಳು ನಡೆದವು.

ಉದ್ಘಾಟನೆ

ಸಮ್ಮೇಳನದ ಉದ್ಘಾಟನೆಯನ್ನು ಫೆಬ್ರವರಿ 25 ರಂದು ನಿಗದಿಗೊಳಿಸಲಾಗಿತ್ತು. ಉದ್ಘಾಟನಾ ಕಾರ್ಯಕ್ರಮ ಅತ್ಯಂತ ವೈವಿಧ್ಯಮಯವಾಗಿದ್ದು ಮೂರು ಹಂತಗಳಲ್ಲಿ ಇದನ್ನು ನಿಯೋಜಿಸಲಾಗಿತ್ತು. ಪ್ರಥಮ ಹಂತವಾಗಿ: ಎಸ್.ಎಫ್.ಐ. ಬೆಳವಣಿಗೆಯ ಮಹತ್ವ ಪಡೆದಿರುವ ಡಂಡಂ (ಎಸ್.ಎಫ್.ಐ. ಸ್ಥಾಪನಾ ಸಮ್ಮೇಳನದ ತೀರ್ಮಾನವಾದ ಸ್ಥಳ) ಮತ್ತು ನೇತಾಜಿ ನಗರ ಈವೆರಡು ಕಡೆಗಳಿಂದ ಪಂಜನ್ನು ಹೊತ್ತಿಸಿಕೊಂಡು ಸಹಸ್ರಾರು ವಿದ್ಯಾರ್ಥಿಗಳು ಓಡುತ್ತಾ ಮುನ್ನಡೆದರು. ಮುಂಜಾನೆ 9-30ಕ್ಕೆ ಸರಿಯಾಗಿ 'ಮೋಹನ್ ಬಗಾನ್' ಕ್ರೀಡಾಂಗಣವನ್ನು ಈ ತಂಡಗಳು ತಲುಪಿದವು. ಡಾರ್ಜಿಲಿಂಗ್ ಸಂಗಾತಿಗಳ ನೇತೃತ್ವದಲ್ಲಿ ತಂದ ಜ್ಯೋತಿಯನ್ನು ಕಾ॥ ಸುಜನ್ ಚಕ್ರವರ್ತಿ ಇನ್ನೊಂದನ್ನು ಕಾ॥ ತಪಸ್‌ಬಸುರವರು ಪಡೆದರು. ಮೋಹನ್‌ಬಗಾನ್ ಕ್ರೀಡಾಂಗಣದಲ್ಲಿ 'ಕಿಶೋರಿ ವಾಹಿನಿ' ಮಕ್ಕಳು ಪ್ರತಿನಿಧಿಗಳನ್ನು ಸ್ವಾಗತಿಸುವ ಮತ್ತು ...

"ಭವಿಷ್ಯ ವಿದ್ಯಾರ್ಥಿಗಳದ್ದು ಯೋಚಿಸಿ, ಕಾರ್ಯಾಚರಣೆಗಿಳಿಯಿರಿ"

ವಿದ್ಯಾರ್ಥಿಸಂಘಟನೆಗಳು ಮತ್ತು ಆಂದೋಲನಗಳು ತಮ್ಮದೇ ಸಮಸ್ಯೆಗಳಲ್ಲಿ ಮತ್ತು ಅಧ್ಯಯನಗಳಲ್ಲಿ ಆಸಕ್ತಿ ವಹಿಸಬೇಕಷ್ಟೇ ಅಲ್ಲ, ಕೋಟ್ಯಾಂತರ ಜನಗಳ ತಕ್ಷಣದ ಹೋರಾಟಗಳಲ್ಲಿ, ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಿ ವಿಸ್ತರಿಸುವಲ್ಲಿ, ಭಿನ್ನತೆಗಳ ನಡುವೆ ದೇಶದ ಏಕತೆಯನ್ನು ಬಲಪಡಿಸುವಲ್ಲಿ, ನಮ್ಮ ಐಕ್ಯತೆಯನ್ನು ಛಿದ್ರಗೊಳಿಸಿ ಭಾರತವನ್ನು ದುರ್ಬಲಗೊಳಿಸುವ ಸಾಮ್ರಾಜ್ಯಶಾಹಿ ಕುತಂತ್ರಗಳ ವಿರುದ್ಧ ಹೋರಾಟಗಳಲ್ಲಿ ತೊಡಗಿರುವ ವಿವಿಧ ರಾಜಕೀಯ ಪಕ್ಷಗಳ, ಸಾಮೂಹಿಕ ಸಂಘಟನೆಗಳ ಆಂದೋಲನಗಳಲ್ಲಿಯೂ ಆಸಕ್ತಿ ವಹಿಸಬೇಕು.

ಈ ದಾರಿಯಲ್ಲಿ ಸಾಗುವುದಲ್ಲದೇ ವಿದ್ಯಾರ್ಥಿಗಳಿಗೆ ಅನ್ಯಮಾರ್ಗವಿಲ್ಲ ಎಂಬಂತಹ ಒಂದು ಸನ್ನಿವೇಶವನ್ನು ಆಳುವ ವರ್ಗ, ಕಾಂಗ್ರೆಸ್(ಐ) ಮತ್ತು ಸರ್ಕಾರ ನಿರ್ಮಿಸಿವೆ. ಭವಿಷ್ಯ ಅವರದ್ದು. ತಮ್ಮ ಭವಿಷ್ಯದ ಬಗ್ಗೆ ಯೋಚಿಸಿ ಅವರು ಕಾರ್ಯಾಚರಣೆಗಿಳಿಯಬೇಕಾಗಿದೆ.

ನಮ್ಮ ದೇಶದ ಮತ್ತು ವಿಶ್ವದ ಇತಿಹಾಸದಲ್ಲಿ ನಾವು ನೋಡಿದ್ದೇವೆ.- ಪ್ರತಿಗಾಮಿ ಶಕ್ತಿಗಳು ವಿದ್ಯಾರ್ಥಿಗಳು ಹಾಗೂ ಯುವ ಜನರಲ್ಲಿ ಪ್ರತಿಗಾಮಿ ಮತ್ತು ಮತಾಂಧ ಸಿದ್ಧಾಂತಗಳಿಂದ ತುಂಬಿಸಲು ಪ್ರಯತ್ನಿಸುತ್ತವೆ. ಈಗಲೂ ಅಂತಹವೇ ಪ್ರಯತ್ನ ನಡೆಯುತ್ತಿವೆ. ಆದ್ದರಿಂದ ಸತತ ಎಚ್ಚರ, ಎಲ್ಲಾ ಧಾರ್ಮಿಕ ಮೂಲಭೂತವಾದಿಗಳು ಮತ್ತು ಸಂಕುಚಿತ ದೃಷ್ಟಿಯ ಶಕ್ತಿಗಳ ವಿರುದ್ಧ ಸತತ ಸೈದ್ಧಾಂತಿಕ ಮತ್ತು ರಾಜಕೀಯ ಸಮರ ಅಗತ್ಯ.....

ವಿದ್ಯಾರ್ಥಿಗಳಿಗೆ ನೇತೃತ್ವ ನೀಡುತ್ತಿರುವ ಎಸ್.ಎಫ್.ಐ. ತನ್ನ ಸದಸ್ಯರು ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳನ್ನು ಮೂಡಿಸಬೇಕು. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಇತರ ಜನ ವಿಭಾಗಗಳೊಂದಿಗೆ ವಿದ್ಯಾರ್ಥಿಗಳು ಮಹತ್ವದ ಪಾತ್ರ ವಹಿಸಿದ್ದರು. ಈಗ ಭಿನ್ನ ಪರಿಸ್ಥಿತಿಗಳಲ್ಲೂ ಅವರು ನಮ್ಮ ಬಹುದಿನಗಳ ಗುರಿಗಳ ಸಾಧನೆಯಲ್ಲಿ ಒಂದು ಪರಿಣಾಮಕಾರಿ ಮತ್ತು ಸುಯೋಗ್ಯ ಪಾತ್ರ ವಹಿಸಬೇಕು.

-ಕಾ॥ ಜ್ಯೋತಿಬಸು

(7ನೇ ಎಸ್.ಎಫ್.ಐ. ಸಮ್ಮೇಳನದ ಸ್ವಾಗತ ಭಾಷಣದಿಂದ)

ವೃದ್ಧಿಸಿದ ಐಕ್ಯತೆ; ಗಮನಾರ್ಹ ಮುನ್ನಡೆ

ಕರಡು ವರದಿ ಮಂಡನೆ

ಪ್ರತಿನಿಧಿಗಳ ಅಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಯವರು ಕರಡು ರಾಜಕೀಯ ಸಂಘಟನಾ ವರದಿಯನ್ನು ಮಂಡಿಸಿದರು. ಈ ವರದಿಯು ಸಮ್ಮೇಳನ ನಡೆಯುತ್ತಿರುವ ಹಿನ್ನೆಲೆಯ ವಿವರಣೆ, ಜಾಗತಿಕ ಪರಿಸ್ಥಿತಿ, ರಾಷ್ಟ್ರೀಯ ಪರಿಸ್ಥಿತಿ, ಶಿಕ್ಷಣರಂಗ, ವಿದ್ಯಾರ್ಥಿ ಚಳುವಳಿ, ಸಂಘಟನಾ ವರದಿ, ಉಪಸಂಹಾರ ಹೀಗೆ ಭಾಗಗಳನ್ನಾಗಿ ಮಾಡಲಾಗಿತ್ತು. ವರದಿ ಮಂಡಿಸುತ್ತಾ ಮಾತನಾಡಿದ ಕಾ॥ ನಿಲೋತ್ಪಲಬಸುರವರು "ನೂತನ ಶಿಕ್ಷಣ ನೀತಿಯ ಜಾರಿಯನ್ನು ಹಿಮ್ಮೆಟ್ಟಿಸಬೇಕಾದರೆ ರಾಜೀವ್ ಸರ್ಕಾರವನ್ನು ಕಿತ್ತೊಗೆಯುವುದೊಂದೇ ಉಳಿದಿರುವ ದಾರಿ. ಹಾಗೆಯೇ ಕೋಮುವಾದೀ, ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ ನಡೆಸಿ ರಾಷ್ಟ್ರೀಯ ಸಮಗ್ರತೆ ಕಾಪಾಡಲು ಕಾಂಗ್ರೆಯನ್ನು ಪ್ರತ್ಯೇಕಗೊಳಿಸಲು ಹೋರಾಟ ತೀವ್ರಗೊಳಿಸಬೇಕೆಂಬ ರಾಜಕೀಯ ಕರ್ತವ್ಯಕ್ಕೆ ಒತ್ತು ನೀಡಿದರು. ಈ ವರದಿಯ ಮೇಲೆ ವಿವಿಧ ರಾಜ್ಯಗಳಿಂದ 61ಪ್ರತಿನಿಧಿಗಳು ಚರ್ಚಿಸಿದರು. ಕರ್ನಾಟಕವನ್ನು ಪ್ರತಿನಿಧಿಸಿ ಕಾ॥ ರಾಜೇಂದ್ರನ್, ಕಾ॥ ಎನ್.ರಾಮನಗೌಡ, ಮತ್ತು ಕಾ॥ ವಾರಿಜರವರು ವಿವಿಧ ವಿಷಯಗಳ ಮೇಲೆ ಚರ್ಚಿಸಿದರು. ಒಟ್ಟು ಚರ್ಚೆಯ ಗತಿ ಸಂಪೂರ್ಣವಾಗಿ ರಾಜಕೀಯ ಸಂಘಟನಾತ್ಮಕವಾಗಿದ್ದು ತಾತ್ವಿಕ ಐಕ್ಯತೆಯನ್ನು ಅದು ವ್ಯಕ್ತಗೊಳಿಸಿತು.

ಪ್ರತಿನಿಧಿಗಳು-ವೀಕ್ಷಕರು

ದೇಶದ ಎಲ್ಲಾ ರಾಜ್ಯಗಳು-ಕೇಂದ್ರಾಡಳಿತ ಪ್ರದೇಶಗಳಿಂದ ಪ್ರತಿನಿಧಿಗಳು ಆಗಮಿಸಿದ್ದು ದೇಶದ ಚರಿತ್ರೆಯಲ್ಲಿ ಬೇರಾವುದೇ ವಿದ್ಯಾರ್ಥಿ ಸಂಘಟನೆಗಳಿಗೆ ಇರದ ಹಿರಿಮೆಯದು. 917 ಪ್ರತಿನಿಧಿಗಳು 86 ವೀಕ್ಷಕರು ಮತ್ತು ಕೇಂದ್ರ ಸಮಿತಿಯ ಸದಸ್ಯರು 59 (ಒಟ್ಟು 1062) ಹಾಜರಿದ್ದರು. ಕರ್ನಾಟಕದಿಂದ 31062 ಸದಸ್ಯತ್ವ ಪ್ರತಿನಿಧಿಸಿ 16 ಪ್ರತಿನಿಧಿಗಳು 5 ವೀಕ್ಷಕರು 2 ಕೇಂದ್ರ ಸಮಿತಿ ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ರಾಜೇಂದ್ರನ್, ಮಾಯ, ಅನಂತ, ಕೃಷ್ಣಪ್ಪ ಕೊಂಬಾಡಿ, ಚಂದ್ರಶೇಖರ್, ರಾಮನಗೌಡ, ಶೀಲ್ಯಾಖಾದ್ರಿ, ಅಕ್ಕಮ್ಮ, ಮಂಜುನಾಥ್, ಷಣ್ಮುಖಪ್ಪ, ಬಾಲಪ್ಪ, ಶಾಂತರಾಮನಾಯಕ್ ವಾರಿಜ, ಬಸವರಾಜ ಜಜಂತಿ, ಮೋಹನರೆಡ್ಡಿ ಪಾರ್ವತಿಕಲಾಲ್, ಬಿ.ಉಮೇಶ್, ನಾರಾಯಣಸ್ವಾಮಿ, ಈಶ್ವರಚಂದ್ರ, ಸಿದಪ್ಪ ಕುಕನಪಳ್ಳಿ, ನಾರಾಯಣ ರಾಂಪುರ, ಕೇಂದ್ರ ಸಮಿತಿಯ ಸದಸ್ಯರಾದ ಎಸ್.ವೈ. ಗುರುಶಾಂತ್, ಬಯ್ಯಾರೆಡ್ಡಿ ಹಾಜರಿದ್ದರು.

ಸೌಹಾರ್ದ ಸಂಘಟನೆಗಳಿಂದ ಶುಭಾಶಯಗಳು

ಎಸ್.ಎಫ್.ಐ. ಹಿಂದಿನ ನಾಯಕರು ಮತ್ತ ವಿವಿಧ ಸೌಹಾರ್ದ ಸಂಘಟನೆಗಳ ಮುಖಂಡರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ನಿರ್ಣಯಗಳು

ಸಮ್ಮೇಳನ ಆರಂಭದಲ್ಲಿ ಹುತಾತ್ಮರಾದ 16 ಎಸ್.ಎಫ್.ಐ. ಸಂಗಾತಿಗಳಿಗೆ ಶ್ರದ್ಧಾಂಜಲಿ, ರಾಜೀವ್‌ಗಾಂಧಿ ಸರ್ಕಾರ ಕಿತ್ತೊಗೆಯಲು ಕರೆ, ಬೆಳೆಯುತ್ತಿರುವ ಸರ್ವಾಧಿಕಾರದ ಅಪಾಯ, ಕೇಂದ್ರ-ರಾಜ್ಯ ಸಂಬಂಧಗಳ ಬದಲಾವಣೆ, ನೂತನ ಶಿಕ್ಷಣ ನೀತಿ ಜಾರಿ ರದ್ಧತಿ, ಕೋಮುವಾದಿ, ಛಿದ್ರಕಾರಿ ಶಕ್ತಿಗಳ ಆತಂಕಕಾರಿ ಸವಾಲುಗಳು, ಪಂಜಾಬ್, ತ್ರಿಪುರಾ, ಜನಪರ ವಿಜ್ಞಾನ ಚಳುವಳಿ, ಸಾಂಸ್ಕೃತಿಕ ಹಾಗೂ ಸಮೂಹ ಮಾಧ್ಯಮಗಳು, ಅಂತರ್‍ರಾಷ್ಟ್ರೀಯ ಮತ್ತು ನೆಲ್ಸನ್ ಮಂಡೇಲಾ ಬಿಡುಗಡೆ ಕುರಿತು ಮುಂತಾಗಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ನೂತನ ಕೇಂದ್ರ ಸಮಿತಿ ಆಯ್ಕೆ

86 ಸದಸ್ಯರ ನೂತನ ಕೇಂದ್ರ ಸಮಿತಿ ಆಯ್ಕೆಗೊಂಡಿತು. ಅಧ್ಯಕ್ಷರಾಗಿ ಕಾ॥ ಎ. ವಿಜಯರಾಘವನ್, ಪ್ರಧಾನ ಕಾರ್ಯದರ್ಶಿ ಕಾ॥ ನಿಲೋತ್ಪಲಬಸುರವರು ಪುನರಾಯ್ಕೆಗೊಂಡರು. ಉಪಾಧ್ಯಕ್ಷರು: ತಪಸ್‌ಬಸು, ಇಶ್‌ಫಕೂರ್ ರಹಮಾನ್, ಮುರುಳಿಧರನ್, ದೇವೇಂದ್ರಜಿತ್ ಧಿಲ್ಲಾನ್.

ಸಹಕಾರ್ಯದರ್ಶಿಗಳು. ವೈ.ವೆಂಕಟೇಶ್ವರರಾವ್ ಸೆಕ್ರಟಾರಿಯೇಟ್ ಸದಸ್ಯರು: ಜೇಮ್ಸ್ ಮ್ಯಾಥ್ಯು, ಸುಜನ್ ಚಕ್ರವರ್ತಿ, ಬ್ರಲೇನ್ ಸೇನ್ ಗುಪ್ತ.

ಕರ್ನಾಟಕದಿಂದ ಕೇಂದ್ರ ಸಮಿತಿಗೆ ಕಾ॥ ಎಸ್.ವೈ.ಗುರುಶಾಂತ್ ಕಾ॥ ಜೆ..ಬಯ್ಯಾರೆಡ್ಡಿ ...

ವಿದೇಶಿ ಪ್ರತಿನಿಧಿಗಳು

ಈ ಸಮ್ಮೇಳನದ ಇನ್ನೊಂದು ಪ್ರಮುಖ ಅಂಶವೆಂದರೆ ಅಂತರ್‍ರಾಷ್ಟ್ರೀಯ ವಿದ್ಯಾರ್ಥಿ ಚಳುವಳಿಯೊಂದಿಗೆ ಹೆಚ್ಚಿನ ಸಂಬಂಧಗಳು ಅಂತರ್‍ರಾಷ್ಟ್ರೀಯ ವಿದ್ಯಾರ್ಥಿ ಚಳುವಳಿಯಲ್ಲಿ, ಹಲವಾರು ಪ್ರಶ್ನೆಗಳ ಬಗ್ಗೆ ನಿರಂತರವಾದ ಸೈದ್ಧಾಂತಿಕವಾದ ಹೋರಾಟವನ್ನು ನಡೆಸುತ್ತಾ ಬರಲಾಗಿತ್ತು. ಇದರ ಪರಿಣಾಮವಾಗಿ ಎಸ್.ಎಫ್.ಐ.ಗೆ ಅಂತರ್‍ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆಯಿಂದ ಮಾನ್ಯತೆ ದೊರೆತು ಐ.ಯು.ಎಸ್.ನ ಸದಸ್ಯತ್ವವನ್ನು ಪಡೆಯಿತು. ಇದರ ನಂತರ ಸೇರುತ್ತಿರುವ ಮೊದಲ ಸಮ್ಮೇಳನ ಇದು.

26ರಂದು ನಡೆದ ವಿದೇಶದ ಪ್ರತಿನಿಧಿಗಳ ವಿಶೇಷ ಕಲಾಪದಲ್ಲಿ ಈ ಅಂಶಗಳ ಬಗ್ಗೆ ಗಮನ ಹರಿಸಲಾಯಿತು. ಕೆಲವು ವಿಷಯಗಳ ಬಗ್ಗೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ ಸಂಘಟನೆಗಳು ವಿಶಾಲ ಕಾರ್ಯಕ್ರಮಾತ್ಮಕ ಚಳುವಳಿಯ ಆಧಾರದಲ್ಲಿ ಐಕ್ಯ ಕಾರ್ಯಾಚರಣೆಯನ್ನೂ ಮುಂದೊಯ್ಯುವ ಎಸ್.ಎಫ್.ಐ.ನ ರಾಜಕೀಯ ಚಳುವಳಿಯನ್ನು ಅಂಗೀಕರಿಸಲಾಯಿತು. ಈ ಕಲಾಪದಲ್ಲಿ ಅಂತರ್‍ರಾಷ್ಟ್ರೀಯ ವಿದ್ಯಾರ್ಥಿ ಸಂಘ ಹಾಗೂ ಸೋವಿಯತ್ ಯೂನಿಯನ್, ಅಫ್‌ಘಾನಿಸ್ತಾನ್, ಬಂಗ್ಲಾದೇಶ್, ಜನತಾ ಕೋರಿಯಾ ಗಣರಾಜ್ಯ, ಇರಾನ್, ಇರಾಕ್, ಮಂಗೋಲಿಯಾ, ದೇಶಗಳ ವಿದ್ಯಾರ್ಥಿ ಸಂಘಟನೆಯ ಪ್ರತಿನಿಧಿಗಳು ಭಾಗವಹಿಸಿದ್ದರು. ಕೆಲವು ಅನಿವಾರ್ಯ ಕಾರಣಗಳಿಂದ ಬರಲಾಗದಿರುವುದರ ಬಗ್ಗೆ ವಿಷಾದಿಸಿ ಜನತಾ ಚೀನಾ, ವಿಯೆಟ್ನಾಂ, ಪಿ.ಎಸ್.ಪಿ., ಎಲ್-ಸಾಲ್ವಡಾರ್, ಎ.ಎನ್.ಸಿ. (ಏಶಿಕ್), ರುಮಾನಿಯಾ, ಬಲ್ಗೇರಿಯಾ, ಬ್ರಿಟನ್, ಆಫ್ರಿಕಾದ ವಿದ್ಯಾರ್ಥಿ ಸಂಘಟನೆಗಳು ಶುಭಾಶಯ ಸಂದೇಶವನ್ನು ಕಳಿಸಿದ್ದವು.

ದ್ಯಾರ್ಥಿಗಳ ಸದಸ್ಯರಾಗಿರುವ
ಳನ ಅತ್ಯುತ್ಸಾಹದ, ದೃಢ
ರಿ 24ರಿಂದ 28ರವರೆಗೆ
ಹೆಚ್ಚೆಚ್ಚು ವಿದ್ಯಾರ್ಥಿ
ೋರಾಟದಲ್ಲಿ ಅಣಿನೆರೆಸುವ,
ೈಂತಿಕ ಹೋರಾಟ ತೀವ್ರ

ಕಲಾಪಗಳ ಒಂದು
ಟಕ ಘಟಕದ ಕಾರ್ಯದರ್ಶಿ

ಆದರೆ.....ಸಂಧಿಸುವ ಮೊದಲೇ..ಬದುಕು ಭಗ್ನವಾಗಿಸಲು ಮಾರಕಾಸ್ತ್ರಗಳನ್ನು ಹಿಡಿದು ಬಾಗಿಬಾಗಿ ಕಳ್ಳ ಹೆಜ್ಜೆ ಇರಿಸುತ್ತಾ ಸಾಮ್ರಾಜ್ಯಶಾಹಿಗಳು ನುಗ್ಗುತ್ತಿದ್ದಾರೆ. ತಾಯಿ ಮಗು ಜನತೆ ಹೀಗೆ ಎಲ್ಲೆಲ್ಲೂ ತಲ್ಲಣ. ಆ ಕ್ಷಣದಲ್ಲೇ ಬಿಳಿ ಪಾರಿವಾಳಗಳಂತೆ ಹಾರಿ ಬರುವ ಶಾಂತಿ ದೂತರು, ಸಾಮ್ರಾಜ್ಯಶಾಹಿಗಳ ಸಂಚುಗಳನ್ನು ಬಯಲಿಗೆಳೆಯುತ್ತಾ ಮಾರಕಾಸ್ತ್ರ [illegible] ಮುರಿಯುತ್ತಾ ಹಿಮ್ಮೆಟ್ಟಿಸುತ್ತಾರೆ. ನಂತರ 'ತಾಯಿ-ಮಗು' ಬರಿದಾಗಿ ನಲಿಯುತ್ತಿರುವಂತೆ ಎಲ್ಲೆಡೆ ಹರ್ಷೋದ್ಗಾರ. ಬಯಲಿನಲ್ಲಿ ನೆರೆದಿದ್ದ ಜನರೆಲ್ಲರ ನರ್ತನ.

ಆದರೆ ಈ ನಕ್ಕುನಲಿವ ಶಾಂತ ಜೀವನ ಸಾಗಿಸಲು ಬಿಡಬೇಕಲ್ಲ ಕರಾಳ ಶಕ್ತಿಗಳು. ಕಪ್ಪು ಬಟ್ಟೆ ಧರಿಸಿ ಕರಿ ಬಾವುಟ ಹಿಡಿದು ಜನರ ಐಕ್ಯತೆ ಸಮಗ್ರತೆಯನ್ನು ಮುರಿಯಲು ಈ ಛಿದ್ರಕಾರಿ ಶಕ್ತಿಗಳು ಎರಡು ಕಡೆಗಳಿಂದ ಆಕ್ರಮಣ ಮಾಡಲು ಮುಂದಾಗುತ್ತವೆ. ಈ ಶಕ್ತಿಗಳಿಗೆ ಹೆದರಿ ಅಲ್ಲೋಲಕಲ್ಲೋಲವಾಗುವ ಜನ. ಆದರೆ ಎರಡು ಬದಿಗಳಲ್ಲಿಯೂ ಹೆಜ್ಜೆ ಹಿಂದಕ್ಕಿಕ್ಕದೇ ಪಶ್ಚಿಮ ಬಂಗಾಳ, ಕೇರಳದ ಜನತೆ ಆ ಛಿದ್ರಕಾರಿ ಶಕ್ತಿಗಳೆದುರು ಅವ್ಯಾಹತವಾಗಿ ಸೆಣಸಿ ಅವುಗಳನ್ನು ಹಿಮ್ಮೆಟ್ಟಿಸಿ ನಿರ್ನಾಮ ಮಾಡುತ್ತಾರೆ. ಮತ್ತೇ ಜನರಲ್ಲಿ ನೆಮ್ಮದಿಯ ಹರ್ಷೋದ್ಗಾರ. ಈ ಸನ್ನಿವೇಶವನ್ನು ವೀಕ್ಷಿಸುತ್ತಿರುವಂತೆ ಎಲ್ಲರಲ್ಲೂ ರೋಮಾಂಚನ/ ಬಾರಿ ಚಪ್ಪಾಳೆ ಹೆಚ್ಚುತ್ತಿದ್ದಂತೆ ದೂರ ನಿಯಂತ್ರಿತ ಪುಟ್ಟ ವಿಮಾನ ಶಬ್ದ ಮಾಡುತ್ತಾ ಗಗನಕ್ಕೆ ಹಾರಿ ಸ್ಟೇಡಿಯಂ ಸುತ್ತ ಹಾರತೊಡಗಿತು. ಕೆಲವು ನಿಮಿಷಗಳಲ್ಲಿ ವಿಮಾನದಿಂದ ಹೊರ ಹಾಕಿದ ಪ್ಯಾರಾಶೂಟ್ ಸಮ್ಮೇಳನದ ಸಂದೇಶ ಸಾರುವುದರೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ಉದ್ಘಾಟನಾ ಸಮಾರಂಭದ 3ನೆಯ ಹಂತದ ಕೊನೆಯ ಕಾರ್ಯಕ್ರಮ 'ನೆಲ್ಸನ್ ಮಂಡೇಲಾ ನಗರದಲ್ಲಿ (ವಿಕ್ಟೋರಿಯಾ ಹಾಲ್ ಮೈದಾನ) ಜರುಗಿತು.

...ಗೊಂಡರು, ನಿಧಿ ನೀಡಿದರು
...ರ‍್ಯಾಲಿಯಾಗಿ ನಡೆದರು

ದಿಂದ ಆಚರಿಸುವುದು ಎರಡನೆಯ ಹಂತದ ಕಾರ್ಯಕ್ರಮ.

ಇಡೀ ಕ್ರೀಡಾಂಗಣವೇ ಬಿರಿಯುವಂತೆ ತುಂಬಿದ ಎಡರಂಗದ ಹಲವು ಮಂತ್ರಿಗಳು, ವಿವಿಧ ಸಂಘಟನೆಗಳ ನಾಯಕರು ವಿದ್ಯಾರ್ಥಿ ಸಮೂಹ. ಜೊತೆಗೆ ಗಣ್ಯ ನಾಗರೀಕರು ನೆರೆದಿದ್ದರು. ವೃತ್ತಾಕಾರದ ಕ್ರೀಡಾಂಗಣದಲ್ಲೊಂದು ಭಾಗದಲ್ಲಿ ಅಚ್ಚ ಬಿಳಿಯ ಪರದೆಯಾಗಿ ಕುಳಿತಿದ್ದ ಪುಟ್ಟ ಮಕ್ಕಳು, ಕಾರ್ಯಕ್ರಮ ಆರಂಭಗೊಳ್ಳುತ್ತಿದ್ದಂತೆ ಈ ಪರದೆಯ ಮೇಲೆ 'ಪ್ರತಿನಿಧಿಗಳಿಗೆ ಸುಸ್ವಾಗತ'ವೆಂಬ ಆಂಗ್ಲ ಕೆಂಪು ಅಕ್ಷರಗಳು ಕಾಣಿಸಿಕೊಂಡವು. ಒಡನೆಯೇ 'ಏಳನೆಯ ಅಖಿಲಭಾರತ ಸಮ್ಮೇಳನ ಯಶಸ್ವಿಯಾಗಲಿ'- 'ಸ್ವಾತಂತ್ರ್ಯ ಪ್ರಜಾ ಪ್ರಭುತ್ವ, ಸಮಾಜವಾದ ಚಿರಾಯುವಾ ಗಲಿ' ಹೀಗೆ ತೆರತೆರನಾಗಿ ಮೂಡಿ ಬಂದವು. ಕಣ್ಣು ಕೋರೈಸುವ ಶ್ವೇತ ವಸ್ತ್ರಧಾರಿ 'ಕಿನ್ನರ ಚಿಣ್ಣರು' ನಾಲ್ಕು ಮೂಲೆಗಳಿಂದ ವಾದ್ಯ-ಡೋಲುಗಳ ಇಂಪಿನೊಂದಿಗೆ ಹಾರುತ್ತಿರುವಂತೆ, ಓಡೋಡಿ ಬಂದರು. ಬಳುಕಿನ ನಡೆಗೆ- ಬಳಿಕ ನಾಲ್ಕು ವೃತ್ತಾಗಳಾಗಿ ಪ್ರತಿ ಮೂಲೆಗಳಲ್ಲಿಯೂ ಕುಳಿತರು. ಎರಡು ದಿಕ್ಕುಗಳಿಂದ ವರ್ಣರಂಜಿತ ಉಡುಗೆ ತೊಟ್ಟು ಮಕ್ಕಳು ನೃತ್ಯ ಮಾಡುತ್ತಾ ಪ್ರವೇಶಿಸಿದರು. ನೋಡ ನೋಡುತ್ತಿದ್ದಂತೆಯೇ ಅಸ್ಸಾಂನಿಂದ ಸಾಂಪ್ರದಾಯಿಕ ಉಡುಗೆಯಲ್ಲಿ ಸುಪ್ರಸಿದ್ಧ 'ಬಿಹೂ'ಗಾನದೊಂದಿಗೆ ಹೆಜ್ಜೆ ಹಾಕುತ್ತಿದ್ದ ಒಂದು ತಂಡ, ಬಂಗಾಳ, ಕೇರಳ, ರಾಜಸ್ತಾನ್, ಬಾಂಗ್ಲಾ ನೃತ್ಯದೊಂದಿಗೆ ಪಂಜಾಬ್ ಜನತೆಯ ವೇಷ ತೊಟ್ಟ ವಿವಿಧ ತಂಡಗಳು ಕ್ರಮಕ್ರಮವಾಗಿ ಪ್ರವೇಶಿಸಿದರು. ಇದಕ್ಕೇ ಹೊಂದಿಕೊಂಡಂತೆ ಹಿಮ್ಮೇಳ ಗಾನ, ಸುಶ್ರಾವ್ಯವಾಗಿ ಸಾಗಿರುವಾಗಲೇ ವಿವಿಧ ತಂಡಗಳಾಗಿ ಮೈದಾನದ ಅಂಚಿನಲ್ಲಿ ಕುಳಿತರು.

ಈಗ ಎಲ್ಲೆಲ್ಲೂ ನಿಶ್ಶಬ್ದತೆ. ಬಯಲಿನ ಒಂದಂಚಿನಲ್ಲಿ ಮಗು- ಇನ್ನೊಂದೆಡೆ ತಾಯಿ. ಅಗಲಿಕೆಯ ಆತಂಕದಿಂದ ಕನಲಿದ್ದ ಮಗು ತಾಯಿ ಕಂಡಾಕ್ಷಣ ಅವಳೆಡೆಗೆ ಓಡುತ್ತಿದೆ.

"ಅಧ್ಯಯನದಿಂದ ಸಿದ್ಧಗೊಂಡು ವರ್ಗ ಹೋರಾಟದಲ್ಲಿ ಸೇರಿಕೊಳ್ಳಿ"

ನಿಮ್ಮ ಶಿಕ್ಷಣ, ನಿಮ್ಮ ಸಂಸ್ಕೃತಿ ಮತ್ತು ನಿಮ್ಮ ಮಾನಸಿಕ ಬೆಳವಣಿಗೆಯಿಂದಾಗಿ ಕ್ರಾಂತಿಕಾರೀ ವಿಚಾರಗಳ ಆಕರವಾಗಲು ನಿಮಗೆ ಸಾಧ್ಯವಿದೆ. ಸಮಾಜದ ಸಮಸ್ಯೆಗಳನ್ನು ವಿಮರ್ಶಾತ್ಮಕವಾಗಿ, ರಚನಾತ್ಮಕವಾಗಿ ಪರೀಕ್ಷಿಸಿ. ಪರಿಹಾರ ಸೂಚಿಸಿ. ಸಾಮಾಜಿಕ ಗುರಿಗಳನ್ನು ಸ್ಪಷ್ಟಪಡಿಸಿ ಅವನ್ನು ಸಾಧಿಸುವ ಪರ್ಯಾಯ ಸಾಧನಗಳನ್ನು ಸೂಚಿಸಿ. ಹಸಿವು, ಬಡತನ, ಅಭಾವ,ನಿರುದ್ಯೋಗ, ಅಜ್ಞಾನ, ಅನಾರೋಗ್ಯ, ನಿರಾಸೆಯ ಜೀವನ್ಮರಣ ಪ್ರಶ್ನೆಗಳಿಗೆ ಉತ್ತರ ಪಡೆಯಲು ಕಠಿಣ ಸಂಶೋಧನೆ ನಡೆಸಿ. ಇದಕ್ಕೆ ದ್ವಂದ್ವಾತ್ಮಕ ಭೌತವಾದದ ವಿಧಾನ ಬಳಸಿ ಎಂದು ನಾನು ಸಲಹೆ ನೀಡುತ್ತೇನೆ. ಯಾಕೆಂದರೆ ಅದು ವಿಜ್ಞಾನಗಳ ವಿಜ್ಞಾನ.....

ನಿಮ್ಮ ಅಧ್ಯಯನ, ಸಂಶೋಧನೆಗಳೇ ನಿಮ್ಮನ್ನು ಧರ್ಮ, ಜನಾಂಗ, ಪ್ರದೇಶ, ಭಾಷೆ, ಜಾತಿಗಳ ಸಂಕುಚಿತತೆಯಗಳಿಂದ ಮುಕ್ತಗೊಳಿಸುತ್ತವೆ. ನಿಮ್ಮನ್ನು ಕ್ರಾಂತಿಯ ನಿಜವಾದ ಸೈನಿಕರನ್ನಾಗಿ ಮಾಡುತ್ತವೆ.

ಇದಕ್ಕಾಗಿ ನೀವು ಮಾನವ ಜ್ಞಾನದ ಹಲವು ಶಾಖೆಗಳಲ್ಲಿ ವಿಜ್ಞಾನ, ಇತಿಹಾಸ, ಅರ್ಥಶಾಸ್ತ್ರ, ತತ್ವಶಾಸ್ತ್ರ ಇತ್ಯಾದಿಗಳಲ್ಲಿ ಪಾಂಡಿತ್ಯ ಪಡೆಯುವುದು ಅನಿವಾರ್ಯ. ಇದರಿಂದ ನಿಮ್ಮ ಜ್ಞಾನವನ್ನು ಹೋರಾಟದಲ್ಲಿ ಒಂದು ಅಸ್ತ್ರವಾಗಿ ಬಳಸಬಹುದು. ಭಾರತೀಯ ಸಮಾಜದ ಚಲನೆ ಮತ್ತು ಬೆಳವಣಿಗೆಯನ್ನು ನೀವು ಸಂಶೋಧಿಸಬೇಕು. ವಿವಿಧ ಶಾಖೆಗಳ ಜ್ಞಾನ ಮತ್ತು ಚಾರಿತ್ರಿಕ ಭೌತವಾದದ ನೆರವಿನಿಂದ ಪುನರುತ್ಥಾನವನ್ನು ಎದುರಿಸಬೇಕು.

ಪ್ರೊ॥ ಇರ್ಫಾನ್ ಹಬೀಬ್ ಹೇಳಿರುವಂತೆ ಬೂರ್ಜ್ವಾ ಸಮಾಜವಾದ ಮತ್ತು ಪ್ರತೀಗಾಮಿ ಪುನರುತ್ಥಾನವಾದ ಇವೆರಡೂ ಜತೆಗೂಡಿ ಈಗಿನ ಬೂರ್ಜ್ವಾ-ಭೂಮಾಲಕ ಆಳ್ವಿಕೆಯ ಸೈದ್ಧಾಂತಿಕ ಬುನಾದಿಯಾಗಿವೆ ಎಂಬುದನ್ನು ನೀವು ಅರಿಯಬೇಕು....

ಹೀಗೆ ನಿಮ್ಮನ್ನು ಸಿದ್ಧಗೊಳಿಸಿಕೊಂಡು ದೇಶದ ದಲಿತ, ಶೋಷಿತ ವರ್ಗಗಳ ಕ್ರಾಂತಿಕಾರಿ ವರ್ಗ ಹೋರಾಟವನ್ನು ಸೇರಿಕೊಳ್ಳಬೇಕು.

ನ್ಯಾಯಮೂರ್ತಿ ಒ. ಚಿನ್ನಪ್ಪರೆಡ್ಡಿ

(7ನೇ ಎಸ್.ಎಫ್.ಐ. ಸಮ್ಮೇಳನದ ಉದ್ಘಾಟನಾ ಭಾಷಣದಿಂದ)

ಸಮ್ಮೇಳನದ ಸಭಾಂಗಣದ ಮುಂದೆ ಧ್ವಜಾರೋಹಣದ ಕಾರ್ಯಕ್ರಮ ನಡೆಯಿತು. ಆರಂಭದಲ್ಲಿ ಡಾರ್ಜಿಲಿಂಗ್ ಸಂಗಾತಿಗಳು ತಂದ ಜ್ಯೋತಿಯನ್ನು ಪ್ರಧಾನಕಾರ್ಯದರ್ಶಿ ಕಾ॥ ನಿಲೋತ್ಪಲಬಸುರವರು ಪಡೆದು ಹುತಾತ್ಮರ ಸ್ತಂಭದ ಬಳಿಯ ಜ್ಯೋತಿಯನ್ನು ಹೊತ್ತಿಸಿದರು. ನಂತರ ಅಧ್ಯಕ್ಷರಾದ ಕಾ॥ ಎ.ವಿಜಯರಾಘವನ್‌ರವರಿಂದ ಧ್ವಜಾರೋಹಣ. ಹುತಾತ್ಮರ ಸ್ತಂಭಕ್ಕೆ ಬಿಮನ್‌ಬಸು, ಜ್ಯೋತಿಬಸು, ಎಸ್.ಎಫ್.ಐ. ಪದಾಧಿಕಾರಿಗಳು ಹೂಗುಚ್ಛಗಳನ್ನಿರಿಸಿ ಗೌರವ ಸಲ್ಲಿಸಿದರು.

ಪ್ರತಿನಿಧಿಗಳ ಅಧಿವೇಶನ ನಡೆಯುವ ಸಭಾಂಗಣಕ್ಕೆ ಪ.ಬಂಗಾಳದ ಎಡ ವಿದ್ಯಾರ್ಥಿ ಚಳುವಳಿಯ ಧೀಮಂತ ನಾಯಕ ಕಾ॥ ದಿನೇಶ್ ಮಂಜುಂದಾರ್‌ರವರ ಹೆಸರನ್ನಿಡಲಾಗಿತ್ತು. ಅಲಂಕಾರಗೊಂಡ ವಿಶಾಲ ವೇದಿಕೆಯ ಒಂದು ಮೂಲೆಯಲ್ಲಿ ಕೆಂಪು ನಕ್ಷತ್ರ, ಇನ್ನೊಂದೆಡೆ ಕಾ॥ ದಿನೇಶ್ ಹಾಗೂ ಮಧ್ಯದಲ್ಲಿ ನೆಲ್ಸನ್‌ಮಂಡೇಲಾರವರ ಭಾವ ಚಿತ್ರವನ್ನೂ ಹಾಕಲಾಗಿತ್ತು. ಹೊರಗಡೆ ಸಭಾಂಗಣದ ಏಳನೆಯ ಸಮ್ಮೇಳನದ ಏಳು ಬಣ್ಣಗಳ ಪಟ್ಟಿ ಸುತ್ತುವರಿದಿತ್ತು. ಅಲ್ಲದೇ ಮುಂಭಾಗದಲ್ಲಿ ಎತ್ತರದ ಗೋಪುರ ಮೇಲೆ ಏಳು ಬಣ್ಣಗಳ ಪದರಿನ ನಕ್ಷತ್ರ ರಾರಾಜಿಸುತ್ತಿತ್ತು.

ಸಮಾರಂಭದ ಆರಂಭಕ್ಕೆ ವಿಶ್ವಭಾರತಿ ವಿಶ್ವವಿದ್ಯಾಲಯದ ತಂಡದಿಂದ ಹಾಡುಗಳು. ನಂತರ ಸ್ವಾಗತ ಸಮಿತಿಯ

▶ ಪುಟ 8

ಗಾಢ ಪ್ರಭಾವ ಬೀರಿದ ಸಾಂಸ್ಕೃತಿಕ ಉತ್ಸವ



ಸಾಂಸ್ಕೃತಿಕ ಕಾರ್ಯಕ್ರಮಗಳು ಏಳನೇ ಸಮ್ಮೇಳನದ ವ್ಯವಸ್ಥೆಯಲ್ಲಿ ಹಾಸು ಹೊಕ್ಕಾಗಿದ್ದವು. ಇವು ಜನತೆಯ ಪ್ರಜ್ಞೆಯನ್ನೆತ್ತರಿಸುವ ಪ್ರಮುಖ ಮಾಧ್ಯಮಗಳು. ಇದಕ್ಕೆ ನೀಡಲಾದ ವಿಶೇಷ ಗಮನವನ್ನು ವಿವರಿಸುತ್ತಾ ಸಾಂಸ್ಕೃತಿಕ ಸಮಿತಿಯ ಪ್ರಮುಖ ಸದಸ್ಯರಾದ ಉತ್ಪಲ್‌ಮುಖರ್ಜಿಯವರು ಹೀಗೆಂದರು. ನಿಜಕ್ಕೂ ಇದೊಂದು ದೊಡ್ಡ ಉತ್ಸವ.

ಫೆಬ್ರವರಿ 21ರಿಂದ28ರವರೆಗೆ ಗಿಜಿಗುಡುವ ಜನಸಂದಣಿಯ ಸಮ್ಮುಖ ಹಲವಾರು ವಿಚಾರ ಸಂಕಿರಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರದರ್ಶನಗಳು ನಡೆದವು. ಇದಕ್ಕಾಗಿಯೇ ಆರು ದೊಡ್ಡ ಬಯಲು ರಂಗವೇದಿಕೆಗಳನ್ನು ನಿರ್ಮಿಸಲಾಗಿತ್ತು ಒಂದೊಂದಕ್ಕೂ ಒಂದೊಂದು ಕಲಾ ಪ್ರಾಕಾರದ ಕಲಾವಿದರ ಹೆಸರಿಡಲಾಗಿತ್ತು. ನಾಟಕಗಳಿಗಾಗಿ "ಸಫ್ದರ್ ಹಾಶ್ಮಿ ಮಂಚ್" "ಬ್ರಿಜಲಾಲ್ ಅಧಿಕಾರಿ (ಕೊಲೆಗೀಡಾದ ಜಾನಪದ ಹಾಡುಗಾರ) ಮಂಚ್"ನಲ್ಲಿ, ಜಾತ್ರಾ, ಜಾನಪದ ನಾಟಕಗಳು ಇತ್ಯಾದಿ; ವಿಚಾರಸಂಕಿರಣಗಳಿಗಾಗಿ "ಮುಜಫರ್ ಅಹ್ಮದ್ ಮಂಚ್"; ಡಾರ್ಜಿಲಿಂಗ್‌ನ ಹುತಾತ್ಮ ವಿದ್ಯಾರ್ಥಿ ಮುಖಂಡರ ನೆನಪಿನಲ್ಲಿ "ಸೋನಂ ಸೆಪಾಲ್ ಮಂಚ್"; ಸುಪ್ರಸಿದ್ಧ ಕವಿಯವರ ಸ್ಮರಣಾರ್ಥ "ಸುಕಾಂತೋ ಭಟ್ಟಾಚಾರ್ಯಮಚ್" ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳಿಗಾಗಿ ಹಾಗೂ ಚಾರ್ಲಿ ಚಾಪ್ಲಿನ್ ಮಂಚ್"ನಲ್ಲಿ ಸಿನಿಮಾ ಪ್ರದರ್ಶನ. ಈ ಎಲ್ಲಾ ವೇದಿಕೆಗಳನ್ನು ಬ್ರಿಗೇಡ್ ಗ್ರೌಂಡ್‌ನಲ್ಲಿ ವ್ಯವಸ್ಥೆಗೊಳಿಸಲಾಗಿತ್ತು.

ನಾಟಕಗಳ ತಯಾರಿ ಕಳೆದ ಆರು ತಿಂಗಳಿನಿಂದಲೇ ನಡೆದಿತ್ತು. ರಂಗ ತರಬೇತಿ ಶಿಬಿರ ಮತ್ತು 'ಥಿಯೇಟರ್ ಕಮ್ಯೂನ್'ಗಳಿರಡರಲ್ಲಿ ಕಾರ್ಯಾಗಾರವನ್ನು ನಡೆಸಲಾಗಿದೆ. ಇದರಲ್ಲಿ ಸುಪ್ರಸಿದ್ಧ ನಿರ್ದೇಶಕರಾದ ಉತ್ಪಲದತ್ತರ 'ಛಿಲ್ಲಟ' ಕುಮಾರ್‌ರಾಯ್‌ರ 'ಬಹುರೂಪಿ' ಬಿಜಾನ್ ಚಕ್ರವರ್ತಿಯರ ಅನ್ಯಾಥಿಯೇಟರ್ ಹಾಗೂ ಬಿಜಾನ್ ಚಕ್ರವರ್ತಿ. ನೀಲಕಂಠ ಸೇನ್ ಗುಪ್ತ ರಂಜಿತರ ಪ್ರಮುಖ ತಂಡಗಳು ಇವರಲ್ಲಿ ಭಾಗಿಯಾಗಿದ್ದವು. ಇದರಲ್ಲಿ ಏಳು ನಾಟಕಗಳನ್ನು ತಯಾರಿಸಿ ಪ್ರದರ್ಶಿಸಲಾಯಿತು. ಮುಖ್ಯವಾಗಿ ಕಲ್ಕತ್ತಾ 'ಇಪ್ಟಾ' ತಂಡದ ಹಲವು ನಾಟಕಗಳು ಪ್ರದರ್ಶನಗೊಂಡವು. ಪಾಪೆಟ್ ಥಿಯೇಟರ್ ಅಥವಾ 'ಜಾತ್ರಾ' ತಂಡಗಳಿಂದು ಸುಪ್ರಸಿದ್ಧವಾಗಿರುವ ಹೇಮಂತ್ ಮುಖ್ಯೋಪಾಧ್ಯಾಯ (ಖ್ಯಾತ ಗಾಯಕ) ಮತ್ತು ಸುಚಿತ್ರಾ ಮಿತ್ರಾ, ಮಮತಾ ಶಂಕರ್‌ರವರ ಬ್ಯಾಲೆ ತಂಡಗಳು ಪಾಲ್ಗೊಂಡಿವೆ. ನಾಟಕಗಳಲ್ಲದೇ ಉಳಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು, ನವೆಂಬರ್‌ನಿಂದಲೇ ನಡೆದಿವೆ. ಸಂಘಟನೆ ಗುಪ್ತ್ಯೇ ಅಲ್ಲ, ಪ್ರಸಿದ್ಧ ಸಂಗೀತಕಾರರು ಶ್ರಮಿಸಿದ್ದಾರೆ. ಸತ್ಯಜಿತ್‌ರಾಯ್, ಮೃಣಾಲ್ ಸೇನ್, ಎಂ.ಎಸ್.ಸತ್ಯು, ಪ್ರಕಾಶ್‌ಝಾ, ಋತ್ವಿಕ್ ಘಟಕ್, ಕೇತನ್‌ಮೆಹ್ತಾ ಅಲ್ಲದೇ ಸೈಜೇರಿಯಾ, ಬ್ರಿಟನ್ ಮುಂತಾದ ಹಲವಾರು ದೇಶಗಳ ಚಲನಚಿತ್ರಗಳು ಪ್ರದರ್ಶನಗೊಂಡವು.

ಈ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿಚಾರ ಸಂಕಿರಣಗಳ ಉದ್ಘಾಟನೆ ಫೆಬ್ರವರಿ 21ರಂದು ಸಫ್ದರ್ ಹಾಶ್ಮಿ ಮಂಚ್‌ನಲ್ಲಿ ನಡೆಯಿತು. ಹಜ್ರಾಪಾರ್ಕ್ ಮತ್ತು ಸುಭೋಧ್ ಮಲಿಕ್ ಚೌಕ್‌ಗಳಿಂದ ವರ್ಣರಂಜಿತ ಎರಡು ಮೆರವಣಿಗೆಗಳು ಸಮಾರಂಭದ ಸ್ಥಳವನ್ನು ತಲುಪಿದವು. ಅದೇ ಸಂದರ್ಭದಲ್ಲೇ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಸ್.ಎಫ್.ಐ. ಧ್ವಜಾರೋಹಣದ ಕಾರ್ಯಕ್ರಮ ನಡೆಯಿತು. ಉದ್ಘಾಟನೆಯ ಬಳಿಕ ಆರಂಭಗೊಂಡ ಪ್ರಥಮ ವಿಚಾರ ಸಂಕಿರಣದ ವಿಷಯ 'ಸಫ್ದರ್ ಹಾಶ್ಮಿ ಒಂದು ಬಿರುಗಾಳಿ ಸಂಕೇತ' ಅಧ್ಯಕ್ಷತೆ: ಅನಿಲ್ ಬಿಸ್ವಾಸ್ ಮಾತನಾಡಿದವರು ಪ್ರಸಿದ್ಧ ಸಿನಿಮಾ ನಟ ಶಶ್ವಿದ್ಧ ಸಿನ್ಹಾ, ಉತ್ಪಲ್‌ದತ್, ಗೌತಮ ಘೋಷ್, ಓ.ಸಿ.ಗಂಗೂಲಿ ಮುಂತಾದವರು. ಎರಡನೆ ದಿನದ ವಿಚಾರ ಸಂಕಿರಣ: 'ಸಮಾಜ ವಾದೀ ರಾಷ್ಟ್ರಗಳಲ್ಲಿ ಇತ್ತೀಚಿನ ಬೆಳವಣಿಗೆಗಳು- ಕೆಲವೊಂದು ಪ್ರಶ್ನೆಗಳು' ಕುರಿತಂತೆ ಕಾ॥ ಬಿ.ಟಿ.ರಣದಿವೆ, ಪ್ರೊ॥ ಹಿರೇನ್ ಮುಖರ್ಜಿ, ಡಾ॥ ಅಶೋಕ್ ಮಿತ್ರಾ ಮಾತನಾಡಿದರು. ಅಧ್ಯಕ್ಷತೆ: ಕಾ॥ ಬುದ್ಧದೇವ ಭಟ್ಟಾಚಾರ್ಯ. 23ರಂದು 'ರಾಷ್ಟ್ರೀಯ ಸಮಗ್ರತೆ' ಕುರಿತು ಕಾ॥ ಹರ್‌ಕಿಶನ್‌ಸಿಂಗ್ ಸುರ್ಜಿತ್, ಕಾ॥ ಸರೋಜ್ ಮುಖರ್ಜಿ, ಕಾ॥ ನೂರಲ್‌ಹುಡಾ, ಅಧ್ಯಕ್ಷತೆ: ಕಾ॥ ಲಕ್ಷ್ಮೀಸೇನ್.

25 ರ ಫೆಬ್ರವರಿ 'ಭಾರತೀಯ ಆರ್ಥಿಕತೆ' ಬಗ್ಗೆ ಡಾ॥ ಅಸಿಮ್‌ದಾಸ್ ಗುಪ್ತ, ಡಾ॥ ಪ್ರಭಾತ್ ಪಟ್ನಾಯಕ್, ಉಪಾಧ್ಯಾಯಕ್‌ರವರಿಂದ ವಿಚಾರ ಮಂಡನೆ. ಅಧ್ಯಕ್ಷತೆ: ಕಾ॥ ವಿಪ್ಲವದಾಸ್‌ಗುಪ್ತ.

26ರಂದು 'ಉಪಖಂಡವನ್ನು ನಡುಗಿಸಿದ ಸುಪ್ರಸಿದ್ಧ ತೀರ್ಪು' ಕುರಿತು. ಹಿಂದೂ ಪತ್ರಿಕೆಯ ಎನ್.ರಾಮ್, ಜನತಾದಳದ ಎಸ್. ಜೈಪಾಲ್‌ರೆಡ್ಡಿ, ಕಾ॥ ಸೋಮನಾಥ್‌ಚಟರ್ಜಿ. ಅಧ್ಯಕ್ಷತೆ ಕಾ॥ ಗೋಪಾಲ್‌ದೇವ್ ಭಟ್ಟಾಚಾರ್ಯ.

27ರಂದು "ಭಾರತೀಯ ರಾಜಕಾರಣದಲ್ಲಿ ಮೂಲಭೂತವಾದ" ಕುರಿತು ವಿಚಾರ ಮಂಡಿಸಿದರು. ಕಾ॥ ಸೀತಾರಾಮ್‌ಯೆಚೂರಿ, ಕಾ॥ ಸುನೀಲ್ ಮೈತ್ರಾ, ಅಧ್ಯಕ್ಷತೆ ಕಾ॥ ಸೈಫುದ್ದೀನ್ ಚೌಧುರಿ.

28ರಂದು 'ರಾಷ್ಟ್ರೀಯ ಪರ್ಯಾಯದ ಶೋಧನೆಯಲ್ಲಿ' ಕುರಿತಂತೆ ಕಳೆದ ಮೂರು ದಿನಗಳಿಂದಲೂ ನಿರಂತರವಾಗಿ ನಡೆದಿದ್ದ ವಿಚಾರ ಸಂಕಿರಣದ ಕೊನೆಯ ದಿನದಲ್ಲಿ ಮಾತನಾಡಿದವರು. ಕಾ॥ ಇ.ಎಂ.ಎಸ್. ನಂಬೂದರಿಪ್ಪಾಡ್‌ರವರು. ಹಿಂದಿನ ದಿನಗಳಲ್ಲಿ ಕ್ರಮವಾಗಿ ಜನತಾದಳದ ಅಧ್ಯಕ್ಷ ವಿ.ಪಿ.ಸಿಂಗ್, ಉಪಾಧ್ಯಕ್ಷ ರಾಮಕೃಷ್ಣಹೆಗ್ಡೆ, ಡಿ.ಎಂ.ಕೆ.ಯ ಮನೋಹರನ್, ತೆಲುಗುದೇಶಂನ ಪಿ. ಉಪೇಂದ್ರ ಫಾರ್ವರ್ಡ್ ಬ್ಲಾಕ್‌ನ ಚಿತ್ತಬಸು ಮುತಾಂದವರು ಭಾಗವಹಿಸಿದ್ದರು.

ಇವುಗಳೊಂದಿಗೆ ಸುಪ್ರಸಿದ್ಧ ಇಂದ್ರಜಾಲ ಪ್ರದರ್ಶಕ ಪಿ.ಸಿ.ಸರ್ಕಾರ್ ಮುಂತಾದವರ ಮ್ಯಾಜಿಕ್ ಶೋಗಳು, ತ್ರಿಪುರ- ಪಂಜಾಬ್‌ಗಳಿಂದ ವಿಶೇಷ ನೃತ್ಯ ತಂಡಗಳ ಪ್ರದರ್ಶನಗಳು ನಡೆದವು. ಕವಿಗೋಷ್ಠಿಯನ್ನು 24ರಂದು ನಡೆಸಲಾಯಿತು. ಡಾ॥ ಭೂಪೇನ್ ಹಜಾರಿಕಾರಂತಹ ಕವಿ- ಹಾಡುಗಾರರನ್ನೊಳಗೊಂಡು ರಾಜ್ಯದ ಅತ್ಯಂತ ಸುಪ್ರಸಿದ್ಧರಾದ 28 ಕವಿಗಳು ಇದರಲ್ಲಿ ಪಾಲ್ಗೊಂಡರು.

ಏಕಕಾಲಕ್ಕೆ ನಡೆಯುತ್ತಿದ್ದ ಈ ಕಾರ್ಯಕ್ರಮಗಳಲ್ಲಿ ಪ್ರತಿದಿನ ಲಕ್ಷಾಂತರ ಜನರು ಪಾಲ್ಗೊಂಡರು. ವಿಚಾರ ಸಂಕಿರಣಗಳಲ್ಲಿ 3000- 5 000ದವರೆಗೆ. ಜಾನಪದ ಕಾರ್ಯಕ್ರಮಗಳಲ್ಲಿ 10 ಸಾವಿರದಷ್ಟು. ಇತರ ವೇದಿಕೆಗಳ ಸುತ್ತ ಕೂಡಾ ಸಾವಿರ-ಸಾವಿರ ಸಂಖ್ಯೆಗಳಲ್ಲಿ ಜನ ನೆರೆಯುತ್ತಿದ್ದರು. ಬರೀ ಬಂಗಾಳದಿಂದಷ್ಟೇ ಅಲ್ಲ, ಬಿಹಾರ, ಒರಿಸ್ಸಾ, ಸುತ್ತಲಿನ ರಾಜ್ಯಗಳಿಂದಲೂ. ಇಡೀ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರ ಮೇಲೆ ಗಾಢ ಪ್ರಭಾವ ಬೀರಿದವು. ರಾಜ್ಯದಲ್ಲಿನ ಎಲ್ಲಾ ವಿಭಾಗಗಳಲ್ಲಿನ ಅತ್ಯಂತ ಪ್ರಮುಖರೆಲ್ಲರು ಒಂದಲ್ಲೊಂದು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.



ಪರ್ಯಾಯ ಕಾನೂನು ವ್ಯವಸ್ಥೆ ಬೇಕು

ಪುಟ 1ರಿಂದ

ನಾಗರೀಕ ಸಂಹಿತೆ'ಯನ್ನು ತರುವುದು ಗಂಡ-ಹೆಂಡಿರ ನಡುವೆ ಉದ್ಭವವಾಗುವ ಬಹಳಷ್ಟು ವೈಮನಸ್ಯಗಳು ಈ ಅಸುಮಾನತೆಯಿಂದ ಉಂಟಾದರೂ-'ಮಹಿಳೆಯ ಸಂಕುಚಿತ ಅಥವಾ ಹೊಂದಾಣಿಕೆಯಾಗಲಾರದ ಮನಸ್ತತ್ವವೇ ಕಾರಣವೆಂದು ಹೇಳಲಾಗುವುದು. ಹೀಗಾಗಿ ಎಷ್ಟೇ ದೊಡ್ಡ ಮಟ್ಟದ ದೌರ್ಜನ್ಯಕ್ಕೆ ಮಹಿಳೆ ಒಳಗಾಗಿದ್ದರೂ ಅವಳೇ ಹೊಂದಿಕೊಂಡು ಹೋಗುವಂತೆ ಪೊಲೀಸ್ ಠಾಣೆಯ ಮಹಿಳಾ ಸೆಲ್‌ಗಳಲ್ಲಿ ಮಾರ್ಗದರ್ಶನ ನೀಡಲಾಗುತ್ತಿದೆ.

ದ್ವಿಮುಖ ಧೋರಣೆ

ಅಪರಾಧ ಕಾಯ್ದೆಗಳಲ್ಲಿಯೂ ಸಹ ಈ ಅಸಮಾನ ಕೌಟುಂಬಿಕ ಸ್ವರೂಪವು ಎದ್ದು ಕಾಣಿಸುತ್ತದೆ ಬಹುಪತ್ನಿತ್ವವು ಕಾನೂನಿನ ದೃಷ್ಟಿಯಲ್ಲಿ ಜಾಮೀನು ಸಿಗಲಾರದ ಒಂದು ಅಕ್ಷಮ್ಯ ಅಪರಾಧವೆಂದು ಪರಿಗಣಿಸಲ್ಪಟ್ಟಿದ್ದರೂ, ಆ ಪುರುಷನನ್ನು ವಿಚಾರಣೆಗೆ ಒಳಪಡಿಸುವ ಹಕ್ಕು ಕೇವಲ ಆತನ ಮೊದಲ ಪತ್ನಿ ಮತ್ತು ಆಕೆಯ ಸಂಬಂಧಿಕರಿಗಷ್ಟೇ ಇದೆ. ಆದರೆ ಅನೈತಿಕ ಸಂಬಂಧ ಹೊಂದಿರುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧವೆನಿಸಿದ್ದರೂ ಮಹಿಳೆ ಹೊಂದಿದ್ದಲ್ಲಿ, ಆ ಹೆಂಡತಿಯ ಪ್ರಿಯಕರನನ್ನು ಐ.ಪಿ.ಸಿ. 497 ಸೆಕ್ಷನ್ ಪ್ರಕಾರ ವಿಚಾರಣೆಗೆ ಗುರಿಪಡಿಸುವ ಹಕ್ಕು ಗಂಡನದ್ದಾಗಿದ್ದು, ಒಂದು ವೇಳೆ ಆಕೆಯ ಗಂಡನ ಒಪ್ಪಿಗೆಯ ಮೇರೆಗೆ ಯಾವುದೇ ಪುರುಷ ಸಂಭೋಗಿಸಿದಲ್ಲಿ ಅದು ಅನೈತಿಕವಾಗುವುದಿಲ್ಲ ಮತ್ತು ಅದಕ್ಕೆ ಶಿಕ್ಷೆ ಇಲ್ಲ ಎಂಬುದು. ಹೆಂಡತಿಯಾದವಳು ಗಂಡನ ಖಾಸಗೀ ಆಸ್ತಿ ಎಂದು ಪರಿಗಣಿಸಲಾಗುತ್ತದೆ ಎಂಬುದು ಪ್ರತಿಬಿಂಬಿಸುತ್ತದೆ. ಅದೇ ವೇಶ್ಯಾವೃತ್ತಿಗೆ ಸಂಬಂಧಪಟ್ಟ ಕಾನೂನು ಪುರುಷ ಆಪಾದಿತನನ್ನು ತಪ್ಪಿತಸ್ಥನಾಗಿ ಪರಿಗಣಿಸುವುದೇ ಇಲ್ಲ. ನೈತಿಕತೆಯ ಬಗ್ಗೆಗಿನ ಈ ದ್ವಿಮುಖ ಧೋರಣೆ ಬಗ್ಗೆ ಎನ್.ಪಿ.ಪಿ. ಗಮನಹರಿಸುವುದೇ ಇಲ್ಲ; ಎಂದ ಮೇಲೆ ಸಮಾನತೆ ತರಲು ಹೇಗೆ ಸಾಧ್ಯ? ಇದನ್ನು ಇನ್ನೂ ಹೆಚ್ಚು ಪುಷ್ಟೀಕರಿಸುವಂತೆ ಇತ್ತೀಚಿನ 'ಸತಿ-ವಿರೋಧಿ ಕಾಯ್ದೆಯಲ್ಲಿ' ಸತಿಗೆ ಒಳಪಟ್ಟ ಮಹಿಳೆಯನ್ನೇ ಆತ್ಮಹತ್ಯೆಯ ಹೆಸರಲ್ಲಿ ಅಪರಾಧಿಯನ್ನಾಗಿಸಿ ಶಿಕ್ಷೆಗೆ ಒಳಪಡಿಸುತ್ತದೆ.

ಎನ್.ಪಿ.ಪಿ.ಯಲ್ಲಿಯೇ ತಿಳಿಸಿರುವಂತೆ 'ಬಾಲವಿವಾಹ ತಡೆ ಕಾಯ್ದೆ' ಸಾಕಷ್ಟು [illegible] ಮಾಡಲ್ಪಟ್ಟಿದ್ದರೂ ಹಿಂದುಳಿದ [illegible]ವಾದ ಬಿಹಾರ, ಮಧ್ಯಪ್ರದೇಶ, ಉತ್ತರಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಇದಕ್ಕೆ ಸಾಕಷ್ಟು ಬಾಲಬಾಲಕಿಯರು ಬಲಿಯಾಗಿದ್ದಾರೆ. ಪ್ರಾಪ್ತ ವಯಸ್ಕರಾದ ನಂತರ, ಈ ಸಂಬಂಧದ ಮುಂದುವರಿಯುವಿಕೆಯ ಅಥವಾ ಮುರಿದುಕೊಳ್ಳುವಿಕೆಯ ಬಗ್ಗೆ ನಿರ್ಧರಿಸುವ ಹಕ್ಕನ್ನು ಈ ಮಹಿಳೆಯರಿಗೆ ತಿದ್ದುಪಡಿಯ ಮೂಲಕ ಕೊಟ್ಟಿದ್ದೇ ಆದರೆ ಅವರ ಮದುವೆಯ ಆಯ್ಕೆಯ ಹಕ್ಕನ್ನು ಮರಳಿಕೊಡಬಹುದಾಗಿದೆ. ಈ ಅನುಕೂಲತೆಯನ್ನು ಈಗಾಗಲೇ 'ಹಿಂದೂ ಮದುವೆ ಕಾಯ್ದೆ'ಯಲ್ಲಿ ಕಲ್ಪಿಸಲಾಗಿದೆ. ಇದು ಇತರೆಲ್ಲಾ ವೈಯುಕ್ತಿಕ ಕಾನೂನುಗಳಲ್ಲೂ ಸೇರ್ಪಡೆಯಾಗಬೇಕು. ಇದರ ಜೊತೆಗೆ ಜನನ ಪ್ರಮಾಣ ಪತ್ರದೊಂದಿಗೆ ಮದುವೆಯನ್ನು ತಪ್ಪದೇ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿಸಬೇಕೆಂದು ಮತ್ತು ಇದನ್ನು ಕಡ್ಡಾಯವಾಗಿಸುವಂತೆ ಕ್ರಮವಹಿಸಿ. ಬಾಲವಿವಾಹ ಎಸಗಿದ ಮಕ್ಕಳ ಎರಡೂ ಕಡೆಯ ತಂದೆ-ತಾಯಿಗಳು ಇಲ್ಲವೇ ಕಾನೂನು ರೀತ್ಯಾಪಾಲಕರನ್ನು ದಸ್ತಗಿರಿ ಮಾಡುವ ಇಲ್ಲವೇ ತಪ್ಪುದಂಡ ತೆತ್ತುವಂತೆ ಮಾಡುವುದರಿಂದ ಮಾತ್ರ ಬಾಲವಿವಾಹವನ್ನು ತಡೆಹಿಡಿಯಬಹುದು. ರಿಜಿಸ್ಟ್ರೇಷನ್ನಿನ ಅನುಕೂಲತೆಯನ್ನು ಪ್ರತಿಹಳ್ಳಿ ಮತ್ತು ತಾಲ್ಲೂಕುಗಳಲ್ಲೂ ಕಲ್ಪಿಸಿಕೊಡಬೇಕು.

ಈ ಮೊದಲೇ ಸೂಚಿಸಿದಂತೆ ಸರ್ಕಾರವು ತತ್‌ಕ್ಷಣವೇ 'ಸಾಮಾನ್ಯ ನಾಗರೀಕ ಸಂಹಿತೆ'ಯನ್ನು ಜಾರಿಗೆ ತರುವ ಪ್ರಯತ್ನವನ್ನು ಪ್ರಾರಂಭಿಸಬೇಕು. ಇದರಿಂದ ಮಾತ್ರವೇ ಮಹಿಳೆಯರಿಗೆ ಸಮಾನ ಹಕ್ಕನ್ನು ಸಾಧಿಸಲು ಸಾಧ್ಯ. ಈ ಸಂಹಿತೆಯಲ್ಲಿ ಸಮಾನ ಆಸ್ತಿ ಹಕ್ಕು ಮತ್ತು ವೈವಾಹಿಕ ಆಸ್ತಿಯಲ್ಲಿಯೂ (ಮದುವೆಯ ಸಂದರ್ಭದಲ್ಲಿ ಇಬ್ಬರ ಕಡೆಯಿಂದಲೂ ಶೇಖರಣೆಗೊಂಡ ಸಂಪತ್ತು) ಸಮಾನ ಹಕ್ಕನ್ನು ಕೂಡ ಮಾಡಬೇಕು. ವೈವಾಹಿಕ ಜೀವನದಲ್ಲಿ ಕಲಹಗಳು ಉಂಟಾದಾಗಲೂ, ವೈವಾಹಿಕ ಬಂಧನದಿಂದುಂಟಾಗುವ ಮನೆಯ ಮೇಲಿನ ಹಕ್ಕು ಅಥವಾ ಭೂಮಿಯ ಮೇಲಿನ ಹಕ್ಕು (ಯಾವುದರಲ್ಲಿ ಮಹಿಳೆ ಪುರುಷನ ಜೊತೆಗೂಡಿ ಕೆಲಸ ಮಾಡುವಳೋ)ಗಳನ್ನು ಸ್ಥಾಪಿಸಲು ಆ ಆಸ್ತಿಗಳು ಈ ಇಬ್ಬರ ಹೆಸರಿನಲ್ಲಿ ಜಂಟಿಯಾಗಿ ನೋಂದಾಯಿಸಲ್ಪಟ್ಟರೆ ಮಾತ್ರ ಸಾಕಷ್ಟು ವೈವಾಹಿಕ ದಬ್ಬಾಳಿಕೆಯಿಂದ ಮಹಿಳೆ ರಕ್ಷಣೆಯನ್ನು ಪಡೆಯಬಲ್ಲಳು. (ಇಂಗ್ಲೀಷ್ ಮೆಟ್ರೋಮೋನಿಯಲ್ ಹೋಮ್ಸ್ ಆಕ್ಟ್ 1967 ಮತ್ತು ಡೊಮೆಸ್ಟಿಕ್ ವಯಲೆನ್ಸ್ ಆಕ್ಟ್ 1976 ರೀತಿಯಲ್ಲಿ)

ವೈವಾಹಿಕ ಕಲಹಗಳನ್ನು ಬೇಗದಲ್ಲಿ ಬಗೆಹರಿಸಲು ಮತ್ತು ಅದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು 'ಕುಟುಂಬ ನ್ಯಾಯಾಲಯ'ಗಳನ್ನು ಸ್ಥಾಪಿಸಬೇಕು. 'ಕುಟುಂಬ ನ್ಯಾಯಾಲಯ ಕಾಯ್ದೆ' ವರದಕ್ಷಿಣೆಗೆ ಸಂಬಂಧಿಸಿ ಕಲಂ (6)ರ ಪ್ರತ್ಯೇಕ ನಮೂದನೆ ಇರಬೇಕು ಮತ್ತು ಈ ನ್ಯಾಯಾಲಯ ಎಲ್ಲ ಮಹಿಳೆಯರಿಗೂ ಸುಲಭ ರೀತಿಯಲ್ಲಿ ಲಭಿಸುವಂತೆ ಮಾಡಲು 'ಸಂಚಾರೀ ಕುಟುಂಬ ನ್ಯಾಯಾಲಯಗಳು' ಅಸ್ತಿತ್ವಗೊಳ್ಳಬೇಕು. ಮಹಿಳೆಯರ ಹಕ್ಕುಗಳಿಗಾಗಿ ಶ್ರಮಿಸುವ ಮಹಿಳಾ ಸಂಘಟನೆಗಳ ಸದಸ್ಯರನ್ನೂ ಇವುಗಳಲ್ಲಿ ಸೇರಿಸಿಕೊಳ್ಳಬೇಕು. ಮತ್ತು ಆ ಮಹಿಳೆ ಇಷ್ಟಪಟ್ಟಲ್ಲಿ, ಇವರನ್ನು ಅವಳ ಪ್ರತಿನಿಧಿಯಾಗಿ ಪರಿಗಣಿಸಬೇಕು. ಎಂಥ ಸಂದರ್ಭದಲ್ಲಿಯೂ ಅವಸರದ ರಾಜಿ ಪ್ರಯತ್ನಗಳು ನಡೆಯಬಾರದು. ಇಲ್ಲದಿದ್ದಲ್ಲಿ ಆ ಮಹಿಳೆ ಮತ್ತೆ ಅದೇ ಕ್ಲಿಷ್ಟ ಪರಿಸ್ಥಿತಿಗೆ ವಾಪಸಾಗಬೇಕಾಗುವ ಪ್ರಸಂಗ ಒದಗೀತು.

ಎನ್.ಪಿ.ಪಿ.ಯು ಲಕ್ಷ್ಯವಹಿಸದ ಇನ್ನೊಂದು ಬಹುಮುಖ್ಯ ಅಂಶವೆಂದರೆ, ಪ್ರಚಲಿತ ಆರ್ಥಿಕ-ಸಾಮಾಜಿಕ ಮತ್ತು ರಾಜಕೀಯ ರಚನೆಯು ಸಮರ್ಥ ಕಾರ್ಮಿಕಪರ ನೀತಿಯನ್ನು ತರುವಲ್ಲಿ ಸಂಪೂರ್ಣ ಸೋತಿದೆ. ಕಾರಣ ಲಕ್ಷೋಪಲಕ್ಷ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರನ್ನು ಅತಿಕ್ರೂರ ಶೋಷಣೆಗೆ ಒಳಗುಮಾಡಲಾಗಿದೆ. ಸರ್ಕಾರದ ಅಂಕಿ-ಸಂಖ್ಯೆಗಳೇ ತೋರಿಸುವಂತೆ ಕನಿಷ್ಠ ಹಕ್ಕುಗಳನ್ನು ಕಾರ್ಮಿಕರಿಗೆ ನೀಡುವಂತಹ ಹಾಲೀ ಕಾನೂನುಗಳೇ ಜಾರಿಯಾಗದೇ (ಜೀವಂತಿಕೆಗಿಂತಲೂ ತಮ್ಮ ಗೋರಿಯಲ್ಲೇ ಇವು ಹೆಚ್ಚು ಗೌರವವನ್ನು ಪಡೆಯುತ್ತಿವೆ. ಇವು ಕನಿಷ್ಠ ಕೂಲಿ ಕಾಯ್ದೆಯಾಗಿರಬಹುದು, ಹೆರಿಗೆ ಸವಲತ್ತುಗಳ ಕಾಯ್ದೆ, ಗುತ್ತಿಗೆ ಕಾರ್ಮಿಕರ ಕಾಯ್ದೆ, ಸಮಾನ ವೇತನ ಕಾಯ್ದೆಯಾಗಿರಬಹುದು. ಇವುಗಳು ಜಾರಿಯಾಗದೇ ಪಾಶವೀ ಪರಿಸ್ಥಿತಿಗಳಿಗೆ ಹೆಚ್ಚು ಬಲಿಯಾಗುವವಳು ಮಹಿಳೆ. ಉಳಿಗಾಲಕ್ಕಾಗಿಯೇ ಅವರ ಆಕ್ರೋಶಭರಿತ ಹೋರಾಟಗಳನ್ನು, ಹೆಸರಿಗೆ ಮಾತ್ರ ಕಾನೂನುಗಳಿದ್ದು, ಅವರ ಪಾಲಿಗೆ ಇಲ್ಲದಿರುವ ಹಿನ್ನೆಲೆಯಲ್ಲಿ ನೋಡಬೇಕಿದೆ. ಹೀಗಾಗಿ ಕಾನೂನುಗಳು ಮಾಡುವುದು ಮಾತ್ರವಲ್ಲ ಅದನ್ನು ಸಮಮರ್ಥವಾಗಿ ಜಾರಿಗೊಳಿಸಲು, ಎಂತಹ ವಿರೋಧಶಕ್ತಿಗಳು ಬಂದರೂ ಎದುರಿಸಲು ತಕ್ಕುದಾದ ವ್ಯವಸ್ಥೆಯನ್ನು ಮಾಡಬೇಕಿರುವುದು ಅತಿ ಅವಶ್ಯ.

ಗುರ್ತಿಸಬೇಕಾದ ಅಂಶವೆಂದರೆ, ಅಸ್ತಿತ್ವದಲ್ಲಿರುವ ವಿವಿಧ ಕಾನೂನುಗಳೂ ಮತ್ತು ಅದನ್ನು ಜಾರಿ ಮಾಡಬೇಕಾದ, ಫ್ಯಾಕ್ಟರಿ ಮತ್ತು ಗುತ್ತಿಗೆ ಕಾರ್ಮಿಕರ ಕಾಯ್ದೆಗಳ ಇನ್‌ಸ್ಪೆಕ್ಟರ್‌ಗಳಂತಹ ಸರ್ಕಾರಿ ನೌಕರರು ಸೇರಿದಂತೆ, ಈ ಎಲ್ಲವೂ ಮಾಲೀಕರ ಪರವಾಗಿಯೇ ಇರುವಂಥವುಗಳು. ಹೀಗಾಗಿ ಕೇವಲ ಸರ್ಕಾರೀ ಪ್ರತಿನಿಧಿಗಳಾಗಿರುವ ನೌಕರರಷ್ಟೇ ಅಲ್ಲದೆ ಇವರ ಜೊತೆ ಕಾರ್ಮಿಕ ಪ್ರತಿನಿಧಿಗಳನ್ನು ಹಾಕಿಕೊಂಡಾಗ ಮಾತ್ರ ಈ ಕಾಯ್ದೆಗಳನ್ನು ಸಮರ್ಥವಾಗಿ ಜಾರಿಗೊಳಿಸಬಹುದು. ಈ ವ್ಯವಸ್ಥೆಯು ಸಾಕಷ್ಟು ವಿಕೇಂದ್ರೀಕರಣಗೊಂಡು ನಿಜವಾದ ಅರ್ಥದಲ್ಲಿ ಮಹಿಳೆಯರಿಗೆ ನೆಮ್ಮದಿ ಕೊಡುವಂಥದಾಗಿರಬೇಕು.

ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಅವರ ಮತ್ತು ಅವರ ಕುಟುಂಬಕ್ಕೆ ಕನಿಷ್ಠ ಜೀವನ ಮಟ್ಟವನ್ನು ದೊರಕಿಸಿಕೊಡುವ ಕೂಲಿಯಾದರೂ ಸಿಗಲೇಬೇಕು. ಮತ್ತು ಇದು ಎಷ್ಟೆಂಬುದಕ್ಕೂ ಯಾವ ರೀತಿ ಹೆಚ್ಚಿಸಬೇಕೆಂಬುದಕ್ಕೂ ಸರಿಯಾದ ಮಾರ್ಗದರ್ಶನವಿರಬೇಕು. ಈ ಕನಿಷ್ಠ ಕೂಲಿ ನಿಗದಿಪಡಿಸುವುದರಲ್ಲಿ ಯಾವುದೇ ರೀತಿಯ ರಿಯಾಯಿತಿ ಇರಕೂಡದು ಮತ್ತು ಇದರ ಜೊತೆಗೆ ಪ್ರತಿಯೊಬ್ಬ ಕಾರ್ಮಿಕನ ಹೆಸರೂ ನೊಂದಾಯಿಸಬೇಕು. ಏಕೆಂದರೆ ಇದರಿಂದ ಅವರಿಗೆ ಸಾಕಷ್ಟು ಕಾನೂನು ಸವಲತ್ತುಗಳು ಸಿಗಲು ಸಾಧ್ಯ. ಇದು ಅತಿ ಮುಖ್ಯವಾಗಿರುವುದು ಗೋಡೆ ಕೆಲಸ, ಹೊಲದ ಕೆಲಸ ಮತ್ತು ಗೃಹ ಕಸುಬುಗಳಲ್ಲಿ ತೊಡಗಿರುವವರಿಗೆ ಏಕೆಂದರೆ ಇಲ್ಲಿ ಮಾಲೀಕ ಯಾರೆಂಬುದೇ ಗುರುತಿಸುವುದು ಕಷ್ಟ. ಬೀಡಿ ಸುತ್ತುವ ಕೆಲಸದಲ್ಲಂತೂ ಮನೆಯ ಪ್ರಧಾನರಾದ, ಪುರುಷನ ಹೆಸರೊಂದೇ ಸೊಂದಾಯಿಸಲ್ಪಟ್ಟಿರುತ್ತೆ ಆದರೆ ನಿಜವಾದ ಕೆಲಸಗಾರರು ಆತನ ಹೆಂಡತಿ ಮತ್ತು ಮಕ್ಕಳಾಗಿರುತ್ತಾರೆ.

ಬಹು ಅವಶ್ಯಕ ವಿಷಯವೆಂದರೆ ದುಡಿಯಲೇಬೇಕಿದ ಪ್ರತಿಯೊಬ್ಬ ಮಹಿಳೆಗೂ ಹೆರಿಗೆ ಸವಲತ್ತುಗಳನ್ನು ಮತ್ತು ಆಕೆ ದುಡಿಮೆಯಲ್ಲಿ ನಿರತಳಾದಾಗ ಆಕೆಯ ಮಗುವಿನ ಪಾಲನೆಗಾಗಿ ಶಿಶುಪಾಲನಾ ಕೇಂದ್ರಗಳನ್ನು ಒದಗಿಸಲೇಬೇಕು. ಆಕೆಗೆ ಎಷ್ಟುಬಾರಿ ಹೆರಿಗೆ ಸವಲತ್ತು ಕೊಡಬೇಕೆಂಬ ವಿಚಾರವೇ ಅತೀ ಕ್ಷುಲ್ಲಕ ಹಾಗೂ ಅಮಾನವೀಯವಾದ ಕಾರಣ ಚರ್ಚಾರ್ಹದ್ದಲ್ಲ. ಕೊಡಲ್ಪಡುವ ಹೆರಿಗೆ ಭತ್ಯೆಯನ್ನು ಪ್ರತಿಯೊಬ್ಬ ಮಾಲೀಕರಿಂದ, ಅವರಲ್ಲಿ ಮಹಿಳಾ ಕಾರ್ಮಿಕರು ಇದ್ದಾರೋ ಇಲ್ಲವೋ ಎಂದನ್ನದೆ, ಇದಕ್ಕಾಗಿಯೇ ಕೇಂದ್ರೀಕೃತವಾದ ನಿಧಿಯನ್ನು ಸಂಗ್ರಹಿಸಿ ಇಡಬೇಕೆಂಬ ಸಲಹೆ ಸ್ವಾಗತಾರ್ಹವಾದರೂ, ಇದನ್ನು ಇನ್ನಷ್ಟು, ಹೆಚ್ಚು ಮಾಡಿ ಇವರ ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರದ ಅನುಕೂಲತೆಯನ್ನು ಕೊಡುವಂತಾಗಬೇಕು.

'ಸಮಾನ ಕೆಲಸಕ್ಕೆ ಸಮಾನ ವೇತನ' ಕಾನೂನು ಸಹ ಸಮಾನ ಕೆಲಸವೆಂದು ಹೇಳುವಾಗ, ಒಂದೇ ಕೆಲಸ ಅಥವಾ ಒಂದೇ ತೆರನಾದ ಕೆಲಸವೆಂತಲ್ಲದೆ, ಸಮಾನ ಮೌಲ್ಯವನ್ನು ಹೊಂದಿರುವ ಕೆಲಸಕ್ಕೆ ಸ್ತ್ರೀ ಪುರುಷರಿಬ್ಬರಿಗೂ ಸಮಾನ ವೇತನ ಸಿಗುವಂತೆ ಮಾರ್ಪಡಿಸಬೇಕು ಮತ್ತು ಇದಕ್ಕೆ ತಕ್ಕ ಮಾರ್ಗದರ್ಶನಗಳೂ ಬೇಕು.

ಉದ್ಯೋಗದಲ್ಲಿ ಭರ್ತಿ ಮಾಡಿಕೊಳ್ಳುವ ಸಮಯದಲ್ಲಿಯೂ ಸಹ ಮಾಡಲಾಗುವ, ಲಿಂಗಾಧಾರಿತ ಭೇದಗಳ ವಿರುದ್ಧ ಬಿಗಿಯಾದ ನಿಲುವು ಜಾರಿಗೊಳ್ಳಬೇಕು. ಯಾವುದೇ ಮಹಿಳೆಯನ್ನು ಕೆಲಸದಿಂದ ಹೊರತೆಗೆಯುವ ಮುನ್ನ, ಆ ಬಗ್ಗೆ, ಮಹಿಳೆಯ ಹಿತರಕ್ಷಣೆಯ ಕಾನೂನನ್ನು ಜಾರಿ ಮಾಡುವ ಇಲಾಖೆಯ ಗಮನಕ್ಕೆ ತರುವಂಥದ್ದು. ನಮ್ಮ ಗಟ್ಟಿಯಾದ ಅನಿಸಿಕೆ ಎಂದರೆ ವಿವಿಧ ತೊಂದರೆಗಳಿಗೆ ಒಳಗಾಗುವ ಗುತ್ತಿಗೆ ಕಾರ್ಮಿಕರನ್ನು, ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸುವ ಮುಖಾಂತರ ಮುಖ್ಯ ಮಾಲೀಕ (Principal employer) ನಿಂದಲೇ ನೇರ ಉದ್ಯೋಗ ಪಡೆಯುವ ಕಾನೂನು ತರಬೇಕು. ಇದಲ್ಲದೆ ಗೃಹ ಕಸಬುದಾರರಿಗೂ ಮತ್ತು ಅಸಂಘಟಿತ ಕಾರ್ಮಿಕರಿಗೂ ಸಂಪೂರ್ಣ ಕಾನೂನು ರಕ್ಷಣೆ ಕೊಡಬೇಕು.

ಸ್ವಯಂ ಉದ್ಯೋಗ ವಿಭಾಗದಲ್ಲಿಯ ತಳ್ಳುವ ಬಂಡಿ, ಹಣ್ಣು, ಹೂ, ತರಕಾರಿ, ಮೀನು-ಮಾಂಸದ ಮಾರಾಟಗಾರರಿಗೆ ದಬ್ಬಾಳಿಕೆಯನ್ನು ತಡೆಗಟ್ಟಿ, ಸುಲಭ ರೀತಿಯಲ್ಲಿ ಲೈಸನ್ಸ್‌ಗಳನ್ನು ಪಡೆದು ತಮ್ಮ ವ್ಯಾಪಾರ ಸುಗಮ ರೀತಿಯಲ್ಲಿ ನಡೆಸಿಕೊಳ್ಳುವಂತೆ ನಗರಸಭೆ ಮತ್ತು ಪೊಲೀಸ್ ಕಾನೂನುಗಳಲ್ಲಿ ತಿದ್ದುಪಡಿ ಮಾಡಬೇಕು.

ಈ ಕಾನೂನುಗಳನ್ನು ಮಹಿಳೆಯರ ಹಿತರಕ್ಷಣೆಗಾಗಿ ಉಪಯೋಗಿಸುವುದರೊಂದಿಗೇ ಅವಶ್ಯಕ ಹಾಗೂ ಮಾನವೀಯ ವಾತಾವರಣವನ್ನು ಉಂಟು ಮಾಡಲು ಬೇಕಾದ ಚಿಕಿತ್ಸೆಯ ಸೌಲಭ್ಯ, ರಕ್ಷಣೆಯ ಪರಿಸರ, ಹಾಗೂ ರಕ್ಷಣೆಯ ಹಲವು ಮುಂಜಾಗ್ರತಾ ಕ್ರಮಗಳನ್ನು ಎಲ್ಲ ಸಂದರ್ಭಗಳಲ್ಲಿಯೂ ಎಲ್ಲೆಡೆಯಲ್ಲಿಯೂ ಪಡೆಯುವಂತಾಗಬೇಕು. ತಾನು ದುಡಿಯುವ ತಾಣದಲ್ಲಿ ವಿಶ್ರಾಂತಿಗಾಗಿ ನೈಸರ್ಗಿಕ ಕ್ರಿಯೆಗಳಿಗಾಗಿ ಮತ್ತು ತನ್ನ ಮಗುವನ್ನು ಸಂರಕ್ಷಿಸುವುದಕ್ಕಾಗಿ ಅನುಕೂಲತೆಗಳನ್ನು ಪಡೆಯುವಂತಾಗಬೇಕು.

ಈ ಎಲ್ಲಾ ಕಾನೂನುಗಳು ಸರಿಯಾಗಿ ಮತ್ತು ಸಮರ್ಥವಾಗಿ ಜಾರಿಗೊಳ್ಳುವಂತೆ ನೋಡಿಕೊಳ್ಳಲು ಮತ್ತು ತಕ್ಕರಾರನ್ನು ನೀಡುವ ಅಧಿಕಾರವನ್ನು ಮಹಿಳಾ ಸಂಘಟನೆಗಳಿಗೊ, ಕಾರ್ಮಿಕ ಸಂಘಟನೆಗಳಿಗೋ, ನೊಂದ ಮಹಿಳೆಗೋ, ಅಥವಾ ಇಚ್ಛಿಸಿದಲ್ಲಿ ಆಕೆಯ ಪರವಾಗಿ ಮತ್ಯಾರಿಗೋ ಅಧಿಕಾರವನ್ನು ಕೊಡುವಂಥದ್ದು. ಕಾನೂನು ರೀತ್ಯಾ ವಿಧಿಸಿರುವಂಥ ತಪ್ಪು ದಂಡವನ್ನು ಮಾಲೀಕನು ತೆತ್ತುವುದನ್ನು ಬಿಗಿಗೊಳಿಸಬೇಕು. ಮತ್ತು ಕಾನೂನನ್ನು ಉಲ್ಲಂಘಿಸಿದುದಕ್ಕಾಗಿ, ದಂಡ ತೆರುವುದಷ್ಟೇ ಅಲ್ಲ, ಕಾರ್ಮಿಕನ ವೇತನ ನಷ್ಟ, ಕೇಸು ನಡೆಯುವಾಗಿನ ನ್ಯಾಯಾಲಯದ ಖರ್ಚುಗಳು, ಓಡಾಡುವ ಖರ್ಚುಗಳನ್ನೂ ತುಂಬಿಕೊಡಬೇಕಾದ ಜವಾಬ್ದಾರಿ ಬೀಳಬೇಕು. ಉಚಿತ ಮತ್ತು ಸುಲಭ ಕಾನೂನು ನೆರವನ್ನು ಕಾರ್ಮಿಕನಿಗೆ ನೀಡುವಂತಾಗಬೇಕು.

ದೂರು ನೀಡಲು ಹೋದಾಗ ದೂರನ್ನು (FIR) ದಾಖಲುಮಾಡಿಕೊಳ್ಳದೆ ಮತ್ತು ತನಿಖೆ ನಡೆಸದ ಪೊಲೀಸ್ ಇಲಾಖೆಯ ಮೇಲೆ ಕ್ರಮ ತೆಗೆದುಕೊಳ್ಳುವ ಮತ್ತು 195 5 ರ 'ನಾಗರಿಕ ಹಕ್ಕುಗಳ ರಕ್ಷಣೆ ಕಾಯ್ದೆ'ಯ ಕಲಂ 10ರ ಅನ್ವಯ ದಾಖಲು ಮಾಡದೇ ಕಾನೂನನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಶಿಕ್ಷೆಗೆ ಗುರಿಪಡಿಸಬೇಕು. ಎಲ್ಲಾ ತನಿಖೆಗಳು ನಿಗದಿತ ಸಮಯದಲ್ಲಿ ನಡೆದು, ವಿಚಾರಣೆಯೂ ಆರು ತಿಂಗಳ ಒಳಗೇ ಮುಗಿಯುವಂತಾಗಬೇಕು. ಮಹಿಳೆಯರ ಮೇಲಾಗುವಂತಹ ಅಪರಾಧಗಳು ಮತ್ತು ದಬ್ಬಾಳಿಕೆಗೆ ಒಳಗಾದ ಆಕೆಯ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು 'ಸಾಕ್ಷ್ಯಾಧಾರಗಳ ಕಾಯ್ದೆ'ಯಲ್ಲಿ ಸೂಕ್ತ ಬದಲಾವಣೆಗಳನ್ನು ತರಬೇಕು.

ಎನ್.ಪಿ.ಪಿ.ಯು ಮಹಿಳೆಯರ ಹಕ್ಕುಗಳನ್ನು ಕಾಪಾಡಲು ಒಬ್ಬ ಆಯುಕ್ತರನ್ನು ಶಿಫಾರಸು ಮಾಡಿದೆ. ಆದರೆ ಕಾನೂನುಗಳನ್ನು ಸಮರ್ಥಕ ರೀತಿಯಲ್ಲಿ ಜಾರಿಗೊಳಿಸಲು ಏಕೈಕ ಆಯುಕ್ತರೊಬ್ಬರಿಂದ ಸಾಧ್ಯವಿಲ್ಲ. ಅದರ ಬದಲು ಕೆಳಗಿನ ಸ್ಥಳೀಯ ಮಟ್ಟದವರೆಗೂ ಕೆಲಸ ಮಾಡುವ, ವಿಕೇಂದ್ರೀಕರಣಗೊಂಡ, ಇದರ ಜಾರಿಗಾಗಿಯೇ, ಮತ್ತು ಎಚ್ಚರಿಕೆ ಕೊಡುವ (Monitoring) ಸಮಿತಿಯು ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಮತ್ತು ಸರ್ಕಾರೀ ಪ್ರತಿನಿಧಿಗಳನ್ನು ಹೊಂದಿದ್ದು ಆಗಿಂದಾಗ್ಗೆ ವರದಿಯನ್ನು ಮೇಲೆ ಮಹಿಳಾ ಆಯುಕ್ತರಿಗೆ ಕಳಿಹಿಸುವ ಮತ್ತು ಜವಾಬ್ದಾರಿಯನ್ನು ಹೊರುವಂಥದ್ದಾಗಿರಬೇಕು.

ಹೆಚ್ಚಿನ ಶಿಫಾರಸುಗಳು-

(1) ಮಹಿಳೆಯರು ಲಿಂಗಾಧಾರಿತ ದಬ್ಬಾಳಿಕೆ ಮತ್ತು ಆರ್ಥಿಕ ಶೋಷಣೆಗೆ ಒಳಗಾದ ವಿಭಾಗ ಎಂಬ ಆಧಾರದಲ್ಲಿ, ಒಂದು 'ರಾಷ್ಟ್ರೀಯ ನೀತಿ'ಯನ್ನು ತರುವ ಅವಶ್ಯಕತೆ ಇದೆ. ಮಹಿಳೆಯರಿಗೆ ನ್ಯಾಯಾಲಯದಲ್ಲಿ ತಮ್ಮ [illegible] ಫಿರ್ಯಾದುಗಳನ್ನು ಮಾಡಲು, ಕಾನೂನು ವ್ಯವಸ್ಥೆಯಲ್ಲಿ, ಸುಲಭ ಮತ್ತು ಕಡಿಮೆ ಖರ್ಚಿನ ಅನುಕೂಲತೆಯನ್ನೊದಗಿಸುವ ಸಮಯೋಜಿತ ನೀತಿಯೊಂದು ಬೇಕು.

(2) ಮಹಿಳೆಯರ ಬಗೆಗಿರುವ ಎಲ್ಲಾ ಬೇಧ ಭಾವಗಳನ್ನು ತೊಡೆದು ಹಾಕಬೇಕೆಂಬ 1979ರ ಜಾಗತಿಕ ಸಮಾವೇಶದ ನಡುವಳಿಕೆಯನ್ನು ಈಗಾಗಲೇ 93 ರಾಷ್ಟ್ರಗಳು ಸ್ವೀಕರಿಸಿದ್ದು ನಮ್ಮ ರಾಷ್ಟ್ರವೂ ಇದಕ್ಕೆ ಬದ್ಧವಾಗುವಂತೆ ಆಗಬೇಕು.

(3) ಮೇಲೆ ತಿಳಿಸಿದ ಸಮಾವೇಶದ ನಿಬಂಧ 2ರ ಸಾಮಾನ್ಯ ನಿಯಮದ ನಿರ್ದೇಶನವು, ಸರ್ಕಾರದ ನೀತಿಯ ಒಂದು ಭಾಗವಾಗಿರಬೇಕು.

ತ್ರಿಪುರಾ; ಮತದಾರ ಪಟ್ಟಿಯಲ್ಲಿ ಮೋಸ

ಮತದಾನದ ವಯಸ್ಸನ್ನು 21ರಿಂದ 18ಕ್ಕಿಳಿಸಿದ ಸಂವಿಧಾನ ತಿದ್ದುಪಡಿಯ ಪರಿಣಾಮವಾಗಿ ಆರಂಭವಾಗಿರುವ ಕರಡು ಮತದಾನ ಪಟ್ಟಿ ತಯಾರಿಯಲ್ಲಿ ತ್ರಿಪುರಾದಲ್ಲಿ ಆಗುತ್ತಿರುವ ಬಹಳಷ್ಟು ಪ್ರಮಾಣದ ಮೋಸದತ್ತ ತ್ರಿಪುರಾ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ಮುಖಂಡ ನೃಪೇನ್ ಚಕ್ರವರ್ತಿಯವರು ಮುಖ್ಯ ಚುನಾವಣಾ ಆಯುಕ್ತರ ಗಮನ ಸಳೆದಿದ್ದಾರೆ. ತ್ರಿಪುರಾದ ಮುಖ್ಯ ಚುನಾವಣಾ ಅಧಿಕಾರಿಯವರೇ ಚುನಾವಣಾ ರಿಜಿಸ್ಟ್ರೇಷನ್ ಅಧಿಕಾರಿಗಳ ನೆರವಿನಿಂದ ಈ ಮೋಸದಲ್ಲಿ ತೊಡಗಿದ್ದಾರೆಂದು ಕಾ॥ ನೃಪೇನ್‌ಚಕ್ರವರ್ತಿಯವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಕಾಂಗ್ರೆ ಟಿ.ಯು.ಜೆ.ಎಸ್. ಬೆಂಬಲಿಗರನ್ನೇ ಮತದಾರರ ಪಟ್ಟಿ ತಯಾರಿಕೆಯ ಕೆಲಸದಲ್ಲಿ ಬಳಸಿರುವುದು, ಕಾಂಗ್ರೆ ಟಿ.ಯು.ಜೆ.ಎಸ್. ಮುಖಂಡರೊಂದಿಗೇ ಪಟ್ಟಿ ತಯಾರಿಕೆ ಕೆಲಸಕ್ಕೆ ಹೋಗಬೇಕೆಂದು ವಿಧಿಸುವುದು, ಎಡರಂಗದ ಬೆಂಬಲಿಗ ಕುಟುಂಬಗಳ ಮನೆಗಳಿಗೆ ಹೋಗದೆ ಕರಡು ಪಟ್ಟಿಯಲ್ಲಿ ಅವರ ಹೆಸರುಗಳು ಬರದಂತೆ ಮಾಡುವುದು, ಈಗಾಗಲೇ ಪಟ್ಟಿಯಲ್ಲಿರುವ ಹೆಸರುಗಳನ್ನು ಏನಾದರೂ ನೆವ ಹೇಳಿ ಕಿತ್ತು ಹಾಕುವುದು, ಪಟ್ಟಿ ತಯಾರಕರು ಯಾರಾದರೂ ಇವನ್ನೆಲ್ಲಾ ವಿರೋಧಿಸಿದರೆ ಅವರನ್ನು ನಿರ್ದಯವಾಗಿ ಥಳಿಸಿ ಆಸ್ಪತ್ರೆ ಸೇರಿಸುವುದು ಈ ಎಲ್ಲಾ ಕುಕೃತ್ಯಗಳನ್ನು ಕಾ॥ ನೃಪೇನ್ ಚಕ್ರವರ್ತಿಯವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ. ನಿಜವಾಗಿ ಈ ಪಟ್ಟಿ ತಯಾರಕರು ಮನೆ-ಮನೆಗೆ ಭೇಟಿಯಿತ್ತು ಹೆಸರು ದಾಖಲಿಸಿಕೊಳ್ಳಬೇಕು. ಆದರೆ ತ್ರಿಪುರಾದಲ್ಲಿ ಮಾರ್ಕೆಟ್‌ನಲ್ಲೋ, ಸರ್ಕಾರಿ ಕಛೇರಿಯಲ್ಲೋ ಕೂತು ಕಾಂಗ್ರೆ ಟಿ.ಯು.ಜೆ.ಎಸ್. ಮುಖಂಡರ ನಿರ್ದೇಶನಗಳ ಪ್ರಕಾರ ಪಟ್ಟಿ ತಯಾರಿಸಲಾಗುತ್ತಿದೆ. ನಾಗರಿಕತ್ವದ ಪತ್ರವಿರದ ಬಾಂಗ್ಲಾದೇಶೀಯರ ಹೆಸರನ್ನು ಪಟ್ಟಿಯಲ್ಲಿ ಸೇರಿಸಲಾಗುತ್ತಿದೆ.

ಕಳೆದ ಚುನಾವಣೆಯ ನಂತರ 5 3 ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು ಬಲಿತೆಗೆದುಕೊಂಡ ಭಯೋತ್ಪಾದನೆ, ಫತಿಕ್ ರಾಯ್ ಚುನಾವಣೆಯಲ್ಲಿ ಮೋಸ, ಈಗ ಪಟ್ಟಿ ತಯಾರಿಕೆಯ ಹಂತದಿಂದಲೇ ಈ ರೀತಿಯ ಮೋಸ-ಇಂತಹ ಹಿನ್ನೆಲೆಯಲ್ಲಿ ಜನಗಳಿಗೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳಿಯುತ್ತದೆಯೋ ಎಂದು ಕಾ॥ ನೃಪೇನ್ ತಮ್ಮ ಪತ್ರದಲ್ಲಿ ಪ್ರಶ್ನಿಸಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗುತ್ತಿರುವ ತಪ್ಪುಗಳನ್ನು ಮುಂದೆ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಕಳೆದ ಬಾರಿ ಇದಕ್ಕೆ ಸಂಬಂಧಪಟ್ಟ ಫಾರ್ಮುಗಳೂ ಜನರಿಗೆ ಸಿಗದಂತೆ ಮಾಡಲಾಗಿತ್ತು. ಆದ್ದರಿಂದ ಈ ಎಲ್ಲಾ ದೂರುಗಳ ಬಗ್ಗೆ ತನಿಖೆ ನಡೆಸಲು ವೀಕ್ಷಕರ ತಂಡವೊಂದನ್ನು ಕಳುಹಿಸಬೇಕೆಂದು, ಹಾಗೂ ಪಟ್ಟಿ ತಯಾರಿಕೆಯ ಅವಧಿಯನ್ನು ಮಾರ್ಚ್ ಅಂತ್ಯದವರೆಗಾದರೂ ಒಂದು ತಿಂಗಳು ಮುಂದುವರಿಸಬೇಕೆಂದು ಅವರು ತಮ್ಮ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಬೋಡೋ ಚಳುವಳಿ; ಮಾತುಕತೆಗಳಿಂದಲೇ ಪರಿಹಾರ

ಇತ್ತೀಚೆಗೆ ಅಸ್ಸಾಂನಲ್ಲಿ ನಡೆಯುತ್ತಿರುವ ಬೋಡೋ ಬುಡಕಟ್ಟು ಜನಾಂಗದ ಚಳುವಳಿಯ ಹಿನ್ನೆಲೆಯಲ್ಲಿ ನಡೆದ ದುರುಂತ ಘಟನೆಗಳ ಬಗ್ಗೆ ಸಿ.ಪಿ.ಐ.(ಎಂ)ನ ಅಸ್ಸಾಂ ರಾಜ್ಯ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಹಿಂಸಾಚಾರ ನಡೆಸುವುದನ್ನು ಬಲವಾಗಿ ಖಂಡಿಸಬೇಕಾದರೂ, ಬುಡಕಟ್ಟು ಜನರು ದಶಕಗಳ ಕಾಲ ಕಾದು ಬೇಸತ್ತು ಚಳುವಳಿಯ ಹಾದಿ ಹಿಡಿದಿದ್ದಾರೆಂಬ ವಾಸ್ತವ ಸಂಗತಿಯನ್ನು ಕೂಡಾ ನಾವು ಮರೆಯಬಾರದು ಎಂದು ರಾಜ್ಯ ಸಮಿತಿ ಎಚ್ಚರಿಸಿದೆ. ನಮ್ಮಂತಹ ಬಹುದೇಸೀ ರಾಷ್ಟ್ರದಲ್ಲಿ, ತಮ್ಮತನ ಹಾಗೂ ಸಮಾನ ಹಕ್ಕುಗಳಿಗಾಗಿ ಅವರ ಹೋರಾಟದಲ್ಲಿ ಪ್ರಜಾಪ್ರಭುತ್ವ ಅಂಶಗಳಿರುವುದನ್ನು ನಿರ್ಲಕ್ಷಿಸಬಾರದೆಂದು ರಾಜ್ಯ ಸಮಿತಿ ಹೇಳಿಕೆ ವಿವರಿಸಿದೆ.

ಪ್ರತ್ಯೇಕ ಬುಡಕಟ್ಟು ರಾಜ್ಯದ ಕರೆ ಒಪ್ಪತಕ್ಕದ್ದಲ್ಲ. ಏಕೆಂದರೆ ಅದು ವಾಸ್ತವತೆಯಲ್ಲ ಎಂದಿರುವ ರಾಜ್ಯ ಸಮಿತಿ ಅದೇ ಸಮಯದಲ್ಲಿ, ಬುಡಕಟ್ಟು ಅಲ್ಪ ಸಂಖ್ಯಾತರ ಹಕ್ಕುಗಳನ್ನು ರಾಜಕೀಯವಾಗಿ ಮಾನ್ಯ ಮಾಡಿ ಅವರಿಗೆ ಪ್ರಾದೇಶಿಕ, ಸ್ಥಳೀಯ ಸ್ವಾಯತ್ತತೆ ನೀಡಿ ದೇಶವನ್ನು ಆಳುವ ಕೆಲಸದಲ್ಲಿ ಅವರು ಪಾಲುದಾರರಾಗುವಂತೆ ಮಾಡುವುದೇ ಈ ಸಮಸ್ಯೆಯ ಪರಿಹಾರದ ಮುಖ್ಯ ಅಂಶ ಎಂಬುದನ್ನು ಗಮನಿಸಬೇಕು ಎಂದು ಹೇಳಿದೆ. ಈ ವಾಸ್ತವತೆಯನ್ನು ಗಮನಿಸದೆ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲ.

ಸರ್ವಾಧಿಕಾರೀ ರಾಜೀವ್ ಸರ್ಕಾರಕ್ಕೆ ಪರ್ಯಾಯ ರೂಪಿಸುವ ಹೋರಾಟದಲ್ಲಿ ಅಖಿಲಭಾರತ ರಾಷ್ಟ್ರೀಯ ರಂಗವನ್ನು ಈಗ ಸೇರಿರುವ ಎ.ಜಿ.ಪಿ. ಕಳೆದ ನಾಲ್ಕು ದಶಕಗಳಲ್ಲಿ ಸರ್ಕಾರದ ಬುಡಕಟ್ಟು ಧೋರಣೆ ಹೊಸ ಸಮಸ್ಯೆಗಳನ್ನು ಸೃಷ್ಟಿಸಿದೆಯೇ ಹೊರತು ಪರಿಹರಿಸಿಲ್ಲ ಎಂಬುದನ್ನು ಗಮನಿಸಬೇಕೆಂದು ರಾಜ್ಯ ಸಮಿತಿ ಹೇಳಿದೆ.

ಬುಡಕಟ್ಟು ಚಳುವಳಿ ಕೂಡಾ ರಾಜ್ಯದ ಮತ್ತು ದೇಶದ ಪ್ರಜಾಪ್ರಭುತ್ವ ಚಳುವಳಿಯಿಂದ ದೂರವಾಗದೆ ಅದರೊಡನೆ ಸೇರಿಕೊಂಡು ಮಾತ್ರವೇ ಸಮಾನತೆಯ ಹಕ್ಕುಗಳನ್ನು ಗೆದ್ದುಕೊಳ್ಳಲು ಸಾಧ್ಯ ಎಂಬುದನ್ನು ಅರಿಯಬೇಕು ಪಕ್ಕದ ತ್ರಿಪುರಾದಲ್ಲಿ, ಚುನಾಯಿತ ಸ್ವಾಯತ್ತ ಮಂಡಳಿ ಬೇಕೆಂಬ ಬುಡಕಟ್ಟು ಜನರ ಬೇಡಿಕೆಯನ್ನು ಬುಡಕಟ್ಟು ಜನರು ಮತ್ತು ಇತರ ಸಂಯುಕ್ತ ಹೋರಾಟದಿಂದಲಷ್ಟೇ ಈಡೇರಿಸಿಕೊಳ್ಳಲು ಸಾಧ್ಯವಾಯಿತು ಎಂಬುದನ್ನು ಬೋಡೋ ಜನರ ಆಂದೋಲನ ಕೂಡಾ ಗಮನಿಸಬೇಕೆಂದು ರಾಜ್ಯ ಸಮಿತಿ ಕರೆ ನೀಡಿದೆ.

ಜಾತಿ, ಮತ, ಜನಾಂಗಗಳ ಭೇದವಿಲ್ಲದೆ ಶಾಂತಿ, ಸೌಹಾರ್ದವನ್ನು ಎಷ್ಟೇ ತೊಂದರೆ ಬಂದರೂ ಕಾದುಕೊಂಡು ಮಾತುಕತೆಯ ಮೂಲಕ ಸಮಸ್ಯೆಯ ಶೀಘ್ರ ಇತ್ಯರ್ಥಕ್ಕೆ ಜನಾಭಿಪ್ರಾಯ ಸಂಘಟಿಸಬೇಕು. ಏಕೆಂದರೆ ಅಸ್ಸಾಂನ ಸಮಗ್ರತೆ ಮತ್ತು ಐಕ್ಯತೆ ಕಾಪಾಡಲು ಇದೊಂದೇ ಮಾರ್ಗ ಎಂದು ಅಸ್ಸಾಂ ರಾಜ್ಯ ಸಮಿತಿ ಜನತೆಗೆ ಮನವಿ ಮಾಡಿಕೊಂಡಿದೆ.

ಮಹಾರಾಷ್ಟ್ರ; ಪರೀಕ್ಷಾ ಶುಲ್ಕ ಏರಿಕೆಗೆ ಶುಲ್ಕ ಏರಿಕೆಗೆ ವ್ಯಾಪಕ ಪ್ರತಿಭಟನೆ

ಕಳೆದೆರಡು ವರ್ಷಗಳಿಂದ ಹೊಸ ಶಿಕ್ಷಣ ನೀತಿಯ ಪ್ರಕಾರ ಇಂಜಿನಿಯರಿಂಗ್, ಮೆಡಿಕಲ್ ಮುಂತಾದ ವಿಭಾಗಗಳಲ್ಲಿ ಶಿಕ್ಷಣ ಶುಲ್ಕ ಏರಿಕೆ, ಶಿಕ್ಷಣದ ಖಾಸಗೀಕರಣ ಇತ್ಯಾದಿ ಮಾಡಿಕೊಂಡು ಬಂದಿರುವ ಮಹಾರಾಷ್ಟ್ರ ಸರ್ಕಾರ ಇತ್ತೀಚೆಗೆ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ) ಮತ್ತು ಹೆಚ್.ಎಸ್.ಸಿ. (12ನೇ ತರಗತಿ) ಪರೀಕ್ಷಾ ಶುಲ್ಕವನ್ನು ವಿಪರೀತವಾಗಿ ಏರಿಸಿತು. ಈ ಏರಿಕೆಯನ್ನು ಪರೀಕ್ಷಾ ಫಾರ್ಮ್ ಭರ್ತಿ ಮಾಡುವ ಕೇವಲ ಹತ್ತೇ ದಿನಗಳ ಮೊದಲು ತಿಳಿಸಲಾಯಿತು. ಇದರಿಂದ ವಿದ್ಯಾರ್ಥಿಗಳು ಪ್ರತಿಭಟಿಸಲು ಅವಕಾಶವಾಗಲಿಕ್ಕಿಲ್ಲವೆಂಬುದು ಸರ್ಕಾರದ ಎಣಿಕೆ.

ಎಸ್.ಎಫ್.ಐ. ರಾಜ್ಯ ಸಮಿತಿ ಲಕ್ಷಾಂತರ ವಿದ್ಯಾರ್ಥಿಗಳನ್ನು ತಟ್ಟುವ ಸರ್ಕಾರದ ಈ ಸಿನಿಕತನದ ಕೃತ್ಯವನ್ನು ಪ್ರತಿಭಟಿಸಲು ಜಿಲ್ಲಾ ಮಟ್ಟದಲ್ಲಿ ವಿದ್ಯಾರ್ಥಿಗಳನ್ನು ಅಣಿನೆರೆಸಲು ನೀಡಿದ ಕರೆಯ ಪ್ರಕಾರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಶುಲ್ಕ ಏರಿಕೆಯ ವಿರುದ್ಧ ವ್ಯಾಪಕ ಪ್ರತಿಭಟನೆ ವ್ಯಕ್ತಪಡಿಸಿದರು. ಕೊಲ್ಹಾಪುರ ಜಿಲ್ಲೆಯಲ್ಲಿ 15 00 ವಿದ್ಯಾರ್ಥಿಗಳು ಜೇಲ್ ಭರೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಿವಾಜಿ ವಿಶ್ವವಿದ್ಯಾಲಯದಲ್ಲೂ ಪರೀಕ್ಷಾ ಶುಲ್ಕ ಏರಿಕೆ ವಿರುದ್ಧ ಎಸ್.ಎಫ್.ಐ. ನೇತೃತ್ವದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಆಡಳಿತ ಕಟ್ಟಡದಲ್ಲಿ ಘೇರಾವೋ ನಡೆಸಿದರು.

ಮಾರ್ಚ್- 28 ನಿರುದ್ಯೋಗ ವಿರೋಧಿ ವಿಧಾನಸೌಧ ಚಲೋ

ಪುಟ 2ರಿಂದ

ಕಾರ್ಖಾನೆಗಳು ಬಾಗಿಲು ಮುಚ್ಚಿಕೊಂಡಿವೆ ಲಕ್ಷಲಕ್ಷ ಸಂಖ್ಯೆಯಲ್ಲಿ ಕಾರ್ಮಿಕರು, ನೌಕರರು ಉದ್ಯೋಗ ಕಳೆದುಕೊಂಡಿದ್ದಾರೆ. ಇದು ಕೊನೆ ಇಲ್ಲದಂತೆ ಮುಂದುವರಿದಿದೆ. ಈ ಮೊದಲೇ ಶಿಕ್ಷಣಕ್ಕೂ ಉದ್ಯೋಗಕ್ಕೂ ಸಂಬಂಧಿಸಿರದ ಶಿಕ್ಷಣ ವ್ಯವಸ್ಥೆ ಇದ್ದಿತ್ತಾದರೂ, ಅದರಲ್ಲಿ ಒಂದು ಭರವಸೆಯಾದರೂ ಇದ್ದಿತು. ಈಗ ನವೋದಯ ವಿದ್ಯಾಲಯಗಳು ತಲೆ ಎತ್ತುತ್ತಿರುವುದರಿಂದ ಉದ್ಯೋಗಕ್ಕೂ ಶಿಕ್ಷಣಕ್ಕೂ ಸಂಬಂಧವಿರದಂತೆ, ಶಿಕ್ಷಣ ಶ್ರೀಮಂತರಿಗೆ ಎಂಬಂತೆ ಪರಿವರ್ತಿಸಲಾಗುತ್ತಿದೆ. ವಿದ್ಯಾರ್ಥಿಗಳು ಕಾಪಿ ಮಾಡುವರೆಂಬ ವಿರೋಧಿ ಕೂಗು ಕೇಳುತ್ತಿದೆ. ಇನ್ನು ಮುಂದೆ ಕಾಪಿ ಮಾಡು, ಮಾಡದಿರು, ಪರೀಕ್ಷೆಗೆ ಕೂರಬಹುದು, ಕೂರದೇ ಇರಲೂಬಹುದು. ಸಂಬಳ ಜಾಸ್ತಿ ಬೇಕು, ಶಿಕ್ಷಕ ವೃತ್ತಿಯ ತರಬೇತಿಯಲ್ಲಿ ತೇರ್ಗಡೆಯಾಗಿದ್ದೇವೆ. ನೇಮಕಾತಿ ಮಾಡಬೇಕೆಂದು ಚಳುವಳಿ, ಇದ್ಯಾವ ಸಮಸ್ಯೆಗಳೂ ಮುಂದೆ ಬರದಿರಬಹುದು. ಕಂಪ್ಯೂಟರ್ ಶಿಕ್ಷಕರ ವೃತ್ತಿಯನ್ನು ಮಾಡಬಹುದಾಗಿದೆ.

ಭೂಮಾಲೀಕ ಬಂಡವಾಳಶಾಹಿ ಆಡಳಿತಗಾರರು ತಾವು ಉಳಿಯಬೇಕಾದರೆ, ಜನರ ಕಣ್ಣಿಗೆ ಮಣ್ಣೆರಚುವ ಆಕರ್ಷಕ ಘೋಷಣೆಗಳನ್ನು ಏಡುತ್ತಾರೆ. ಆದರೆ ಡಿ.ವೈ.ಎಫ್.ಐ. ಕೇಂದ್ರ ಮತ್ತು ರಾಜ್ಯ ಸಮಿತಿಗಳು ನಿರುದ್ಯೋಗ ಸಮಸ್ಯೆಯನ್ನು ಒರೆಗೆ ಹಚ್ಚಿ ನೋಡಬೇಕು ಮತ್ತು ನಿವಾರಣೆ, ಪರಿಹಾರಕ್ಕಾಗಿ ನಿರುದ್ಯೋಗ ವಿರೋಧಿ ಹೋರಾಟಗಳನ್ನು ಇತರ ಸಮಸ್ಯೆಗಳ ಜೊತೆಯಲ್ಲಿ ನಿರಂತರ ಹಾಗೂ ತೀವ್ರ ಮಾಡಬೇಕೆಂದು ಸ್ಪಷ್ಟಪಡಿಸಿರುತ್ತವೆ.

ನಿರುದ್ಯೋಗ ಸಮಸ್ಯೆಯು ವಿವಿಧ ರೂಪಗಳಲ್ಲಿ ಪ್ರಕಟಗೊಳ್ಳುತ್ತಿದೆ. ವಿವಿಧ ಕೋಮು, ಜಾತಿ, ಪ್ರಾಂತೀಯ ಶಕ್ತಿಗಳು ಇಂದು ಪ್ರತ್ಯೇಕ ಪ್ರತ್ಯೇಕವಾಗಿ ಎದುರು ಬದುರಾಗುತ್ತಿವೆ. ಮೀಸಲಾತಿಯ ವಿರೋಧ ಮತ್ತು ಪರವಾಗಿ ಆಗಾಗ ಭುಗಿಲೇಳುತ್ತಿವೆ. ಜಾತಿ ಜಾತಿಗಳ ಸಂಗಡಗಳು, ಭಾಷಾ ಸಂಕುಚಿತವಾದಿಗಳು ಭಾಷಾ ಧಾರ್ಮಿಕ ಅಲ್ಪ ಸಂಖ್ಯಾತರ ವಿರುದ್ಧ, ಹರಿಜನ, ಗಿರಿಜನ ಬುಡಕಟ್ಟುಗಳ ವಿರುದ್ಧ ಹಲ್ಲು ಮಸೆಯುವ ಸ್ಥಿತಿಗೆ ತಲುಪುತ್ತಿದ್ದಾರೆ.

ಈ ಸಂಕುಚಿತ ಶಕ್ತಿಗಳ ಹಿಂದೆ ಸಹಸ್ರ ಸಂಖ್ಯೆಯಲ್ಲಿ ದಿನದಿನವೂ ನಿರುದ್ಯೋಗಿಗಳೂ ವಿದ್ಯಾರ್ಥಿ ಯುವಜನರೂ ಹಾಗೂ ಇತರ ಜನರು ಸೇರುತ್ತಿದ್ದಾರೆ. ವರದಕ್ಷಿಣೆಯ ಸಾವುಗಳು, ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ.

ಉದ್ಯೋಗ ವಿನಿಮಯಕೇಂದ್ರಗಳಲ್ಲಿ ಎಲ್ಲಾ ವಿದ್ಯಾವಂತ ನಿರುದ್ಯೋಗಿಗಳು ನೊಂದಾವಣೆ ಮಾಡಿಕೊಂಡಿರುವುದಿಲ್ಲ. ಅಲ್ಲಿನ ಲಂಚ ಸ್ವಜನ ಪಕ್ಷಪಾತಗಳು, ಸೀನಿಯಾರಿಟಿಗಳನ್ನು ಕಡೆಗಣಿಸುವುದು, ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ವಿನಿಮಯ ಕೇಂದ್ರಗಳಿರುವುದು ಕಾರಣಗಳಾಗಿವೆ. ವಿನಿಮಯ ಕೇಂದ್ರಗಳನ್ನು ತಾಲ್ಲೂಕು ಹಾಗೂ ಬ್ಲಾಕ್ ಮಟ್ಟದಲ್ಲಿ ಪ್ರಾರಂಭಿಸಿದರೆ ನೊಂದಾವಣೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತದೆ. ವಿದ್ಯಾವಂತ ನಿರುದ್ಯೋಗಿಗಳನ್ನು ಅವರ ಡಿಗ್ರಿಗಳೊಂದಿಗೆ ದಾಖಲಿಸುವ "ನಿರುದ್ಯೋಗಿ ದಾಖಲಾತಿ" ಕೇಂದ್ರಗಳಿಗಿಂತ ಮಿಗಿಲಾದ ಯಾವ ಸಾಧನೆಯನ್ನೂ ಇವುಗಳು ಮಾಡದಿರುವುದನ್ನೂ ಇಲ್ಲಿ ಗಂಭೀರವಾಗಿ ಗಮನಿಸಬೇಕಾಗಿದೆ. ಅನಕ್ಷರಸ್ಥ ಹಳ್ಳಿಗಳ ಕೃಷಿ ಕೂಲಿಕಾರರನ್ನು ಸೇರಿಸಿಕೊಂಡರೆ, ಮತ್ತು ಅರೆ ಉದ್ಯೋಗಿಗಳನ್ನು ಗುತ್ತಿಗೆ ಕಾರ್ಮಿಕ, ನೌಕರರನ್ನು ಗಣಿಸುವುದಾದರೆ ಅದು 25 ಕೋಟಿಯನ್ನು ಮೀರುತ್ತದೆ.

ಉದ್ಯೋಗದ ವಯೋಮಿತಿ ಮೀರಿ ಯುವಜನರು ಮುಪ್ಪಾಗುತ್ತಿದ್ದಾರೆ. ವಯೋಮಿತಿಯೊಳಗೆ ಸರ್ಕಾರ ಉದ್ಯೋಗ ನೀಡಬೇಕಾಗುತ್ತದೆ. ಮತ್ತು ಉದ್ಯೋಗ ಸಿಗುವವರೆಗೆ ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ. ಇಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳ ಯುವಜನರ ಧೀರೋದ್ದಾತ ಹೋರಾಟಗಳನ್ನು ಸ್ಮರಿಸಿಕೊಳ್ಳಬೇಕು. ಅಲ್ಲಿ ನಿರುದ್ಯೋಗ ಭತ್ಯೆ ಪಡೆಯುತ್ತಿದ್ದಾರೆ. 1986ರಲ್ಲಿ ಕೇರಳದ ಯುವಜನರು ಡಿ.ವೈ.ಎಫ್.ಐ. ನೇತೃತ್ವದಲ್ಲಿ ನಡೆಸಿದ ಹೋರಾಟ ಚರಿತ್ರಾರ್ಹವಾಗಿದೆ. ನಿರುದ್ಯೋಗ ಭತ್ಯೆಗಾಗಿ ನಡೆದ ತಿಂಗಳ ಹೋರಾಟದಿಂದಾಗಿ ಕಾಂಗ್ರೆಸ್‌ನ ಕರುಣಾಕರನ್‌ರ ಸರ್ಕಾರ ಸ್ಥಗಿತವಾಗಿದ್ದಿತು. ತನ್ನೆಲ್ಲಾ ಕಾರ್ಯಕ್ರಮಗಳನ್ನು ರದ್ದುಪಡಿಸಿತು. ಘೇರಾವೋ, ರಸ್ತೆ ತಡೆ ಚಟುವಟಿಕೆಗಳಿಂದಾಗಿ ಮುಖ್ಯಮಂತ್ರಿ ಕರುಣಾಕರನ್ ಕಾರು ತ್ರಿವೇಂದ್ರಂ ನಗರದಲ್ಲಿ ವೇಗದ ಮಿತಿ ಮೀರಿ ಅಗ್ನಿಶಾಮಕ ದಳದಂತೆ ಗಂಟೆ ಹೊಡೆದುಕೊಂಡು ಗಂಟೆಗೆ 120 ಕಿ.ಮೀ. ವೇಗದಲ್ಲಿ ಹೋಗುತ್ತಿದ್ದಿತು.

ವಯೋಮಿತಿಯೊಳಗೆ ಉದ್ಯೋಗ ನೀಡದಿದ್ದಲ್ಲಿ, ವಯೋಮಿತಿಯನ್ನು ಹೆಚ್ಚಿಸಬೇಕಾಗುತ್ತದೆ. ಬೇಜವಾಬ್ದಾರಿ ಸರ್ಕಾರ ಹೆಚ್ಚಿಸಿಯೂ ದುರುಪಯೋಗ ಪಡೆಯುವ ಸನ್ನಾಹದಲ್ಲಿರುತ್ತಿದೆ ಎಂಬುದು ಇತ್ತೀಚೆಗಿನ ಒಂದು ಉದಾಹರಣೆಯನ್ನು ನೋಡಬಹುದು. ರಾಜ್ಯದಲ್ಲಿ ಉಪಾಧ್ಯಾಯರನ್ನು ನೇಮಿಸಿಕೊಳ್ಳಲು ಜಿ.ಪ. ಮೂಲಕ ಡಿ.ಎಲ್.ಆರ್.ಸಿ.ಗಳನ್ನು (ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ) ಸ್ಥಾಪಿಸಲಾಗಿದೆ. ಈ ನೇಮಕಾತಿ ಸಮಿತಿಗಳು ಟಿ.ಸಿ.ಹೆಚ್. ಮಾಡಿಕೊಂಡು ಹಲವು ವರ್ಷಗಳಿಂದ ಅಲೆಯುತ್ತಿರುವ ವರನ್ನು ಸೀನಿಯಾರಿಟಿಯಂತೆ ನೇಮಕ ಮಾಡುವುದಕ್ಕೆ ಬದಲಾಗಿ, ವಯೋಮಿತಿಯೊಳಗೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದಿದೆ. ಇದನ್ನು ಪ್ರತಿಭಟಿಸಿದ ಅಭ್ಯರ್ಥಿಗಳು ಡಿ.ವೈ.ಎಫ್.ಐ. ನೇತೃತ್ವದಲ್ಲಿ ರಾಯಚೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ತಡೆಯಾಜ್ಞೆ ತಂದಿರುತ್ತಾರೆ ರಾಯಚೂರಿನಲ್ಲಿ ಸಂಘಟಿತರಾಗಿ ಹೋರಾಟಕ್ಕಿಳಿದಿದ್ದಾರೆ. ಈಗ ಸರ್ಕಾರ ಇವರಿಗೆ ವಯೋಮಿತಿಯನ್ನು 38ಕ್ಕೆ ಏರಿಸಿದೆ. ಈ ಮಿತಿಯೊಳಗೆ ಉದ್ಯೋಗದ ಭರವಸೆ ಇರುವುದಿಲ್ಲ. ಮುಪ್ಪಾಗಿ ನಿರುದ್ಯೋಗಿಯೇ ಕೊನೆಯುಸಿರೆಳೆಯುವವರೆಗೂ ಸರ್ಕಾರ ವಯೋಮಿತಿಯನ್ನು ಹೆಚ್ಚಿಸುತ್ತಲೇ ಹೋಗಬಹುದು. ಇದೇ ಸ್ಥಿತಿ ಎಲ್ಲಾ ವಿಭಾಗಗಳಲ್ಲಿಯೂ ನಿಸ್ಸಂಶಯವಾಗಿಯೂ ಇರುತ್ತದೆ. ಅದನ್ನು ಗುರುತಿಸಿ ಸ್ಪಷ್ಟಪಡಿಸಿಕೊಂಡು ಹೋರಾಟ ನಡೆಸಬೇಕಿದೆ.

ಉದ್ಯೋಗ ತರಬೇತಿಯಲ್ಲಿ, ಟಿ.ಸಿ.ಹೆಚ್. ಅಲ್ಲದೆ, ಐ.ಟಿ.ಐ.ಗಳಲ್ಲೂ, ಬಾಲವಾಡಿ, ಅಂಗನವಾಡಿಗಳೂ, ಕಾರ್ಖಾನೆ, ಸರ್ಕಾರಿ ಕಛೇರಿಗಳಲ್ಲೂ ಮತ್ತು ಒರಿಗಾಲು ವೈದ್ಯರುಗಳೂ ಹೀಗೆ ವಿವಿಧ ರೂಪದಲ್ಲಿ ನಿರುದ್ಯೋಗಿಗಳಿದ್ದಾರೆ. ಇವರುಗಳಿಗೆ ಏಕರೂಪದ ಕಾರ್ಯಕ್ರಮ ನೀಡಿ ಹೋರಾಕ್ಕಿಳಿಸಬೇಕಿದ್ದರೆ, ಇವರುಗಳನ್ನು ಸಂಘಟಿಸುವತ್ತ ಮುಂದಾಗಬೇಕಿದೆ. ಈ ಜನ ವಿಭಾಗಗಳು ತೀವ್ರ ಆರ್ಥಿಕ ಸಂಕಟಗಳಲ್ಲಿ ಬಳಲುತ್ತಿದ್ದಾರೆ.

ರಾಜ್ಯಕ್ಕೆ ಕೇಂದ್ರ ಸರ್ಕಾರ ಹೆಚ್ಚು ಅನ್ಯಾಯವೆಸಗಿದೆ. ವಿಜಯನಗರ ಕಾರ್ಖಾನೆಗೆ ಬದಲಾಗಿ ವಿದ್ಯುತ್ ಸ್ಥಾವರ ಎಂದು ಹೇಳಿ ಜಾಫರ್ ಷರೀಫ್ ನಂತರ ಅಲ್ಲಗಳೆದಿದ್ದಾರೆ. ಅದರ ಉಸ್ತುವಾರಿಗಾಗಿ ವಾರ್ಷಿಕ ಬಜೆಟ್‌ನಲ್ಲಿ ಮೀಸಲಿರುಸುತ್ತಿದ್ದ ಹಣವನ್ನು ಕೇಂದ್ರ ಸರ್ಕಾರ ಕಮ್ಮಿ ಮಾಡಿದೆ. ಮಂಗಳೂರು ತೈಲಾಗಾರ ಪ್ರಾರಂಭದ ಹಂತದಲ್ಲಿಯೇ ಇದೆ. ಮೈಸೂರಿನಲ್ಲಿ ಆಗಬೇಕಿದ್ದ ಟಂಕ ಶಾಲೆ ಶುರು ಮಾಡಲು ಹಣವಿಲ್ಲವಾಗಿದೆ. ಉದ್ದೇಶಿತ ಬ್ರಾಡ್‌ಗೇಜ್ ಪರಿವರ್ತನೆ, ಹೊಸ ಲೈನುಗಳು ಬಜೆಟ್‌ನಲ್ಲಿ ಕಾಣೆಯಾಗಿವೆ. ಇನ್ನು ವಿದ್ಯುತ್ ಉತ್ಪಾದಕ ಹಾಗೂ ನೀರಾವರಿ ಯೋಜನೆಗಳು ಎಂದಿನಂತೆ ಯೋಜನೆಗಳಾಗಿಯೇ ಉಳಿದಿವೆ.

ನಿರುದ್ಯೋಗ ವಿರೋಧಿ ಹೋರಾಟವೆಂದರೆ, ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ಜನ ವಿಭಾಗಗಳನ್ನು ಸಂಘಟಿಸುವತ್ತ ಕಾರ್ಯಕ್ರಮ ರೂಪಿಸಿಕೊಂಡು ಅವಿಶ್ರಾಂತವಾಗಿ ಮುನ್ನಡೆ ಇಡುವ ಹಂತದಲ್ಲಿ, ರಾಜ್ಯದ ಎಲ್ಲಾ ಡಿ.ವೈ.ಎಫ್.ಐ. ಘಟಕಗಳು ಮಾರ್ಚ್ 28ರಂದು ಸಹಸ್ರಾರು ಯುವಜನರನ್ನು ವಿಧಾನಸೌಧದತ್ತ ಮುನ್ನುಗ್ಗಿಸುವ ಪೂರ್ವಭಾವಿ ಚಟುವಟಿಕೆಗಳಲ್ಲಿ ತೊಡಗಿವೆ.

ಎಸ್.ಶಿವರಾಂ

KRNW/BGS-312 MAG(2) PRB DECR 319-78/79

ಜನ ಸಿಡಿದೇಳಬೇಕು"

1ನೇ ಪುಟದಿಂದ

ನೀರಾವರಿ ಪ್ರದೇಶದ ರೈತರು ನೀರಾವರಿಯನ್ನು ಏಪ್ರಿಲ್ ಅಂತ್ಯದವರೆಗೂ ವಿಸ್ತರಿಸಬೇಕೆಂದು ಹೂಡಿರುವ ಚಳುವಳಿಯನ್ನು ಪ್ರಸ್ತಾಪಿಸಿ ತುಂಗಭದ್ರ ಜಲಾಶಯದ ಪ್ರದೇಶದಲ್ಲಿ ಉಂಟಾಗಿರುವ ಪರಿಸ್ಥಿತಿಯಿಂದ ಕರ್ನಾಟಕದ ರೈತರು ಅಂಧ್ರದ ರೈತರು ತೊಂದರೆಗೆ ಸಿಕ್ಕಿದ್ದಾರೆ. ಕಷ್ಟಪಟ್ಟು ಅವರು ಬೆಳೆದ ಬೆಳೆಗಳು ನೀರಿಲ್ಲದೆ ಒಣಗಿ ಲಕ್ಷಾಂತರ ರೂ. ನಷ್ಟವಾಗುವ ಸಂಭವವಿದೆ. ಈ ಪರಿಸ್ಥಿತಿಗೆ ಆಂಧ್ರದ ರೈತರು ಕಾರಣರಲ್ಲ, ಈ ಯೋಜನೆಯನ್ನು ಮೂಲದಲ್ಲಿ ಯೋಜಿಸಿದ ಬೃಹತ್ತಾದ ಗಾತ್ರದಲ್ಲಿ ಜಾರಿಗೆ ತರಲಿಲ್ಲ. ದುಡ್ಡಿಲ್ಲವೆಂದು ಕಡಿಮೆ ಖರ್ಚಿನಲ್ಲಿಯೇ ಯೋಜನೆ ಮುಗಿಸಲು ಜಲಾಶಯವನ್ನು ಕುಗ್ಗಿಸಿದುದರ ಫಲವನ್ನು ನಾವು ಇಂದು ಅನುಭವಿಸುತ್ತಿದ್ದೇವೆ ಎಂದ ಅವರು ಆದರೆ ನಮ್ಮ ದೇಶದ ಸರ್ಕಾರದಲ್ಲಿ ಬಿರ್ಲಾ, ಟಾಟಾ ಮುಂತಾದ ಗುತ್ತೇದಾರಿಗಳಿಗೆ ಹಣ ನೀಡಲು ಹೇರಳವಾದ ದುಡ್ಡಿದೆ. ಆದರೆ ನೀರಾವರಿ ಯೋಜನೆ ಮುಂತಾದವುಗಳಿಗೆ ಹಣ ಇಲ್ಲ ಎಂಬ ನೆಪ ಅಡ್ಡಿ ಬರುತ್ತದೆ ಎಂದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ಜಿ.ವಿ. ಶ್ರೀರಾಮರೆಡ್ಡಿಯವರು ತೆಲುಗಿನಲ್ಲಿ ಮಾತನಾಡಿ ಸ್ವಾತಂತ್ರ್ಯ ಬಂದ 42ವರ್ಷಗಳ ನಂತರವೂ ಉಳುವವನಿಗೆ ಭೂಮಿ ಎಂಬುದು ಕನಸಾಗಿದೆ. ಭೂಮಿ ಸಮಸ್ಯೆ ಪರಿಹಾರವಾಗದೆ ಉಳಿದಿದೆ ಎಂಬುದನ್ನು ವಿವರಿಸಿದರು. ಬಿಸಿಲು, ಮಳೆ, ಗಾಳಿಯಲ್ಲಿ ಕಷ್ಟಪಟ್ಟು ದುಡಿದು ರೈತರು ಬೆಳೆದ ಬೆಳೆಯ ಪರಿಸ್ಥಿತಿ ಹೇಗಿದೆ ಎಂದರೆ ಗ್ರಾಮಾಂತರಗಳಲ್ಲಿನ ಜನರಿಗೆ ವರ್ಷಕ್ಕೆ 2 ಜೊತೆ ಬಟ್ಟೆ ಕೊಳ್ಳುವ ಶಕ್ತಿಯೂ ಇಲ್ಲವಾಗಿದೆ. ರೈತ ದಿವಾಳಿಯಾಗುತ್ತಿದ್ದಾನೆ ಎಂದು ಅವರು ಹೇಳಿದರು. ರೈತರಿಗೆ ರಾಜಕೀಯ ಬೇಧವೆಣಿಸುವ ರೈತ ಸಂಘಗಳೂ ಇವೆ ಎಂದ ಅವರು ಇಂಥ ರೈತ ಸಂಘಗಳ ಉದ್ದೇಶವನ್ನು ಕುರಿತು ಎಚ್ಚರ ವಹಿಸಲು ಕರೆ ನೀಡಿದರು. ಶಾಸಕ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಕಾ|| ಆರ್.ವೆಂಕಟರಾಮಯ್ಯನವರು ಮಾತನಾಡಿ. ಭೂಮಿ ಸಮಸ್ಯೆ ಬಗ್ಗೆ ಜನತಾದಳ ಸರ್ಕಾರದ ಧೋರಣೆಯನ್ನು ಖಂಡಿಸಿದರು. ಸರ್ಕಾರಿ ಭೂಮಿಯನ್ನು ಉಳುವ ರೈತರಿಗೆ ಪಟ್ಟಿ ಕೊಡದಿದ್ದರೆ ಅದು ರೈತರ, ಜನ ಸಾಮಾನ್ಯರ ಕೋಪಕ್ಕೆ ತುತ್ತಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ತುಂಗಭದ್ರಾ ರೈತರಿಗೆ ಹೆಚ್ಚು ನೀರನ್ನು ನೀಡುವುದರ ಬಗ್ಗೆ ಕೂಡಾ ಜನತಾದಳ ಸರ್ಕಾರ ತಳೆಯುತ್ತಿರುವ ಅನಿಶ್ಚಯತೆಯ, ವಿಳಂಬದ ಧೋರಣೆಯನ್ನು ಖಂಡಿಸಿದರು. ತುಂಗಭದ್ರಾ ಜಲಾಶಯದ ಸಮಾಲೋಚನಾ ಸಮಿತಿ ನೀರಾವರಿಯನ್ನು ವಿಸ್ತರಿಸುವುದರ ಬಗ್ಗೆ ರೈತರ ಪರವಾದ ತೀರ್ಮಾನ ಕೈಗೊಳ್ಳದಿದ್ದರೆ ತೀವ್ರ ಚಳುವಳಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತ ಸಂಘದ ಮತ್ತೊಬ್ಬ ಉಪಾಧ್ಯಕ್ಷ ಭೀಮಸಿಕಲಾದಗಿ ಹಾಗೂ ಸಿ.ಐ.ಟಿ.ಯು.ನ ಕಾರ್ಯದರ್ಶಿಗಳಲ್ಲೊಬ್ಬರಾದ ಕಾ|| ಎನ್.ಕೆ.ಉಪಾಧ್ಯಾಯ ಮಾತನಾಡಿದರು.

ಮಾತನಾಡಿದ ಎಲ್ಲಾ ಭಾಷಣಕಾರರು ಹರಪನಹಳ್ಳಿಯಲ್ಲಿ ಸರ್ಕಾರಿ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ರೈತರ ಧೈರ್ಯ ಹಾಗೂ ಅವರ ಬೆಳೆಯನ್ನು ಭೂಮಿಯನ್ನು ನಾಶ ಮಾಡಬಂದ ಬುಲ್ಡೋಜರ್‌ನ್ನು ಹಿಂದೆ ಕಳುಹಿಸಿದ ಅವರ ದೃಢ ನಿರ್ಧಾರವನ್ನು ಶ್ಲಾಘಿಸಿದರು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ|| ಪರಶುರಾಂ ಹಾಗೂ ಜೊತೆಯ ಸಂಗಾತಿಗಳ ಮೇಲೆ ಅಲ್ಲಿಯ ಅರಣ್ಯಾಧಿಕಾರಿ, ತಹಶೀಲ್ದಾರ್ ಹಾಗೂ ಪೊಲೀಸ್ ಅಧಿಕಾರಿಗಳು ಶಾಮೀಲಾಗಿ ನಡೆಸುತ್ತಿರುವ ದಾಳಿಯನ್ನು ಹರಪ್ಪನಹಳ್ಳಿ ತಾ|| ಕೇಂದ್ರದ ಹಾಗೂ ತಾಲ್ಲೂಕಿನ ಪ್ರಮುಖ ಪಟ್ಟಭದ್ರ ಹಿತಾಸಕ್ತಿಗಳು ಒಡ್ಡಿರುವ ಕೊಲೆ ಬೆದರಿಕೆಯನ್ನು ಖಂಡಿಸಿದರು. ಈ ಭೂಮಿ ಹೋರಾಟವನ್ನು ತುಳಿಯುವ ಯಾವುದೇ ಪ್ರಯತ್ನ ಮಾಡಿದರೆ ಇಡೀ ರಾಜ್ಯದಾದ್ಯಂತ ಪ್ರತಿಭಟನೆ ಮೂಡಿಬರುತ್ತದೆ ಎಂದು ಎಚ್ಚರಿಕೆ ನೀಡಿದರು.

ಆರಂಭದಲ್ಲಿ ಕಾ|| ಪರಶುರಾಂ ಸ್ವಾಗತಿಸಿದರೆ ಕೊನೆಯಲ್ಲಿ ಕಾ|| ಯು. ಬಸವರಾಜ್ ಅಭಾರ ಮನ್ನಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ಚಂದ್ರಶೇಖರಬಾಳೆ ಹೊಸದಾಗಿ ಚುನಾಯಿತವಾದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮಂಡಲಿಯ ಪದಾಧಿಕಾರಿಗಳನ್ನು ಪರಿಚಯಿಸಿದರು.

ಅಭ್ಯಾಸ- ಹೋರಾಟದಿಂದ ಕೀರ್ತಿ ತನ್ನಿ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಸುರಪುರ ಕಛೇರಿಯಲ್ಲಿ ಅಂತಿಮ ವರ್ಷದ ಬಿ.ಎ. ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಉಪನ್ಯಾಸಕರಾದ ಡಿ.ಡಿ.ಪಾಟೀಲ, ಹಾಗೂ ನ್ಯಾಯವಾದಿ ಶ್ರೀ ಜೆ. ಅಗಸ್ಟಿನ್‌ರವರು ಮಾತನಾಡಿ ವಿದ್ಯಾರ್ಥಿಗಳು ಸಮಾಜದ ಪರಿವರ್ತನೆಗೆ ಹೋರಾಡುತ್ತಾ ಅತ್ಯುತ್ತಮ ರೀತಿಯಲ್ಲಿ ವ್ಯಾಸಂಗ ಮಾಡಿ ಸಂಘಟನೆಗೆ ಕೀರ್ತಿ ತರಬೇಕೆಂದು ಕರೆ ನೀಡಿದರು.

ವಿದ್ಯಾರ್ಥಿಗಳಾದ ಗುರು ಗೋನಾಲ, ಸೈಯದ್, ಇಬ್ರಾಹಿಂ, ಗಂಗಾಧರರವರು ಮಾತನಾಡಿ ಸಂಘಟನೆ ಬೆಳೆಸಲು ದುಡಿಯುವುದಾಗಿ ಪ್ರತಿಜ್ಞೆ ಕೈಗೊಂಡರು. ಉಪನ್ಯಾಸಕ ಶ್ರೀ ಮನುಗುರಿಕಾರ ಸಭೆಯ ಅಧ್ಯಕ್ಷತೆ ವಹಿಸಿದ್ದರು ಎಂದು ಶಾಖೆಯ ಕಾರ್ಯದರ್ಶಿ ರಾಯಣ್ಣಾ ಚೆನ್ನೂರ ತಿಳಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತ ಸಂಘದ ನೂತನ ಪದಾಧಿಕಾರಿಗಳು

ಅಧ್ಯಕ್ಷರು	:	ಪಿ.ರಾಮಚಂದ್ರರಾವ್
ಉಪಾಧ್ಯಕ್ಷರು	:	ಆರ್.ವೆಂಕಟರಾಮಯ್ಯ
	:	ಬೀಮಸಿಕಲಾದಗಿ
	:	ಎಸ್.ಎಚ್. ಕಪ್ಪಣ್ಣನವರ್
ಪ್ರಧಾನಕಾರ್ಯದರ್ಶಿ	:	ಚಂದ್ರಶೇಖರಬಾಳೆ
ಕಾರ್ಯದರ್ಶಿಗಳು	:	ಪಿ.ಜಗನ್ನಾಥ್
	:	ಅಬ್ರಹಾಂ ಕರ್ಕಡ
	:	ಮಾರುತಿ ಮಾನ್ಪಡೆ
ಖಜಾಂಚಿ	:	ಎಂ.ಎನ್.ಉಗ್ರಪ್ಪ

ಈ 9 ಜನ ಪದಾಧಿಕಾರಿಗಳನ್ನು ಒಳಗೊಂಡಂತೆ 31 ಜನ ಸದಸ್ಯರ ಕಾರ್ಯಕಾರಿ ಸಮಿತಿಯನ್ನು 71 ಸದಸ್ಯರ ರಾಜ್ಯ ಮಂಡಳಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳನ್ನಾಗಿ 9ನೇ ಸಮ್ಮೇಳನ ಚುನಾಯಿಸಿದೆ. 71 ಜನ ಮಂಡಳಿ ಸದಸ್ಯ ಸ್ಥಾನಗಳಲ್ಲಿ 68 ಜನ ಸದಸ್ಯರನ್ನು ಆರಿಸಿ 3ಜನ ಸದಸ್ಯ ಸ್ಥಾನಗಳನ್ನು ರೈತ ಸಂಘದ ಮುಂದಿನ ಬೆಳವಣಿಗೆಯ ದೃಷ್ಟಿಯಿಂದ ಕಾದಿರಿಸಲಾಗಿದೆ.

7ನೇ ಎಸ್.ಎಫ್.ಐ. ಸಮ್ಮೇಳನ

ಪುಟ 5 ರಿಂದ

ಅಧ್ಯಕ್ಷರಾಗಿದ್ದ ಕಾ|| ಜ್ಯೋತಿಬಸುರವರು ಎಲ್ಲರನ್ನು ಸ್ವಾಗತಿಸಿದರು. ಸುಪ್ರಿಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಓ.ಚಿನ್ನಪ್ಪರೆಡ್ಡಿಯವರು ಔಪಚಾರಿಕವಾಗಿ ಉದ್ಘಾಟಿಸಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತ್ರವಲ್ಲ, ಸಮ್ಮೇಳನ ಆರಂಭವಾಗುವ ಮೊದಲೇ ಅಂದರೆ ಫೆಬ್ರವರಿ 21ರಿಂದಲೇ ಆರಂಭಗೊಂಡ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಗರದಲ್ಲಿ ಸಾಂಸ್ಕೃತಿಕ ಉತ್ಸವದ ವಾತಾವಣ ಮೂಡಿಸಿದ್ದವು.

ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಸಾರಿಗೆ ಸಚಿವ ಕಾ|| ಶ್ರೀಮಲ್ ಚಕ್ರವರ್ತಿಯವರು ಹೇಳುವಂತೆ. "ಜನ ಎಲ್ಲದರಲ್ಲೂ ಪಾಲ್ಗೊಂಡು. ನಿಧಿ ನೀಡಿದರು. ಲಕ್ಷ ಲಕ್ಷ ಹೆಜ್ಜೆಗಳು ಹಾಕಿ ರ್‍ಯಾಲಿಗಳಾಗಿ ನಡೆದಾಡಿದರು" ಇಡೀ ನಗರವೇ ಸಮ್ಮೇಳನಕ್ಕೆ ಶೃಂಗಾರಗೊಂಡು ಸಜ್ಜಾಗಿತ್ತು. ಎಲ್ಲಾ ಆಯಾಮಗಳಲ್ಲೂ ಅರಳಿಕೊಂಡ ಸಮ್ಮೇಳನದ ಈ ಕಾರ್ಯಕ್ರಮಗಳು ರೆಡಿಯಾಗಿ ಆಕಾಶಕೇರಿ ವರ್ಣರಂಜಿತವಾಗಿ ಬಿಚ್ಚಿಕೊಂಡು ಉತ್ಸಾಹದ ಬುಗ್ಗೆಗಳಾಗಿ ನೆಲಕ್ಕಿಳಿಯುವ ಗಾಢ ಅನುಭವಗಳೊಂದಿಗೆ ಸಮಾರಂಭವನ್ನು ಸಮಾರೋಪಿಸಲಾಯಿತು. ಎಲ್ಲಾ ಯಶಸ್ಸಿಗೆ ಶ್ರಮಿಸಿದ ಪ್ರಜಾಸತ್ತಾತ್ಮಕ ಜನವಿಭಾಗ, ಮುಖ್ಯವಾಗಿ ಹಗಲಿರುಳೂ ಒಂದೇ ಸ್ಫೂರ್ತಿಯಲ್ಲಿ ಶ್ರಮಿಸಿದ ಸ್ವಯಂ ಸೇವಕ ಸಂಗಾತಿಗಳ ಪರಿಶ್ರಮ ಶ್ಲಾಘನೀಯವಾಗಿತ್ತು.

ನೆರವಾಗುವವರು...

ಪುಟ 1ರಿಂದ

ಎಂದಿದ್ದರು ವಿ.ಪಿ.ಸಿಂಗ್. ಆಗ ಬಿ.ಜೆ.ಪಿ. ಮುಖಂಡರು ತಮಗೆ ಯಾರ ಅಪ್ಪಣೆಯೂ ಬೇಕಿಲ್ಲ ಎಂದರು. ಹೌದು. ಮಹಾರಾಷ್ಟ್ರದಲ್ಲಿ ಶಿವಸೇನೆಯೊಂದಿಗೆ ಮೈತ್ರಿಯ ಕಾರ್ಯತಂತ್ರದಿಂದ ಅವರನ್ನು ವಿಚಲಿತಗೊಳಿಸುವುದು ಯಾರಿಂದಲೂ ಸಾಧ್ಯವಿಲ್ಲ.

ದೇಶದ ಬೇರೆಡೆ ಅದರ ತಂತ್ರವೇನು? ಸಾಧ್ಯವಾದಷ್ಟು ಹೆಚ್ಚು ರಾಜ್ಯಗಳಲ್ಲಿ ತಮಗೆ ಅನುಕೂಲಕರವಾದ ರೀತಿಯಲ್ಲೇ ಚುನಾವಣಾ ಮೈತ್ರಿ ತಮ್ಮ ಗುರಿ ಎಂಬುದರ ಬಗ್ಗೆ ಬಿ.ಜೆ.ಪಿ. ಮುಖಂಡರು ಈಗಾಗಲೇ ಸಂಕೇತ ನೀಡಿದ್ದಾರೆ. ಉದಾ: ಬಿ.ಜೆ.ಪಿ. ಮತ್ತು ಜನತಾದಳ ಬಲವಾದ ಬೆಂಬಲ ಪಡೆದಿರುವ ರಾಜ್ಯ ಉತ್ತರಪ್ರದೇಶ ಎಂದು ಹೇಳಲಾಗುತ್ತಿದೆ. ಇಲ್ಲಿ 85 ರಲ್ಲಿ ಕನಿಷ್ಠ 35 ಸ್ಥಾನಗಳಾದರೂ ತನಗೆ ಅತ್ಯಗತ್ಯ ಎಂದಿದೆ ಬಿ.ಜೆ.ಪಿ. ವಿಶ್ವ ಹಿಂದೂ ಪರಿಷತ್‌ನಂತಹ ಹಿಂದೂ ಸಂಕುಚಿತವಾದಿ ಸಂಘಟನೆಗಳ ಬೆಂಬಲದಿಂದ ಹಿಂದೂ ಮತ ಕ್ರೋಢೀಕರಿಸಬಹುದೆಂಬ ಎಣಿಕೆ ಅವರದ್ದು.

ಬಿ.ಜೆ.ಪಿ. ಇನ್ನೂ ತನ್ನ ತಂತ್ರ ಬಯಲುಪಡಿಸಿಲ್ಲ. ಆದರೆ ಆರ್.ಎಸ್.ಎಸ್. ಪ್ರಧಾನ ಕಾರ್ಯದರ್ಶಿ ಪ್ರೊ|| ರಾಜೇಂದ್ರ ಸಿಂಗ್ "ರಾಮಜನ್ಮ ಭೂಮಿಯನ್ನು ಹಿಂದೂಗಳಿಗೆ ಮತ್ತೆ ಒಪ್ಪಿಸುವ, ಮತಾಂತರ ವಿರೋಧಿಸುವ" ಪಕ್ಷಗಳನ್ನು ಮಾತ್ರ ಆರ್.ಎಸ್.ಎಸ್. ಬೆಂಬಲಿಸುವುದೆಂದು ಮಾರ್ಚ್ 6ರಂದು ಅಮೃತಸರದಲ್ಲಿ ತಿಳಿಸಿದ್ದಾರೆ. ಆರ್.ಎಸ್.ಎಸ್. ನೇರವಾಗಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಆದರೆ ಬಿ.ಜೆ.ಪಿ. ಹಾಗೂ ಮೇಲೆ ಹೇಳಿದ ಎರಡು ಬೇಡಿಕೆಗಳನ್ನು ಬೆಂಬಲಿಸುವ ಯಾವುದೇ ಅಭ್ಯರ್ಥಿಗಳಿಗೆ ಬೆಂಬಲ ನೀಡುತ್ತದೆಂದೂ ಅವರು ಹೇಳಿದ್ದಾರೆ.

ಹೀಗೆ ಬಿ.ಜೆ.ಪಿ. ಈಗ ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ವಿರೋಧವಾದ ಹಿಂದೂ ಸಂಕುಚಿತವಾದದ ಪ್ರಮುಖ ಪ್ರತಿನಿಧಿಯಾಗಿ, ವಕ್ತಾರನಾಗಿ ಹೆಚ್ಚೆಚ್ಚು ಬಯಲಿಗೆ ಬರುತ್ತಿದೆ. ಇಂತಹ ಪಕ್ಷದೊಂದಿಗೆ ನೇರ ಅಥವಾ ಪರೋಕ್ಷ ಸಂಬಂಧಗಳನ್ನು ಪ್ರಗತಿಪರ ಜನಗಳು ಖಂಡಿಸುತ್ತಾರೆ, ತಿರಸ್ಕರಿಸುತ್ತಾರೆ. ಇಂತಹ ಪಕ್ಷಕ್ಕೆ ರಾಷ್ಟ್ರೀಯ ರಂಗ, ಜನತಾದಳದಂತಹ ಪಕ್ಷಗಳು ಹೆಚ್ಚೆಚ್ಚು ನೇರ ವಿರೋಧ ತೋರಿದಷ್ಟು ಅವು ದೇಶದ ಹೆಚ್ಚೆಚ್ಚು ಪ್ರಗತಿಪರ ವಿಭಾಗಗಳ ಹೃದಯ ಗೆದ್ದುಕೊಳ್ಳಲು ಸಾಧ್ಯ. ಆದ್ದರಿಂದಲೇ ಬಿ.ಜೆ.ಪಿ. ಮತ್ತು ಅಂತಹ ಪಕ್ಷಗಳೊಂದಿಗೆ ಮಿತ್ರತ್ವ ಅಥವಾ ಹೊಂದಾಣಿಕೆಯ ಯಾವುದೇ ಯೋಚನೆಯನ್ನು ನಿಲ್ಲಿಸಿ ಅವುಗಳನ್ನು ಯಾವ ರಾಜಿಗೂ ಅವಕಾಶವಿಲ್ಲದಂತೆ ವಿರೋಧಿಸಬೇಕೆಂದು ಸಿ.ಪಿ.ಐ.(ಎಂ) ರಾಷ್ಟ್ರೀಯ ರಂಗ ಮತ್ತು ಜನತಾದಳಕ್ಕೆ ಕರೆ ನೀಡುತ್ತಿರುವುದು.

('ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯದಿಂದ)

ನಮಗೊಬ್ಬ ರಾಜ್ಯಪಾಲರ ಅಗತ್ಯವಿದೆಯೇ ?

ದಿ. ೧೩-೩-೧೯೮೯ರಂದು ಸಂಜೆ ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸಭಾಂಗಣದಲ್ಲಿ ಅಖಿಲ ಭಾರತ ವಕೀಲರ ಸಂಘವು 'ರಾಜ್ಯಪಾಲರ ನೇಮಕಾತಿ ಮತ್ತು ಪಾತ್ರ' ಎಂಬ ವಿಷಯದ ಕುರಿತು ಏರ್ಪಡಿಸಿದ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿಯವರ ಲಿಖಿತ ಭಾಷಣದ ಶಿರೋನಾಮೆ ಇದಾಗಿತ್ತು. ಕರ್ನಾಟಕದ ರಾಜ್ಯಪಾಲರಾದ ಪಿ.ವೆಂಕಟಸುಬ್ಬಯ್ಯನವರ ರಾಜೀನಾಮೆ ವದಂತಿ ದಟ್ಟವಾಗಿರುವಾಗಲೇ ರಾಜಧಾನಿಯಲ್ಲಿ ಜರುಗಿದ ವಿಚಾರ ಗೋಷ್ಠಿಯು ವಿಶೇಷ ಮಹತ್ವ ಪಡೆದಿತ್ತು.

ಕಳೆದ ನಾಲ್ಕು ದಶಕಗಳಲ್ಲಿ ರಾಜ್ಯಪಾಲರ ಸ್ಥಾನ-ಮಾನದ ಕುರಿತ ವಿವಾದದ ಬಗ್ಗೆ ವಿಶ್ಲೇಷಿಸುತ್ತಾ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಆಡಳಿತ ಪಕ್ಷವು ತನ್ನ ಸಕ್ರಿಯ ಮುಂದಾಳುಗಳನ್ನು ರಾಜ್ಯಪಾಲರಾಗಿ ನೇಮಿಸುತ್ತಾ ಬಂದಿರುವುದನ್ನು ಶ್ರೀ ಬೊಮ್ಮಾಯಿಯವರು ತೀವ್ರವಾಗಿ ಟೀಕಿಸಿದರು. ರಾಜ್ಯಪಾಲರ ಆಯ್ಕೆಯ ಬಗ್ಗೆ ಸಂಬಂಧಪಟ್ಟ ರಾಜ್ಯದ ಮುಖ್ಯಮಂತ್ರಿಯೊಡನೆ ಸಮಾಲೋಚಿಸಬೇಕೆಂದು ಒತ್ತಾಯಿಸಿದ ಅವರು ಸೂಕ್ತ ರೀತಿಯಲ್ಲಿ ಚರ್ಚಿಸದೆ ಕೇವಲ ಟೆಲಿಫೋನಿನ ಮೂಲಕ ನೇಮಕಾತಿಯ ನಿರ್ಧಾರವನ್ನು ತಿಳಿಸುವ ಪ್ರವೃತ್ತಿಯನ್ನು ಖಂಡಿಸಿದರು. ರಾಷ್ಟ್ರಪತಿಯವರ ಆಡಳಿತವನ್ನು ಹೇರುವುದನ್ನು ಸಂಪೂರ್ಣವಾಗಿ ವಿರೋಧಿಸಿದ ಬೊಮ್ಮಾಯಿಯವರು ಸಂವಿಧಾನದ 35 6ನೇ ವಿಧಿಗೆ ಸೂಕ್ತ ತಿದ್ದುಪಡಿಯಾಗಬೇಕೆಂದು ಒತ್ತಾಯಿಸಿದರು. ರಾಜ್ಯಪಾಲರು ತಮ್ಮ ಐದು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸುವ ಬದಲು ವರ್ಗಾವಣೆ ಮಾಡುವ ಅಥವಾ ಹಿಂದೆ ಕರೆಸಿಕೊಳ್ಳುವ ವಿಧಾನವು ಒಬ್ಬ ಸಾಮಾನ್ಯ ಕೇಂದ್ರ ಸರ್ಕಾರಿ ನೌಕರನನ್ನು ನಡೆಸಿಕೊಳ್ಳುವುದಕ್ಕಿಂತಲೂ ಕಡೆಯಾಗಿದೆಯೆಂದು ಟೀಕಿಸಿದರು. ಸರ್ಕಾರಿಯಾ ಆಯೋಗವು ವರದಿ ಸಲ್ಲಿಸಿದ ಒಂದು ವಾರದೊಳಗೇ ಆಯೋಗದ ಶಿಫಾರಸ್ಸುಗಳಿಗೆ ವ್ಯತಿರಿಕ್ತವಾಗಿ ಕೇಂದ್ರ ಆಡಳಿತ ಪಕ್ಷದಲ್ಲಿ ಇತ್ತೀಚಿನವರೆಗೆ ಸಕ್ರಿಯ ಮುಂದಾಳುಗಳಾಗಿರುವುದು ಮಾತ್ರವಲ್ಲದೇ ಮುಂಬರುವ ದಿನಗಳಲ್ಲಿ ತಮ್ಮ ರಾಜ್ಯದಲ್ಲಿ ಅಥವಾ ಕೇಂದ್ರದಲ್ಲಿ ಉನ್ನತ ಸ್ಥಾನ ಏರಬಯಸುವ ನಾಲ್ವರು ರಾಜಕಾರಣಿಗಳನ್ನು ಕೇಂದ್ರ ಸರ್ಕಾರವು ರಾಜ್ಯಪಾಲರುಗಳಾಗಿ ನೇಮಿಸಿರುವುದನ್ನು ಪ್ರಸ್ತಾಪಿಸಿದರು.

ಇದೀಗ ಶ್ರೀಮಾನ್ ಪಿ.ವೆಂಕಟಸುಬ್ಬಯ್ಯನವರ ರಾಜೀನಾಮೆಯು ಬಹಿರಂಗಗೊಂಡಿದ್ದು ಅವರು ಆಂಧ್ರಪ್ರದೇಶದ ಪ್ರದೇಶ ಕಾಂಗ್ರೆಸ್(ಐ) ಅಧ್ಯಕ್ಷರಾಗಿ ನೇಮಕಗೊಳ್ಳಲಿರುವ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಇದರಿಂದ ಕಾಂಗ್ರೆ ಪಕ್ಷವು ತನ್ನ ಮುಖ್ಯಮಂತ್ರಿಗಳು ಹಾಗೂ ಪ್ರದೇಶ ಸಮಿತಿ ಅಧ್ಯಕ್ಷರನ್ನು ನೇಮಿಸುವ ಅಥವಾ ವಜಾ ಮಾಡುವ ರೀತಿಯಲ್ಲಿ ರಾಜ್ಯಪಾಲರ ಕುರಿತು ನಡೆದುಕೊಳ್ಳುತ್ತಿದೆ ಎಂಬುದು ಪ್ರತಿಯೊಬ್ಬ ಶ್ರೀಸಾಮಾನ್ಯನಿಗೂ ಅರ್ಥವಾಗುತ್ತದೆ.

ಪ್ರಮುಖ ಭಾಷಣಕಾರರಾಗಿದ್ದ ರಾಷ್ಟ್ರೀಯ ಕಾನೂನು ಶಾಲೆಯ ನಿರ್ದೇಶಕರಾದ ಡಾ|| ಮಾಧವಮೆನನ್‌ರವರು ವಿವಿಧ ರಾಜಕೀಯ ಪಕ್ಷ, ಮುಖ್ಯಮಂತ್ರಿಗಳ ಹಾಗೂ ತಜ್ಞರ ಅಭಿಪ್ರಾಯದ ಆಧಾರದಲ್ಲಿ ಸರ್ಕಾರಿಯಾ ಆಯೋಗವು ಸಲ್ಲಿಸಿರುವ ವರದಿಯ ಶಿಫಾರಸುಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದರು. ರಾಜ್ಯಪಾಲರ ಪಾತ್ರದ ಬಗ್ಗೆ ವಿಶ್ಲೇಷಿಸುತ್ತಾ ಪಶ್ಚಿಮ ಬಂಗಾಳ ಮತ್ತು ಕೇರಳದ ರಾಜ್ಯಪಾಲರು ರಾಜ್ಯ ಸರ್ಕಾರದ ಶಿಫಾರಸ್ಸುಗಳನ್ನು ಉಲ್ಲಂಘಿಸುತ್ತಿರುವ ಉದಾಹರಣೆಗಳನ್ನು ನೀಡಿ ರಾಷ್ಟ್ರಪತಿಯವರ ರೀತಿಯಲ್ಲಿ, ರಾಜ್ಯಪಾಲರು ಸಹ ಆಯಾ ಮಂತ್ರಿಮಂಡಲದ ಸಲಹೆಗಳಿಗನುಗುಣವಾಗಿ ನಡೆಯಬೇಕೆಂದು ಅಭಿಪ್ರಾಯಪಟ್ಟರು. ರಾಷ್ಟ್ರಪತಿ ಆಡಳಿತವನ್ನು ಹೇರಿದ ಸಂದರ್ಭದಲ್ಲಿ, ಇದಕ್ಕೆ ಸಂಬಂಧಿಸಿದ ರಾಜ್ಯಪಾಲರ ವರದಿಯ ನ್ಯಾಯಬದ್ಧತೆಯ ಬಗ್ಗೆ ಸಂಸತ್ತು ಮತ್ತು ವಿಮರ್ಶೆಗೆ ಅವಕಾಶವಿರಬೇಕೆಂದು ಪ್ರತಿಪಾದಿಸಿದರು.

ಕಾರ್ಮಿಕ ನಾಯಕರಾದ ಕಾ|| ಎಂ.ಸಿ. ನರಸಿಂಹನ್ ಮಾತನಾಡುತ್ತಾ 195 9ರಲ್ಲೇ ಕೇರಳದಲ್ಲಿ ಅಧಿಕಾರದಲ್ಲಿದ್ದ ಕಾ|| ಇ.ಎಂ.ಎಸ್. ನಂಬೂದರಿಪ್ಪಾಡ್‌ರವರ ನೇತೃತ್ವದ ಸರ್ಕಾರವನ್ನು ವಜಾ ಮಾಡಿ ರಾಜ್ಯಪಾಲರ ಹುದ್ದೆಯನ್ನು ದುರುಪಯೋಗಪಡಿಸಿದ್ದನ್ನು ಪ್ರಸ್ತಾಪಿಸಿದರು. 1967ರ ನಂತರ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಅಧಿಕಾರಕ್ಕೆ ಬಂದ ಕಾರಣ ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆಯು ತೀವ್ರ ಸ್ವರೂಪವನ್ನು ತಳೆದಿದೆ ಎಂದು ಅಭಿಪ್ರಾಯಪಟ್ಟರು. ವಿರೋಧ ಪಕ್ಷಗಳ ನೇತೃತ್ವದ ಸರ್ಕಾರಗಳ ಮಸೂದೆಗಳಿಗೆ ಅಂಗೀಕಾರ ನೀಡುವಲ್ಲಿ ಸಹ ಸಂವಿಧಾನದ 200 ಮತ್ತು 201ನೇ ವಿಧಿಯನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆಯೆಂದು ಟೀಕಿಸಿದರು.

ಬಿ.ಎಂ.ಎಸ್. ಕಾನೂನು ಕಾಲೇಜಿನ ಕಾನೂನು ಅಧ್ಯಯನ ನಿರ್ದೇಶಕರಾದ ಪ್ರೊ|| ಬಿ.ವೆಂಕಟಪ್ಪನವರು ಸಹ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು. ಶ್ರೀ ಎಸ್.ವಿ. ರಾಘವಾಚಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ವಕೀಲರಾದ ಶ್ರೀ ಜಾವೇದ್ ರಹೀಂ ಸ್ವಾಗತಿಸಿದರು. ಶ್ರೀ ಹೆಚ್.ಕೆ.ವಾಸುದೇವರೆಡ್ಡಿಯವರು ವಿಷಯ ಪ್ರಸ್ತಾಪಿಸಿ ಮಾತನಾಡಿದರು.ಬಿ. ಎಲ್. ಹೇಮವತಿ ವಂದಿಸಿದರು.

ವರದಿ; ಎಸ್.ಆರ್.ಆರಾಧ್ಯ

Printed and published by P. RAMACHANDRA RAO on behalf of Communist Party of India (Marxist), Karnataka State Committee, L-56, K.V. Temple Street, Sulthanpet, Bangalore- 560053. Phone No. 75331 Editor: P. RAMACHANDRA RAO Managing Editor: N.K. UPADHYAYA managerial Office: C/O Kriya Prakashana, Shobha Lodge Complex, 5th Main Road, Gandhinagar, Bangalore-560009